ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2011
ಬೆಲೆ ರೂ. 1.



## ಶ್ರೀಮಂತ ಅನುಭವದ ಧೀಮಂತ ವ್ಯಕ್ತಿ
## ಎನ್.ಜೆ. ಕಾಮತ್

ಅಭಿನಂದನೆ

# ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಶ್ರೀ ಡಿ.ವಿ. ಸದಾನಂದ ಗೌಡ



ಹೆಸರಿನಂತೆಯೇ ಸದಾ ಆನಂದ ಹೊರ ಸೂಸುವಂಥ ತುಂಬು ನಗೆಯ, ಮೆಲು ಮಾತಿನ ಸದಾನಂದ ಗೌಡ ತನ್ನ ಮಾತುಗಾರಿಕೆಯಿಂದಲೇ ಎಲ್ಲರನ್ನೂ ಮೋಡಿ ಮಾಡುತ್ತ ಅಜಾತ ಶತ್ರುವಾಗಿ ಬೆಳೆದವರು. ರಾಜಕಾರಣದ ಗರಡಿಯಲ್ಲಿ ಸವಾಲಿನ ಸಂದರ್ಭ ಬಂದಾಗ ದೃಢವಾಗಿ ನಿಂತು ಎದುರಿಸಿದವರೇ ಹೊರತು ಮಣಿದು ಹಿಂದೆ ಸರಿದವರಲ್ಲ ಎನ್ನುವುದು ಅವರು ರಾಜ್ಯ ಬಿಜೆಪಿ ಘಟಕಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದಾಗ ರುಜುವಾತಾದ ವಾಸ್ತವ. ಕರ್ನಾಟಕವನ್ನು ಇನ್ನೆರಡು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುನ್ನಡೆಸುವ ಹೊಣೆಯನ್ನು ಅದೇ ನಗೆ, ಮೆಲು ಮಾತುಗಳ ಹಿಂದಿನ ದೃಢಮನ, ನಿರ್ಧಾರಗಳಿಂದ ನಿಭಾಯಿಸುವರೆನ್ನುವುದು ಅವರನ್ನು ಬಲ್ಲವರೆಲ್ಲರ ವಿಶ್ವಾಸ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆ ಕೋಲು ಗ್ರಾಮದಲ್ಲಿ ವೆಂಕಪ್ಪ ಗೌಡ ಮತ್ತು ಕಮಲಾ ದಂಪತಿಯ ಪುತ್ರನಾಗಿ 1953ರಲ್ಲಿ ಡಿ.ವಿ. ಸದಾನಂದ ಗೌಡ ಜನಿಸಿದರು.

ಪುತ್ತೂರು ತಾಲೂಕಿನ ಕೆಯ್ಯೂರು ಮತ್ತು ಸುಳ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದರು. ಪುತ್ತೂರು ಸಂತ ಫಿಲೋಮಿನಾ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ, ಉಡುಪಿ ವೈಕುಂಠ ಬಾಳಿಗಾ ಕಾನೂನು ಮಹಾ ವಿದ್ಯಾಲಯದಲ್ಲಿ ಕಾನೂನು ಪದವಿ ಪಡೆದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಚುನಾವಣೆಗೆ ನಿಂತು ಗೆದ್ದರು. ಅವಿಭಜಿತ ದ.ಕ. ಜಿಲ್ಲಾ ಅ.ಭಾ.ವಿ.ಪ. ಕಾರ್ಯದರ್ಶಿ ಹುದ್ದೆಯ ಜವಾಬ್ದಾರಿಯನ್ನು ಕೂಡಾ ನಿರ್ವಹಿಸಿದರು.

1976ರಲ್ಲಿ ಪುತ್ತೂರು ಮತ್ತು ಸುಳ್ಯದಲ್ಲಿ ವಕೀಲ ವೃತ್ತಿ ಆರಂಭಿಸಿದ ಡಿ.ವಿ. ಸದಾನಂದ ಗೌಡ ಪುತ್ತೂರಿನ ಹಿರಿಯ ನ್ಯಾಯವಾದಿ ಯು.ಪಿ. ಶಿವರಾಮ ಗೌಡರ ಬಳಿ ಕಿರಿಯ ನ್ಯಾಯವಾದಿಯಾಗಿ ವೃತ್ತಿ ಜೀವನದ ಅನುಭವ ಕಲಿತರು. ಬಳಿಕ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಒಂದು ವರ್ಷ ಕಾಲ ಸಹಾಯಕ ಸರಕಾರಿ ಅಭಿಯೋಜಕರಾಗಿ ಕೆಲಸ ನಿರ್ವಹಿಸಿದ ಅವರು ನ್ಯಾಯಾಂಗ ಇಲಾಖೆಯ ಉನ್ನತ ಹುದ್ದೆಗೆ ಏರುವ ಎಲ್ಲ ಅವಕಾಶಗಳನ್ನು ನಿರಾಕರಿಸಿ ಬಿಜೆಪಿಯ ತತ್ವಗಳಿಗೆ ಬದ್ಧರಾಗಿ ಸರಕಾರಿ ಸೇವೆಯನ್ನು ತೊರೆದರು.

2 ಬಾರಿ ಪುತ್ತೂರಿನ ಶಾಸಕರಾಗಿ ಗೆಲುವಿನ ಯಾತ್ರೆಯನ್ನು ಮುಂದುವರಿಸಿದ ಡಿ.ವಿ. ಸದಾನಂದ ಗೌಡ 2004ರಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪ್ರಥಮ ಯತ್ನದಲ್ಲಿಯೇ ಲೋಕಸಭೆಗೆ ಆಯ್ಕೆಯಾದರು. 2005ರಲ್ಲಿ ಕೇಂದ್ರ ಕಾಫಿ ಮಂಡಳಿಯ ನಿರ್ದೇಶಕರಾಗಿ ನೇಮಕಗೊಂಡರು. 2007ರಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಇವರ ಅಧ್ಯಕ್ಷತೆಯ ಅವಧಿಯಲ್ಲಿ 2008ರಲ್ಲಿ ದಕ್ಷಿಣ ಭಾರತದಲ್ಲಿಯೇ ಪ್ರಥಮ ಬಾರಿಗೆ ಬಿಜೆಪಿ ಸರಕಾರ ಕರ್ನಾಟಕದಲ್ಲಿ ಆಡಳಿತಕ್ಕೆ ಬಂದಿತು. 2009ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಡಿ.ವಿ. ಸದಾನಂದ ಗೌಡ ಅವರು ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಎರಡನೇ ಬಾರಿಗೆ ಸಂಸದರಾಗಿ ಗೆಲುವು ಸಾಧಿಸಿದರು.

ಸಂಸದರಾದ ಡಿ.ವಿ. ಸದಾನಂದ ಗೌಡ ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದಾರೆ. 6 ರಾಜ್ಯಗಳ ಪಕ್ಷದ ಸಂಘಟನಾ ಹೊಣೆಯನ್ನು ನಿರ್ವಹಿಸಿದ್ದಾರೆ.

**ಕರ್ನಾಟಕದ 26ನೇ ಮುಖ್ಯಮಂತ್ರಿಯಾಗಿ ಶ್ರೀ ಡಿ.ವಿ. ಸದಾನಂದ ಗೌಡ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಅವರ ಆಡಳಿತಾವಧಿಯಲ್ಲಿ ಕರ್ನಾಟಕದ ಅಭಿವೃದ್ಧಿ, ಏಳಿಗೆ ಉತ್ತುಂಗಕ್ಕೆ ಬೆಳೆಯಲಿ; ಕರ್ನಾಟಕದ ಘನತೆ ರಾಷ್ಟ್ರಾದ್ಯಂತ ಬೆಳಗಲಿ ಎಂದು ಶುಭ ಹಾರೈಸುತ್ತೇವೆ.**

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಅಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**ಮುಖಪುಟ ಚಿತ್ರ**
ಆನಂದ ಈಶ್ವರಪ್ಪ ಮುರಗೋಡ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ
ಸಂಪುಟ 21 ಸಂಚಿಕೆ 11
ಆಗಸ್ಟ್ 2011, ಬೆಲೆ ರೂ. 1

# ಮನದ ಮಾತು

ಕಳೆದ ಮೂರು ವರ್ಷಗಳಿಂದ ಒಂದಲ್ಲ ಒಂದು ತಕರಾರುಗಳಿಂದ ತಡಬಡಾಯಿಸಿದ್ದ ಕರ್ನಾಟಕ ಸರ್ಕಾರ ಈಗ ನೂತನ ಮುಖ್ಯಮಂತ್ರಿಗಳನ್ನು ಕಂಡಿದೆ. ಕರ್ನಾಟಕದಂತಹ ಸುಂದರ ಹೆಸರು ಮಾಧ್ಯಮಗಳಲ್ಲಿ 'ಕರ್–ನಾಟಕ'ವಾಗಿ ಪರಿಣಮಿಸಿ ಅಲ್ಲಿ ನಡೆಯುತ್ತಿದ್ದಂತಹ ವಿದ್ಯಮಾನಗಳು ನಾಡಿನ ಘನತೆಯನ್ನು ಕುಗ್ಗಿಸಿದವು. ಸದಾ ಸಂಘರ್ಷಗಳಲ್ಲಿ ಹೇಗೋ ಪಾರಾಗಿ ಹೊರ ಬರುತ್ತಿದ್ದ ಶ್ರೀ ಬಿ.ಎಸ್. ಯಡ್ಯೂರಪ್ಪನವರು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಿದ್ದಾರೆ. ಇದಕ್ಕೆ ಕಾರಣ ಲೋಕಾಯುಕ್ತ ಶ್ರೀ ಸಂತೋಷ್ ಹೆಗಡೆ ಅವರ ವರದಿ. ಈಗ ಮುಖ್ಯಮಂತ್ರಿಗಳಾಗಿರುವ ಶ್ರೀ ಡಿ.ವಿ. ಸದಾನಂದ ಗೌಡರು ಇನ್ನು ಮುಂದಾದರೂ ಸಂಘರ್ಷ ಮುಕ್ತ ಸರ್ಕಾರವನ್ನು ಜನ ಕಾಣುವಂತೆ ಕರ್ತವ್ಯ ನಿರ್ವಹಿಸುತ್ತಾರೆ ಎಂಬ ಭರವಸೆ ನಮ್ಮದು. ಏಕೆಂದರೆ ಸದಾ ಮುಗುಳ್ನಗುತ್ತ ಪ್ರೀತಿಯಿಂದ ಸರ್ವರನ್ನೂ ತಮ್ಮೊಡನೆ ಕರೆದೊಯ್ಯುವ ಶಕ್ತಿ ಅವರಿಗಿದೆ. ಸಭ್ಯತೆ, ಸಜ್ಜನಿಕೆ, ಪ್ರಾಮಾಣಿಕತೆಗಳಿಗೆ ಹೆಸರಾದ ಅವರು ನಮ್ಮ ಕರ್ನಾಟಕ ಸಂಘದ ಜತೆ ಹಾರ್ದಿಕ ಸಂಬಂಧ ಹೊಂದಿರುವವರು. ಮುಖ್ಯಮಂತ್ರಿ ಶ್ರೀ ಸದಾನಂದ ಗೌಡ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ರಾಷ್ಟ್ರದ ಗಮನ ಸೆಳೆದ ಮತ್ತೊಂದು ಮಹತ್ವಪೂರ್ಣ ಸಂಗತಿ–ಲೋಕಾಯುಕ್ತ ವರದಿ. ಕರ್ನಾಟಕ ಲೋಕಾಯುಕ್ತ ಸಂಸ್ಥೆ ಅತ್ಯಂತ ವಸ್ತುನಿಷ್ಠವಾಗಿ ಯಾವುದೇ ಮುಲಾಜುಗಳಿಗೆ ಒಳಗಾಗದೆ ಜನಪರ ನಿಲುವುಗಳನ್ನು ತಾಳುತ್ತದೆ ಮತ್ತು ಕರ್ತವ್ಯ ನಿರ್ವಹಿಸುತ್ತದೆ ಎಂಬುದಕ್ಕೆ ಗಣಿ ಹಗರಣ ಕುರಿತ ಲೋಕಾಯುಕ್ತರ ಸಹಸ್ರಾರು ಪುಟಗಳ ವರದಿಯೇ ಸಾಕ್ಷಿ. ಲೋಕಾಯುಕ್ತ ಸಂಸ್ಥೆಯ ನೇತೃತ್ವ ವಹಿಸಿದ್ದ ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರು ಈ ವರದಿಯ ಕಾರಣವಾಗಿ ರಾಷ್ಟ್ರದ ಗಮನ ಸೆಳೆದಿದ್ದಾರೆ. ಅಷ್ಟೇ ಅಲ್ಲದೆ, ಭ್ರಷ್ಟಾಚಾರವನ್ನು ಬುಡ ಸಮೇತ ಕಿತ್ತು ಹಾಕಲು ಜನಲೋಕಪಾಲ್ ಮಸೂದೆಯ ಪ್ರೇರಕ ಶಕ್ತಿಗಳಲ್ಲಿ ಅವರೂ ಒಬ್ಬರು. ಈಗ ನಿವೃತ್ತರಾಗಿದ್ದರೂ ಜನಪರ ಕಾರ್ಯಗಳಲ್ಲಿ, ಕಾನೂನು ಸಮರಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿ ತಿಳಿಸಿದ್ದಾರೆ. ದೆಹಲಿ ಕನ್ನಡಿಗರಾಗಿದ್ದ ಶ್ರೀ ಸಂತೋಷ್ ಹೆಗಡೆ ಅವರ ಸಾಧನೆಗೆ ಅಭಿನಂದನೆಗಳು. ಈಗ ಅವರ ನಂತರ ಆ ಸ್ಥಾನವನ್ನು ಅಲಂಕರಿಸಿರುವ ನ್ಯಾಯಮೂರ್ತಿ ಶ್ರೀ ಶಿವರಾಜ್ ಪಾಟೀಲರು ಅತ್ಯಂತ ಸಮರ್ಥರು, ನಿಷ್ಠುರ ನ್ಯಾಯದ ಪರ ಸದಾ ನಿಲ್ಲುವಂತಹವರು. ನ್ಯಾಯಮೂರ್ತಿ ಶ್ರೀ ಶಿವರಾಜ್ ಪಾಟೀಲರೂ ಕೂಡ ದೆಹಲಿ ಕನ್ನಡಿಗರಾಗಿದ್ದವರು. ನಮ್ಮ ಕರ್ನಾಟಕ ಸಂಘದ ಜತೆ ಆತ್ಮೀಯ ಸಂಪರ್ಕ ಹೊಂದಿದ್ದವರು. ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಶುಭಾಶಯಗಳು.

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಬಳ್ಳಾರಿ ಜಿಲ್ಲೆಯ ಕಬ್ಬಿಣ ಅದಿರಿನ ಗಣಿಗಾರಿಕೆಗೆ ಕಡಿವಾಣ ಹಾಕಿರುವುದು ಸ್ವಾಗತಾರ್ಹ ಸಂಗತಿ. ಎಪ್ಪತ್ತರ ದಶಕದಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಸಂಡೂರು, ತೋರಣಗಲ್ಲುಗಳು ಪಶ್ಚಿಮ ಘಟ್ಟಗಳಂತೆ ಹಸಿರಿನ ಐಸಿರಿಯಂತೆ ಕಂಗೊಳಿಸುತ್ತಿದ್ದವು. ಅಲ್ಲಿ ಸಸ್ಯ ವೈವಿಧ್ಯ ಹಾಗೂ ಜೈವಿಕ ವೈವಿಧ್ಯತೆ ಪರಿಸರ ಪ್ರಿಯರನ್ನು ಆಕರ್ಷಿಸಿದ್ದವು. ಚಿರತೆ, ಜಿಂಕೆ, ಮಂಗ, ಪಕ್ಷಿ ಸಂಕುಲಗಳು ಈ ಅದ್ಭುತ ಪರಿಸರದಲ್ಲಿ ನಿರ್ಭಯವಾಗಿ ಜೀವಿಸಿದ್ದವು. ಅಲ್ಲಲ್ಲಿ ಹರಿಯುತ್ತಿದ್ದ ನೀರಿನ ಝರಿಗಳು, ಕೆರೆ ಕಟ್ಟೆಗಳು 8.13 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸಂಪನ್ನವಾಗಿಸಿದ್ದವು. ಗಣಿಗಾರಿಕೆ ಇವೆಲ್ಲವನ್ನು ಧ್ವಂಸಗೊಳಿಸಿತು. ಪರಿಸರದ ಅಸಮತೋಲನದಿಂದ ನೆಮ್ಮದಿಯ ಬದುಕು ವಿನಾಶವಾಯಿತು. ಈ ಗುಡ್ಡಗಾಡುಗಳಲ್ಲಿ ಅಹರ್ನಿಶಿ ಹರಿದಾಡಿದ ಬೃಹತ್ ಲಾರಿಗಳು ಭೂಗರ್ಭದ ಸಂಪತ್ತನ್ನು ಲೂಟಿ ಮಾಡಿದ್ದಷ್ಟೇ ಅಲ್ಲ, ಸುತ್ತಣ ಕಾಡು ಪ್ರದೇಶವನ್ನು ಕಂಗೆಡಿಸಿದವು. ಕಳೆದ ಮೂರು ವರ್ಷಗಳಿಂದೀಚೆಗೆ ಅಲ್ಲಿ ನೋಡಲೂ ಕೂಡ ಒಂದು ಚಿರತೆಯಾಗಲಿ, ಜಿಂಕೆಯಾಗಲಿ ಕಾಣ ಸಿಗುವುದಿಲ್ಲ ಎನ್ನುವುದು ಆತಂಕದ ಸಂಗತಿ. ಹಾಗೆ ನೋಡಿದರೆ ಸುಪ್ರೀಂ ಕೋರ್ಟ್‌ನ ನಿರ್ಣಯ ಕೂಡ ತಡವಾಗಿ ಬಂದಿತು! ಮತ್ತೆ ಅಲ್ಲಿ ಅರಣ್ಯ ಮೂಡಬೇಕಾದರೆ ಆ ಇಡೀ ಪ್ರದೇಶ ಗಣಿ ಮಾಫಿಯಾದಿಂದ ಶಾಶ್ವತವಾಗಿ ಮುಕ್ತವಾಗಬೇಕು. ಇದು ಈಡೇರಲಿ, ಎಪ್ಪತ್ತರ ದಶಕದ ಸುಂದರ ತಾಣಗಳು ಇನ್ನು ಮುಂದಾದರೂ ತಮ್ಮ ಹಳೆಯ ಸಂಭ್ರಮವನ್ನು ಕಾಣುವಂತಾಗಲಿ ಎಂಬುದು ನಮ್ಮ ಕಳಕಳಿಯ ಹಾರೈಕೆ.

ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನೇ ಅಲುಗಾಡಿಸುವ, ಒಮ್ಮೊಮ್ಮೆ ಕಂಗೆಡಿಸುವ, ಬಹುತೇಕ ರಾಜಕಾರಣಿಗಳು ಸ್ವಚ್ಛ ಹಿನ್ನೆಲೆ ಹೊಂದಿಲ್ಲದಿರುವುದು ನಿಜಕ್ಕೂ ಆತಂಕದ ಸಂಗತಿ. ಸುದೈವದಿಂದ ಭಾರತ ಸರ್ಕಾರ Representation of people Act 1951ಗೆ ತಿದ್ದುಪಡಿ ತಂದು ಸಂಸತ್ತಿನ ಅಂಗೀಕಾರಕ್ಕೆ ಮಂಡಿಸಲಿದೆ. ಇದರ ಪ್ರಕಾರ ಭಯೋತ್ಪಾದನೆ, ಕೊಲೆ, ಲೈಂಗಿಕ ಅಪರಾಧ, ಅಪಹರಣ ಇತ್ಯಾದಿ ಕ್ರಿಮಿನಲ್ ಹಿನ್ನೆಲೆ ಉಳ್ಳವರು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ. ಅಷ್ಟೇ ಅಲ್ಲ ಗುರುತರ ಭ್ರಷ್ಟಾಚಾರದ ಆರೋಪ ಹೊತ್ತಿರುವವರೂ ಈ ಪಟ್ಟಿಯಲ್ಲಿ ಸೇರ್ಪಡೆಗೊಳ್ಳಬೇಕು. ಇದರಿಂದ ಕಳಂಕ ರಹಿತ ನಾಯಕರು ದೇಶವನ್ನು ಸಮರ್ಥವಾಗಿ ಮುನ್ನಡೆಸಲು ಸಾಧ್ಯವಾಗುತ್ತದೆ. ಇಂತಹ ಜನಪರ ದೇಶಹಿತ ಮಸೂದೆಗಳು ಅನುಷ್ಠಾನಗೊಳ್ಳುವುದು ಕೊಂಚ ಅನುಮಾನ. ಏಕೆಂದರೆ ಪ್ರಸ್ತುತ ರಾಜಕಾರಣದಲ್ಲಿ ತುಂಬಿರುವ ಪಟ್ಟಭದ್ರ ಹಿತಾಸಕ್ತಿಗಳು ಇಂತಹ ಕ್ರಾಂತಿಕಾರಕ ಬದಲಾವಣೆಗಳಿಗೆ ಅಡ್ಡಿ ತರುತ್ತವೆ. ಈ ಬಾರಿ ಹೀಗಾಗದಿರಲಿ, ಸಭ್ಯ ಸುಸಂಸ್ಕೃತರನ್ನು ನಾವೆಲ್ಲಾ ಚುನಾಯಿಸುವಂತಾಗಲಿ, ತನ್ಮೂಲಕ ನಾಳಿನ ಭಾರತ ಕಳಂಕ ಮುಕ್ತವಾಗಿರಲಿ ಎಂಬುದು ನಮ್ಮೆಲ್ಲರ ಆಶಯ.

❑ ಉಷಾ ಭರತಾದ್ರಿ

# ಅಂತರಾಳದಿಂದ. . .

## ಧಾರವಾಡದ ಕ್ಷಣಗಳು

ಮಳೆ ಇನ್ನೂ ಬಿಟ್ಟಿರಲಿಲ್ಲ. ನಾಲ್ಕಾರು ದಿನಗಳಿಂದ ರಪರಪನೇ ಹೊಯ್ಯುತ್ತಿದ್ದ ಮಳೆ ಈಗ ತನಗೆ ಬೇಕಾದಾಗ ಹೊಯ್ದುಕೊಳ್ಳುವಂತಿತ್ತು. ಮಲೆನಾಡಿನಲ್ಲಿ ಜೂನ್ ತಿಂಗಳ ಮಳೆಯೆಂದರೆ ಹೀಗೆಯೆ. ಎದ್ದೆದ್ದು ಬರುವ ಕಪ್ಪು ಮೋಡಗಳು ನೀರು ತುಂಬಿದ ಕೊಡಗಳಂತೆ...ಅಲ್ಲಲ್ಲ... ಕೊಳಗಗಳಂತೆ ಕಾಣುತ್ತವೆ. ಮಲೆನಾಡಿನುದ್ದಕ್ಕೂ ಈ ಕೊಡಗಳದ್ದೇ ಸಾಲು. ಒಮ್ಮೊಮ್ಮೆ ಊರು ಊರುಗಳ ಮೇಲೆ ಸಾವಿರಾರು ಕೊಡಗಳು ಬರಿದಾದ ಹಾಗೆ. ಕಾಡುಗಳ ತುಂಬ ನೀರಿನ ಆಟ. ಮಳೆಯಿಂದ ತೊಯ್ದ ಮರಗಳು ಕಡು ಹಸಿರಿನ ಸೆರೆಯಲ್ಲಿ ಸಿಲುಕಿಕೊಂಡಂತೆ...ಸಿರ್ಸಿ–ಯಲ್ಲಾಪುರದ ರಸ್ತೆಯ ಇಕ್ಕೆಲಗಳಲ್ಲೂ ಕಾಡು ಹಸಿರಿನಿಂದ ತುಂಬಿತ್ತು. ಮಳೆಯ ಹನಿಗಳ ತುಸು ಭಾರದಿಂದ ಎಲೆಗಳು ನಾಚಿ ನೆಲದತ್ತ ಮುಖ ಮಾಡಿದ್ದವು. ಮಂಚಿಕೇರಿಯನ್ನು ದಾಟಿ ಬೇಡತಿಯ ಕಣಿವೆಯಲ್ಲಿ ಇಳಿಯುವ, ನದಿಯ ಮೇಲಣ ಸೇತುವೆಯನ್ನು ದಾಟುವ ಸಂತಸದಲ್ಲಿ ನಾನು ಕುಳಿತಿದ್ದೆ. ಬೇಡತಿಯ ನೀರು (ಉತ್ತರ ಕನ್ನಡದ ಭಾಷೆಯಲ್ಲಿ) ಸಾಕಷ್ಟು ಗಣಕಾಗಿತ್ತು. ಕೆಂಪು ನೀರಿನ ನೆಗಸು ನಿನ್ನೆ–ಮೊನ್ನೆಯಷ್ಟೆ ಬಂದಿತ್ತಂತೆ. ಯಲ್ಲಾಪುರವನ್ನು ದಾಟಿ ಹುಬ್ಬಳ್ಳಿಯ ಹೆದ್ದಾರಿಯನ್ನು ಹಿಡಿದ ಕಾರಿನ ಚಾಲಕನಿಗೆ ಇದಾವುದರ ಪರಿವೆಯು ಇದ್ದಂತಿರಲಿಲ್ಲ. ಎರೆ ಹುಳಗಳಂತೆ ಹರಿಯುವ ನೂರಾರು ಲಾರಿಗಳನ್ನು ಹಿಂದೆ–ಮುಂದೆ ಮಾಡುತ್ತ ಸಾಗುವುದರತ್ತ ಅವನ ಗಮನವಿದ್ದಂತಿತ್ತು. ನನಗೋ ಮಕ್ಕಳು ಆಡುವ ಯಾವುದೊ ಕಂಪ್ಯೂಟರ್ ಗೇಮ್‌ನ ಭಾಗವಾಗಿ ಬಿಟ್ಟೆನೊ ಎಂಬ ಭಾವ. ಕಾರನ್ನು ಅವನು ನಡೆಸುತ್ತಿದ್ದನೋ, ಕಾರೇ ಅವನನ್ನು ನಡೆಸಿಕೊಂಡು ಹೋಗುತ್ತಿತ್ತೋ? ಒಂದು ಬಗೆಯ ಯಾಂತ್ರಿಕತೆಯ ಸಮ್ಮಿಳನವದು. ಏನೆ ಇರಲಿ, ಕಿರುವತ್ತಿ ದಾಟಿದ ನಂತರ ಕಾಡು ಕ್ರಮೇಣ ಮರೆಯಾಗ ತೊಡಗಿತು. ಮರಮಟ್ಟುಗಳ ಎತ್ತರ ಕಡಿಮೆಯಾಗಿ, ಅಲ್ಲಲ್ಲಿ ಬಯಲು ತೆರೆದುಕೊಳ್ಳತೊಡಗಿತ್ತು, ಕೆದರಿದ ಕಪ್ಪು ಮೋಡಗಳು ತರಾತುರಿಯಿಂದ ಧಾರವಾಡ–ಹುಬ್ಬಳ್ಳಿಯತ್ತ ಧಾವಿಸುವಂತೆ ತೋರುತ್ತಿತ್ತು. ಕಲಘಟಗಿಯನ್ನು ದಾಟಿದ್ದೇ ನಮ್ಮತ್ತ ಧಾರವಾಡದ ಗಾಳಿ ಬೀಸತೊಡಗಿತ್ತು. ಧಾರವಾಡದಲ್ಲಿ ಮಳೆಯಾಗದಿದ್ದರೆ ಎಲ್ಲೋ ಮರೆಯಾಗಿ ಹೋದ ಸೆಕೆ ಮತ್ತೆ ಹೆಗಲ ಮೇಲೇರಿ ಬಂದು ಕುಳಿತಂತೆ. ಮಳೆಗಾಲದ ಮೋಡಗಳನ್ನು ಕಟ್ಟಿ ಎಳೆದು ತರುವ ಗಾಳಿ...ಆ ಗಾಳಿಯಲ್ಲಿ ತೇಲಿ ಬರುವಂತಿರುವ ಮಳೆಯ ಹನಿಗಳು. ಒಂದು ಬಗೆಯ ಬಿಸಿಲು–ಮಳೆಗಳ ಚೆಲ್ಲಾಟದಲ್ಲಿ ಧಾರವಾಡ ಮುಳುಗಿತ್ತು.

ಧಾರವಾಡ ತಲುಪಿದವನೇ ಸಣ್ಣಪುಟ್ಟ ಅದು–ಇದು ಅಂತ ಆಗಲೇ ಬೇಕಾದ ಕೆಲಸಗಳನ್ನು ಮುಗಿಸಿಕೊಂಡು ಸೀದಾ ನಾರಾಯಣಪುರದಲ್ಲಿರುವ ನಮ್ಮ ಸಂಘದ ಹಿಂದಿನ ಅಧ್ಯಕ್ಷ ಶ್ರೀ ಎನ್. ಪಿ. ಭಟ್ಟರ (ರಂಜನ ಭಟ್ಟರು) ಮನೆ 'ಅವನಿ' ಗೆ ಹೋದೆ. ಮನೆಯಿಂದ ಬರುವಾಗ ಬುಟ್ಟಿಯಲ್ಲಿ ತುಂಬಿಕೊಂಡು ಬಂದಿದ್ದ ಮಾವಿನ ಹಣ್ಣುಗಳನ್ನು ಶ್ರೀಮತಿ ಯಶೋಧ ಭಟ್ಟರ ಬಳಿಯಲ್ಲಿ ಇರಿಸಿ, ಕ್ಷಣದಲ್ಲಿ ಬಿಸಿ ಕಾಫಿ ಕುಡಿದು ಡಾ. ದ. ರಾ. ಬೇಂದ್ರೆ ಟ್ರಸ್ಟಿನ ಅಧ್ಯಕ್ಷರಾದ ಡಾ. ಶ್ಯಾಮಸುಂದರ ಬಿದಿರಕುಂದಿಯವರನ್ನು ಕಾಣಲು ಹೊರಟೆ. ಮೊದಲೆ ಅವರೊಂದಿಗೆ ಭೇಟಿ ನಿಶ್ಚಯವಾಗಿತ್ತು. ಕರಾರುವಕ್ಕಾಗಿ 2 ಗಂಟೆಗೆ ಅವರು ನಾನಿದ್ದ ಕಾಮತ ಯಾತ್ರಿ ನಿವಾಸಕ್ಕೆ ಬಂದರು. ಹಿರಿಯರಾದ ಡಾ. ಬಿದರಕುಂದಿಯವರು ಭೇಟಿಯಾದ ಎರಡೇ ನಿಮಿಷಗಳಲ್ಲಿ ಆತ್ಮೀಯರಾಗಿ ಬಿಟ್ಟರು. ಸಾಹಿತ್ಯ, ರಾಜಕೀಯ, ಹೊಸ ಪುಸ್ತಕಗಳು, ದೆಹಲಿ, ಧಾರವಾಡ...ಹೀಗೆ ನಮ್ಮ ಮಾತಿನ ಸರಪಣಿ ಸಾಗಿತ್ತು. ಯಾತ್ರಿ ನಿವಾಸದಿಂದ ಹೊರಟು ಹೋಟೆಲೊಂದರಲ್ಲಿ ಚಹ ಕುಡಿದುಕೊಂಡು ಸಾಧನಕೇರಿಗೆ ಬಂದೆವು. ಬೇಂದ್ರೆ ಟ್ರಸ್ಟ್ ನ ಕಟ್ಟಡ ಡಾ. ಬೇಂದ್ರೆಯವರ ಹಳೆಯ ಹಂಚಿನ ಮನೆಯ ಪಕ್ಕದಲ್ಲೇ ಇತ್ತು. ಆ ಮನೆಯನ್ನೇ ನೋಡುತ್ತ ಕೆಲ ಹೊತ್ತು ನಿಂತುಕೊಂಡೆ. ಬೇಂದ್ರೆಯವರು ಇದ್ದ ಜಾಗ, ಓಡಿಯಾಡಿದ ಜಾಗ...ಆಗಿನ ಸಾಧನಕೇರಿ ಹೇಗಿರಬಹುದು ಎಂಬ ಯೋಚನೆಯಲ್ಲಿ ಬಿದ್ದೆ. ಆ ಕಾಲದಲ್ಲಿ ಸಾಧನಕೇರಿ ಧಾರವಾಡದ ಬಳಿಯ ಹಳ್ಳಿಯಾಗಿತ್ತು. ಈಗ ಅದು ಧಾರವಾಡದ ಭಾಗವಾಗಿದೆ. ಡಾ. ಬಿದರಕುಂದಿಯವರು ಟ್ರಸ್ಟಿನ ವಿವಿಧ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟರು. ಬೇಂದ್ರೆಯವರ ಚಿತ್ರಗಳು, ಅವರ ಕವಿತೆಗಳ ಸಾರವನ್ನು ಹೀರಿಕೊಂಡು ಬರೆದ ಚಿತ್ರಗಳು...ನಿಜ, ಅವರು ಮಾಂತ್ರಿಕನಂತೆ, ಮೋಡಿಗಾರರಂತೆ ಕಾಣುತ್ತಾರೆ. ನಂತರ ಡಾ.ಬಿದರಕುಂದಿಯವರ ಕಛೇರಿಯಲ್ಲಿ ಕುಳಿತು ಮುಂದಿನ ಕಾರ್ಯಕ್ರಮಗಳ ಕುರಿತಾಗಿ ಮಾತನಾಡಿದೆವು. ದೆಹಲಿಗೆ ಬೇಂದ್ರೆಯವರ ಕಂಪನ್ನು ಹೇಗೆ ತರಬಹುದೆಂಬುದರ ಬಗ್ಗೆ ವಿಚಾರ ಮಾಡಿದೆವು. ಪತ್ತೇದಾರಿ ಕಾದಂಬರಿಗಳ ಕುರಿತಾಗಿ ದೆಹಲಿಯಲ್ಲಿ ವಿಚಾರಗೋಷ್ಠಿ ಹಾಗೂ ಸಮ್ಮೇಳನವೊಂದನ್ನು ಆಯೋಜಿಸುವುದರ ಬಗ್ಗೆ ಚರ್ಚಿಸಲು ಶ್ರೀ ಸುದರ್ಶನ ದೇಸಾಯಿಯವರೂ ಬಂದಿದ್ದರು. ಈ ಎಲ್ಲ ನಮ್ಮ ಮಾತುಕತೆಗಳು ಮುಗಿಯುವ ಹೊತ್ತಿಗೆ ಮತ್ತೊಮ್ಮೆ ಮಳೆರಾಯನ ಆಗಮನವಾಗಿತ್ತು. ಬೇಂದ್ರೆ ಟ್ರಸ್ಟ್‌ನ ಕಿಟಕಿಯೊಳಗಿಂದ ಅಂಬಿಕಾತನಯರ ಮನೆಯ ಹೊಳಹೊರವನ್ನು ನೋಡುತ್ತ ಅಲ್ಲಿಂದ ಹೊರಟಿದ್ದಾಯಿತು. ನನಗೆ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ತೀರ್ಥಯಾತ್ರೆ ಮಾಡಿ ಮುಗಿಸಿದ ಭಾವ

ನಂತರದಲ್ಲಿ ಶ್ರೀ ರಂಜನ ಭಟ್ಟರ ಜೊತೆಗೆ ಕಾರಿನಲ್ಲಿ ಕುಳಿತು ಹುಬ್ಬಳ್ಳಿಯಲ್ಲಿ ನಾಡೋಜ ಶ್ರೀ ಪಾಟೀಲ ಪುಟ್ಟಪ್ಪನವರನ್ನು (ಪಾಪು) ಭೇಟಿಯಾಗಲು ಹೊರಟಿದ್ದಾಯಿತು. ತೊಂಬತ್ತರ ಅಸುಪಾಸಿನಲ್ಲಿರುವ ಪಾಪು ಅವರ ಆರೋಗ್ಯ ತುಸು ಹದಗೆಟ್ಟಿದ್ದರೂ, ತಮ್ಮ ಎಂದಿನ ಉತ್ಸಾಹದಲ್ಲಿದ್ದರು. ಹಲವಾರು ಯೋಜನೆಗಳು, ಹಲವಾರು ವಿಚಾರಗಳು...ವಾರಣಾಸಿಯಲ್ಲಿ ನವೆಂಬರ್‌ನಲ್ಲಿ ಹೊರನಾಡ ಕನ್ನಡಿಗರ ಸಮ್ಮೇಳನ...ಸರಕಾರದ ಕನ್ನಡ ಯೋಜನೆಗಳು...ಹೀಗೆ ನಮ್ಮ ಮಾತುಕತೆ ಚಹ–ತಿಂಡಿಯೊಂದಿಗೆ ಸಾಗಿತ್ತು. ಜೊತೆಜೊತೆಗೆ ಕರ್ನಾಟಕದ ಹಲವು ದಿಗ್ಗಜರ ದೊಡ್ಡತನ–ಸಣ್ಣತನಗಳ ಘಟನಾವಳಿಗಳ ವಿವರಗಳು ಅವರ ಬತ್ತಳಿಕೆಯಲ್ಲಿ ತುಂಬಿದ್ದವು. ಬತ್ತಳಿಕೆಯಿಂದ ಈ ವಿವರಗಳನ್ನು ಬರವಣಿಗೆಯಲ್ಲಿ ಇಳಿಸುವ ಕೆಲಸದಲ್ಲಿ ಪಾಪು ತೊಡಗಿದ್ದಾರೆ. ಹುಬ್ಬಳ್ಳಿಯಲ್ಲಿ ಪಾಪು ಕುಳಿತರೂ ಅವರ ಪ್ರಪಂಚದಲ್ಲಿ ಪೂರಾ ಕರ್ನಾಟಕವೇ ಅಡಗಿದೆ. ಎಲ್ಲರೂ ಅವರನ್ನು ಬಲ್ಲರು. ಅವರು ಬಲ್ಲವರೆಲ್ಲ ಎಲ್ಲ ಸ್ತರದವರು... ದೊಡ್ಡ ರಾಜಕಾರಣಿಗಳಿಂದ ಹಿಡಿದು ಹೋಟೆಲ್ ಮಾಣಿಯ ತನಕ. ಈಗ ಅವರು ಗೋಕಾಕ ಟ್ರಸ್ಟ್‌ನ ಅಧ್ಯಕ್ಷರು. ದೆಹಲಿಯಲ್ಲಿ ಶ್ರೀ ಗೋಕಾಕ ಕುರಿತಾದ ಕಾರ್ಯಕ್ರಮವನ್ನು ಮಾಡುವುದರ ಬಗ್ಗೆಯೂ ನಾವು ಚರ್ಚಿಸಿದೆವು. ಬರುವ ಎಪ್ರಿಲ್ ತಿಂಗಳಿನಲ್ಲಿ, ಗೋಕಾಕರ ಜನ್ಮದಿನದ ಸಂದರ್ಭದಲ್ಲಿ, ಈ ಕಾರ್ಯಕ್ರಮವನ್ನು ಮಾಡಬಹುದೆಂದು ಅವರು ಸೂಚಿಸಿದರು. ಮಾತುಮುಗಿಸಿ ಹೊರಡುವಾಗಲೂ ಅದೇ ಪ್ರೀತಿ, ಸೌಜನ್ಯ. ಎತ್ತರ ನಿಲುವಿನ, ಶುಭ್ರ ಬಿಳಿಯ ವಸ್ತ್ರಧಾರಿ, ಕನ್ನಡಕಧಾರಿ... ಪಾಪುರವರ ಮನೆಯ ತುಂಬ ಪುಸ್ತಕಗಳು ಹಾಗೂ ಅವರಿಗೆ ಸಂದ ಪ್ರಶಸ್ತಿಗಳ...ಪ್ರಶಂಸೆಗಳ ಸರಮಾಲೆ. ಪಾಪು ಅವರ ಮನ ಹಾಗೂ ಮನೆ 'ಪ್ರಪಂಚ' ಸದಾ ಕನ್ನಡಕ್ಕಾಗಿ ತೆರೆದಿದೆ.

ಮರುದಿನ ಶ್ರೀ ರಂಜನ ಭಟ್ಟರ ಮನೆಯಲ್ಲಿ 'ಅವನಿ ರಸಿಕರ ಸಂಘ'ದಲ್ಲಿ ನಾನು ಸಾಹಿತ್ಯ, ಜೆ ಎನ್ ಯು, ದೆಹಲಿ ಕರ್ನಾಟಕ ಸಂಘ...ಹೀಗೆ ಹತ್ತು ಹಲವಾರು ವಿಚಾರಗಳ ಬಗ್ಗೆ ಸಹೃದಯರ ಜೊತೆ ವಿಚಾರ–ವಿನಿಮಯ ಮಾಡಿಕೊಂಡೆ. ಯಶೋಧಾ ಭಟ್ಟರವರ ಹಾಗೂ ಅವರ ಸೊಸೆ ಸುಮಂಗಲಾ ಭಟ್ಟರವರ ಆದರ–ಆತಿಥ್ಯದ ಸವಿಯನ್ನು ಇಲ್ಲಿ ನೆನೆಯಲೇ ಬೇಕು. ಅವನಿ ರಸಿಕರ ಸಂಘ ಹೊರತಂದ ವಿಶಿಷ್ಟ ಹಾಗೂ ಸೃಜನಾತ್ಮಕ ಪುಸ್ತಕಗಳನ್ನು ನೋಡುವುದೆ ಒಂದು ಆನಂದ. ಸಾಹಿತ್ಯಲೋಕಕ್ಕೆ ದೇವಾಂಗನಾ ಶಾಸ್ತ್ರಿಯವರಂತವರ ಕತೆಗಳನ್ನು ಹುಡುಕಿ ತಂದು ಪ್ರಕಟಿಸುವ ಕೆಲಸವನ್ನು ಅವನಿ ರಸಿಕರ ಸಂಘ ಮಾಡಿದೆ. ದೇವಾಂಗನಾ ಶಾಸ್ತ್ರಿಯವರನ್ನು ರಂಜನ ಭಟ್ಟರು ಹುಡುಕಿದ ಕತೆಯನ್ನು ಇನ್ನೊಮ್ಮೆ ಸವಿಸ್ತಾರವಾಗಿ ಬರೆಯಬೇಕು. ಅದೊಂದು ಅಸಾಮಾನ್ಯವಾದ ಕೆಲಸ.

ಮನೋಹರ ಗ್ರಂಥ ಮಾಲೆಯ ಹಿರಿಯರಾದ ಶ್ರೀ ರಮಾಕಾಂತ ಜೋಶಿಯವರನ್ನು ಅವರ ಕಛೇರಿಯಲ್ಲೆ ಭೇಟಿಯಾಗಿ, ಸಮಾಲೋಚನೆ ನಡೆಸಿ...ಅವರಿಗೆ ನಮಸ್ಕಾರ ಹೇಳಿ ನಾನು ನನ್ನ ಊರಿನತ್ತ ಮರಳುವಾಗ ಧಾರವಾಡದಲ್ಲಿ ಸಂಜೆಯ ತಂಗಾಳಿ ಬೀಸತೊಡಗಿತ್ತು. ಕಾರಿನಲ್ಲಿ ಕುಳಿತವನಿಗೆ ...ಪಾಪು, ರಂಜನ ಭಟ್ಟರು, ರಮಾಕಾಂತ ಜೋಶಿಯವರು...ಅವನಿ ರಸಿಕರ ಸಂಘ...ಇಷ್ಟೊಂದು ದಿಗ್ಗಜರು ಕನ್ನಡವನ್ನು ಓಲೈಸುತ್ತಿರುವಾಗ, ಅದಕ್ಕೆ ಯಾವ ಕುಂದು ಬಾರದು ಎಂದುಕೊಂಡೆ. ಕಾರು ಹೆದ್ದಾರಿಯನ್ನು ಹಿಡಿಯುವ ಹೊತ್ತಿನಲ್ಲಿ ತಿರುಗಿ ನೋಡಿದರೆ, ಧಾರವಾಡದ ಮಿಣಿಮಿಣಿ ದೀಪಗಳು ಮಸಕಾಗಿ ತೋರತೊಡಗಿದ್ದವು.

■ ಡಾ. ವೆಂಕಟಾಚಲ ಹೆಗಡೆ

# ಮುನ್ನೋಟ

ಆಷಾಢ ಕಳೆದು ಶ್ರಾವಣಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಕರ್ನಾಟಕದ ರಾಜಕೀಯ ವಲಯದಲ್ಲಿ ಮಹತ್ತರ ಬೆಳವಣಿಗೆ ನಡೆದಿದೆ. ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕೆಲಸ ಕಾರ್ಯಗಳ ಅರಿತು ನಮ್ಮ ಕೋರಿಕೆಯನ್ನು ಮನ್ನಿಸಿ ಒಂದು ಕೋಟಿ ರೂಗಳ ಅನುದಾನವನ್ನು ಕಳೆದ ಬಜೆಟ್‌ನಲ್ಲೇ ಮಂಡಿಸಿ ಅಂಗೀಕರಿಸಿ ಸಂಘಕ್ಕೆ ಒಂದು ವರದಾನವನ್ನೇ ನೀಡಿದ್ದಾರೆ. ನಾವು ರಾಜ್ಯದ ಹೊರಗೆ ನೆಲೆನಿಂತ ಕನ್ನಡಿಗರು, ನಮಗೆ ವೈಯಕ್ತಿಕ ರಾಜಕೀಯ ಮುಖ್ಯವಲ್ಲ. ನಮ್ಮೊಂದಿಗೆ ಸ್ಪಂದಿಸಿ, ದೆಹಲಿಯಲ್ಲಿ ರಾಜ್ಯದ ಸಾಹಿತ್ಯ ಹಾಗೂ ಸಂಸ್ಕೃತಿ ಬೆಳವಣಿಗೆಗೆ ಕಾರಣಕರ್ತರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ರಾಜಕೀಯ ಜೀವನ ಸುಗಮವಾಗಲಿ ಎಂದು ಹಾರೈಸುವ ಜೊತೆಗೆ ನೂತನ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದ ಗೌಡರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ರಜೆಗಳಲ್ಲಿ ಸಂಘದ ಕಾರ್ಯಕ್ರಮಗಳು ಸಹ ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದು ಈಗ ಮತ್ತೆ ಮುಂಚಿನಂತೆಯೇ ಕಾರ್ಯಕ್ರಮಗಳು ಶುರುವಾಗಿವೆ. ದಿನಾಂಕ 31.07.2011ರಂದು ಸಾಹಿತಿ ಡಾ.ವಸಂತಕುಮಾರ್ ಪೆರ್ಲ ಅವರು ಸಂಘಕ್ಕೆ ಬಂದಿದ್ದು ಕವಿತಾ ವಾಚನ ಮತ್ತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಹಾಗೆಯೇ ಸೆಪ್ಟಂಬರ್ ತಿಂಗಳು 1ನೇ ತಾರೀಖಿನಿಂದ ದೆಹಲಿ ಕರ್ನಾಟಕ ಸಂಘದಿಂದ ಗೌರಿ ಗಣೇಶೋತ್ಸವದಿಂದ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ 3 ಮತ್ತು 4ರಂದು ಸಂಸ್ಕೃತಿ ಬಾಗಿನ ಕಾರ್ಯಕ್ರಮದಲ್ಲಿ ಅತ್ಯುತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬೆಂಗಳೂರಿನಿಂದ ಸುಮಾರು 75-80 ಜನ ಕಲಾವಿದರು ಬರುತ್ತಿದ್ದಾರೆ. ಮೊದಲನೇ ದಿನ 'ಗಾಂಧಿ ಬಂದ ನಾಟಕ', 'ಚಿತ್ರಕಲಾ ಪ್ರದರ್ಶನ ಶಿಬಿರ' ಎರಡನೇ ದಿನ ಡಾ.ಮಾಯಾರಾವ್ ತಂಡದಿಂದ ನಿತ್ಯೋತ್ಸವ, ಶ್ರೀಮತಿ ಬಿ.ಜಯಶ್ರೀ ತಂಡದವರಿಂದ ರಂಗಗೀತೆಗಳು ಮತ್ತು ಸುಗಮ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ.

ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಹಾಗೂ ಕರ್ನಾಟಕದ ಸಾಂಸ್ಕೃತಿಕ ಲೋಕದ ಗುಣಾತ್ಮಕ ಬಲವರ್ಧನೆಗಾಗಿ ಏನೆಲ್ಲ ಸಾಧ್ಯವೋ ಅದೆಲ್ಲವನ್ನೂ ಮಾಡಿರುವ ಹಿರಿಯ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ವಿಠ್ಠಲ್ ಮೂರ್ತಿಯವರ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುವ ಒಂದು ಸಮಾರಂಭವನ್ನು ಉತ್ಸವದ ರೂಪದಲ್ಲಿ ಆಚರಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಶ್ರೀ ವಿಠ್ಠಲ್ ಮೂರ್ತಿಯವರ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಕೊಡುಗೆ ಸಾಧನೆಗಳನ್ನು ಒರೆಗೆ ಹಚ್ಚುವ ನಾಡಿನ ಗಣ್ಯರ ಬರಹವುಳ್ಳ 'ಸಂಸ್ಕೃತಿ ಬಾಗಿನ' ವೆಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಗುವುದು. ಕಾರ್ಯಕ್ರಮಕ್ಕೆ ಹಿರಿಯ ರಾಜಕಾರಣಿಗಳು, ಐ.ಎ.ಎಸ್.ಅಧಿಕಾರಿಗಳು ಬರಲಿದ್ದಾರೆ. ತಾವುಗಳೆಲ್ಲಾ ಈ ಕಾರ್ಯಕ್ರಮಕ್ಕೆ ಬಂದು ಯಶಸ್ವಿಗೊಳಿಸಬೇಕಾಗಿ ವಿನಂತಿ.

■ ಸಿ.ಎಂ. ನಾಗರಾಜ


ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

ಕನ್ನಡ ಚಲನಚಿತ್ರ ಪ್ರದರ್ಶನ

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**

**ರಾವ್ ತುಲಾರಾಂ ಮಾರ್ಗ್, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ- 110022**



**ದಿನಾಂಕ : 13.08.2011 ರ ಶನಿವಾರ**

**ಸಂಜೆ : 4 ಘಂಟೆಗೆ**

ಅಜಯ್ ರಾವ್ ಮತ್ತು ರಾಧಿಕಾ ಪಂಡಿತ್ ಅಭಿನಯದ

**ಕೃಷ್ಣನ್ ಲವ್ ಸ್ಟೋರಿ**

ನಿರ್ದೇಶನ : ಶಶಾಂಕ

**ಚಿಕ್ಕಮಗಳೂರು ಜಿಲ್ಲಾ ಅವಲೋಕನ ಕುರಿತ**

**ಸಾಕ್ಷ್ಯ ಚಿತ್ರ**

**ನಿರ್ಮಾಣ : ವಾರ್ತಾ ಇಲಾಖೆ**

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!

ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ

ಕರ್ನಾಟಕ ಭವನ-2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ- 110021.

ದೂರವಾಣಿ: 011-24102263, ಮೊಬೈಲ್: +91 99686 52139

ಅಭಿನಂದನೆ

# ನೂತನ ಲೋಕಾಯುಕ್ತರಾಗಿ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್



ರಾಜ್ಯದ ನೂತನ ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಿರುವ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅವರಿಗೆ ಹಾರ್ದಿಕ ಅಭಿನಂದನೆಗಳು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅವರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹಂಗಾಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. 2ಜಿ ಹಗರಣ ಕುರಿತ ತನಿಖೆಗಾಗಿ ಕೇಂದ್ರ ಸರಕಾರ ನೇಮಿಸಿದ ಸಮಿತಿಯ ಸದಸ್ಯರಾಗಿಯೂ ಪಾಟೀಲ್ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಮೂಲತಃ ರಾಯಚೂರು ಜಿಲ್ಲೆಯವರು. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ವಕೀಲ ವೃತ್ತಿ ಆರಂಭಿಸಿದ್ದ ಶಿವರಾಜ್ ಪಾಟೀಲ್ ಅಂದಿನ ದಿನಗಳಲ್ಲಿ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳಲ್ಲಿ ಸಮರ್ಥ ವಾದ ಮಂಡಿಸಿ ಹೆಸರು ಗಳಿಸಿದ್ದರು. 1967ರಿಂದ 1975ರವರೆಗೆ ಗುಲ್ಬರ್ಗಾದ ಸೇಠ್ ಶಂಕರ್ ಲಾಲ್ ಲಾಹೋಟಿ ಕಾನೂನು ಕಾಲೇಜಿನಲ್ಲಿ ಪಾರ್ಟ್ ಟೈಮ್ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದರು. 1990ರಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರಾಗಿ ನೇಮಕಗೊಂಡಿದ್ದರು. ನಂತರ ಮದ್ರಾಸ್ ಹೈಕೋರ್ಟ್‌ಗೆ ವರ್ಗಾವಣೆಗೊಂಡಿದ್ದ ಶಿವರಾಜ್ ಪಾಟೀಲ್, 1999ರಲ್ಲಿ ರಾಜಸ್ತಾನ್ ಹೈಕೋರ್ಟ್ ಚೀಫ್ ಜಸ್ಟೀಸ್ ಆಗಿ ಅಧಿಕಾರ ವಹಿಸಿಕೊಂಡಿದ್ದರು. 2000–2005ರವರೆಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದರು.

ತಮ್ಮ ದೆಹಲಿಯ ಇರವಿನಲ್ಲಿ ದೆಹಲಿ ಕರ್ನಾಟಕ ಸಂಘದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಶ್ರೀಯುತರು ದೆಹಲಿ ಕನ್ನಡಿಗರಿಗೆ ಚಿರಪರಿಚಿತರು. ತಮ್ಮ ದಿಟ್ಟ, ದಕ್ಷ, ನೇರ, ಪ್ರಾಮಾಣಿಕ ಸೇವೆಯಿಂದ ಲೋಕಾಯುಕ್ತ ಹುದ್ದೆಗೆ ಘನತೆ ನೀಡಿದ, ಕರ್ನಾಟಕ ಸರ್ಕಾರದ ಆಡಳಿತದಲ್ಲಿ ಹೊಸ ಇತಿಹಾಸವನ್ನು ನಿರ್ಮಿಸಿದ ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರ ನಂತರ ಅಧಿಕಾರ ಸ್ವೀಕರಿಸುತ್ತಿರುವ ಶ್ರೀ ಶಿವರಾಜ್ ಪಾಟೀಲ್ ಅವರಿಗೆ ಈ ಹೊಣೆಗಾರಿಕೆ ನಿಜಕ್ಕೂ ಒಂದು ಸವಾಲೇ ಸರಿ. ಆದರೆ ದಕ್ಷ, ಪ್ರಾಮಾಣಿಕತೆಗೆ ಹೆಸರಾಗಿರುವ ಶಿವರಾಜ್ ಪಾಟೀಲರು ತಮ್ಮ ಕಾರ್ಯಾವಧಿಯಲ್ಲಿ ಸೇವೆಗೆ ಮತ್ತಷ್ಟು ಹಿರಿಮೆ ತರುವುದರಲ್ಲಿ ಸಂದೇಹವೇ ಇಲ್ಲ.

**ಶಿವರಾಜ್ ಪಾಟೀಲ್ ಅವರು ತಮ್ಮ ಕಾರ್ಯಕ್ಷೇತ್ರದಲ್ಲಿ ಅಪೂರ್ವ ಸಾಧನೆ, ಯಶಸ್ಸು ಗಳಿಸಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕವಾಗಿ ಆಶಿಸುತ್ತೇವೆ.**

# ಸರೋಜಿನಿ ಮಹಿಷಿ ಅವರಿಗೆ 'ಹಿಂದಿ ರತ್ನ ಸಮ್ಮಾನ್' ಪ್ರಶಸ್ತಿ



ದೆಹಲಿಯ ಹಿಂದಿ ಭವನ ನೀಡುವ ಪ್ರತಿಷ್ಠಿತ 'ಹಿಂದಿ ರತ್ನ ಸಮ್ಮಾನ್' ಪ್ರಶಸ್ತಿಗೆ ಕೇಂದ್ರದ ಮಾಜಿ ಸಚಿವೆ ಡಾ. ಸರೋಜಿನಿ ಮಹಿಷಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು, ಬೆಳ್ಳಿ ಪದಕ, ಸರಸ್ವತಿ ದೇವಿಯ ಮೂರ್ತಿ, ಬಿನ್ನವತ್ತಳೆಯನ್ನು ಒಳಗೊಂಡಿದೆ.

ಮಾತೃ ಭಾಷೆ ಹಿಂದಿಯಲ್ಲದಿದ್ದರೂ ಹಿಂದಿ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಉತ್ತಮ ಕೊಡುಗೆ ನೀಡಿದವರಿಗೆ ಸರ್ಕಾರೇತರ ಸಂಸ್ಥೆಯೊಂದು ಅತಿ ಹೆಚ್ಚು ನಗದು ಪುರಸ್ಕಾರ ನೀಡುವ ಪ್ರತಿಷ್ಠಿತ ಪ್ರಶಸ್ತಿ ಎನಿಸಿದೆ.

ಸಂಸ್ಕೃತ ಪಂಡಿತರ ಕುಟುಂಬದಿಂದ ಬಂದ ಸರೋಜಿನಿ ಮಹಿಷಿ ಅವರು ಹಿಂದಿ ಸಾಹಿತ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕನ್ನಡ ಶ್ರೇಷ್ಠ ಕೃತಿಗಳಾದ ಡಿ.ವಿ.ಗುಂಡಪ್ಪ ಅವರ 'ಮಂಕುತಿಮ್ಮನ ಕಗ್ಗ' ಹಾಗೂ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕೃತಿಯನ್ನು ಹಿಂದಿಗೆ ಭಾಷಾಂತರ ಮಾಡಿರುವುದು ಅಲ್ಲದೇ ಹಲವಾರು ಮರಾಠಿ ಕೃತಿಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಹಿಂದಿಯಲ್ಲಿ ಹಲವು ಕೃತಿಗಳನ್ನು ರಚಿಸಿರುವುದು ಸೇರಿದಂತೆ ಇತರೆ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**ದೆಹಲಿ ಕರ್ನಾಟಕ ಸಂಘದ ಸಂಸ್ಥಾಪಕ ಅಧ್ಯಕ್ಷೆ ಸರೋಜಿನಿ ಮಹಿಷಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**

ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಅವರು ಹೊರತಂದಿರುವ 2010–11ನೇ ಆರ್ಥಿಕ ಸಾಲಿನ ಭಾರತ್ ನಿರ್ಮಾಣ್, ಫ್ಲಾಗ್‌ಶಿಪ್ ಮತ್ತು ಮಹತ್ತರ ಯೋಜನೆಗಳ ಇತ್ತೀಚಿನ ಮಾಹಿತಿಗಳನ್ನೊಳಗೊಂಡ ಎರಡನೆಯ ಆವೃತ್ತಿಯ ಕೈಪಿಡಿಯನ್ನು ನವದೆಹಲಿಯ ಕರ್ನಾಟಕ ಭವನದಲ್ಲಿ ಆಗಿನ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು 13.07.2011ರಂದು ಬಿಡುಗಡೆ ಮಾಡಿದರು.



ಚಿತ್ರದಲ್ಲಿ : ಸಂಸದ ಪ್ರಭಾಕರ್ ಕೋರೆ, ಇಂಧನ ಸಚಿವೆ ಶೋಭಾ ಕರಂದ್ಲಾಜೆ, ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಮತ್ತು ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಧನಂಜಯ ಕುಮಾರ್

**ಪ್ರತಿ ತಿಂಗಳು 10 ಅಥವಾ 11ನೇ ತಾರೀಖು 'ಅಭಿಮತ'ವನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ. ಒಂದು ವಾರದೊಳಗಾಗಿ ನಿಮಗೆ ತಲುಪದೇ ಇದ್ದಲ್ಲಿ ದಯಮಾಡಿ ನಮ್ಮನ್ನು ಸಂಪರ್ಕಿಸಿ**
**26109615, 65643615**

# ಸ್ವಾತಂತ್ರ್ಯದ ನಿರೀಕ್ಷೆಯಲ್ಲಿ. . .

**ಆ ಸ್ವತಂತ್ರ ಸ್ವರ್ಗಕೆ**
**ನಮ್ಮ ನಾಡು ಏಳಲೇಳಲೇಳಲೇಳಲಿ. . .**

ರವೀಂದ್ರನಾಥ ಟ್ಯಾಗೋರರ ಕವನ ಅಕಸ್ಮಾತ್ತಾಗಿ ನನ್ನ ತಲೆಯಲ್ಲಿ ಮಿಂಚಿನಂತೆ ಬಂದು ಹೋದಾಗ . . . ಗೋವಾ ಎಕ್ಸ್‌ಪ್ರೆಸ್‌ನಲ್ಲಿ ಕೂತು ಊರಿಗೆ ಹೋಗಿ ಮಳೆಗಾಲವನ್ನು ಅನುಭವಿಸಲು ಹೊರಟ ನನಗೆ ಒಂದೆರಡು ಗಂಟೆಗಳ ಕಾಲ ಯೋಚನೆಗೀಡು ಮಾಡಿತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಾ ಏಳು ಬೀಳುವಾಗ, ಅದೆಷ್ಟೋ ಜನರ ಜೀವನ್ಮರಣದ ಹೋರಾಟ ನಡೆಯುತ್ತಿರುವಾಗ, ಬಲಿದಾನಗಳು ಜರುಗುತ್ತಿರುವಾಗ ಬಹುಶಃ ದೇಶದ ಕೆಲವೇ ಬೆರಳೆಣಿಕೆಯ ವ್ಯಕ್ತಿಗಳಿಗೆ ಈ ಸ್ವಾತಂತ್ರ್ಯದ ಪರಿಕಲ್ಪನೆ ಇದ್ದೀತು. ಅಂಥವರಲ್ಲಿ ಗುರುದೇವ ರವೀಂದ್ರನಾಥ ಟ್ಯಾಗೋರರೂ ಕೂಡ ಒಬ್ಬರು. ದೇಶ ಸ್ವತಂತ್ರವಾಗಿ 6 ದಶಕಗಳು ಸಂದರೂ ಕೂಡ ಪ್ರತೀ ವರ್ಷದಿಂದ ವರ್ಷಕ್ಕೆ ಈ ಸ್ವಾತಂತ್ರ್ಯದ ಕಲ್ಪನೆ ಮರೀಚಿಕೆಯಾಗುತ್ತಾ ಸಾಗುತ್ತಿರುವುದು ಅತೀ ಶೋಚನೀಯ. ವರ್ಷದಿಂದ ವರ್ಷಕ್ಕೆ ಸ್ವಾತಂತ್ರ್ಯ ಸ್ವೇಚ್ಛಾಚಾರದ ಅನುಭವವಾಗಿ ಪರಿಣಮಿಸುತ್ತ ಸಾಗಿದೆ. ಹಗರಣಗಳ ಸರಮಾಲೆಯೇ ನಮ್ಮ ಸಾಧನೆಯೇನೋ ಎಂದೆನಿಸುತ್ತಿದೆ. ದೇಶದ ಅಭಿವೃದ್ಧಿಯಲ್ಲಿ ಅದೆಷ್ಟೋ ಪ್ರಗತಿಯಾಗಿದ್ದರೂ ಕೂಡ ಒಂದಡಿ ಮುಂದೆ ಹತ್ತಡಿ ಹಿಂದೆ ಸಾಗುತ್ತಿರುವುದರ ಅನುಭವ ತಳಮಳವನ್ನುಂಟು ಮಾಡುತ್ತಿದೆ.

**ಎಲ್ಲಿ ಮನವು ನಿರ್ಭಯದಿ ತಲೆಯನೆತ್ತಿ ನಿಲುವುದೋ**
**ಎಲ್ಲಿ ಜ್ಞಾನ ಸುಧಾಪಾನ ಎಲ್ಲರಿಗೂ ಸಿಗುವುದೋ. . . ಆ ಸ್ವತಂತ್ರ ಸ್ವರ್ಗಕೇ**

ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷವಾದರೂ ಶ್ರೀಸಾಮಾನ್ಯನೊಬ್ಬ ಸಾರ್ವಜನಿಕ ಕ್ಷೇತ್ರಗಳಲ್ಲಿ ನಿರ್ಭಯದಿಂದ ತನ್ನ ಕೆಲಸ ಮಾಡಿಕೊಳ್ಳುವ ಸಮಯ ಬಾರದಿರುವುದು ಒಂದು ವಿಪರ್ಯಾಸ. ಸಂಬಂಧಪಟ್ಟ ಅಧಿಕಾರಿಗಳಿಗೆ ಕೈಬಿಸಿ ಮಾಡಿ ಕೆಲಸ ಮಾಡಿಸಿಕೊಳ್ಳುವ, ಲಂಚವಿಲ್ಲದೇ ಕೆಲಸವೇ ಆಗದಿರುವ ವಾತಾವರಣವನ್ನು ನಿರ್ಮಿಸಿಕೊಂಡವರು ನಾವೇ... ಬ್ರಿಟಿಷರಲ್ಲ. ಇನ್ನು ಮತಾಂಧತೆಯ ಬೀಜ ಬಿತ್ತಿ ಅದು ಬೆಳೆದು ಹೆಮ್ಮರವಾಗಲು ಅದಕ್ಕೆ ಯಥಾಶಕ್ತಿ ಸಂಪನ್ಮೂಲಗಳನ್ನೊದಗಿಸಿ ಅದು ಕೊನೆಗೆ ಬೆಳೆದು ಭಸ್ಮಾಸುರನಾಗಿ ಸ್ವಾಹಾ ಮಾಡಲು ಬರುತ್ತಿರುವಾಗ ಅದಕ್ಕೆ ಭಯೋತ್ಪಾದನೆಯೆಂಬ ಹೆಸರಿಟ್ಟು ಯಾವಾಗಲೂ 'ಜಡ್' ವರ್ಗದ ಭದ್ರತೆಯಿಂದ ತಿರುಗುವ ಈ ಮತಪೆಟ್ಟಿಗೆ ರಾಜಕಾರಣ ಮಾಡುತ್ತಿರುವವರು ಜನಸಾಮಾನ್ಯನಿಗೆಲ್ಲಿ ನಿರ್ಭಯದಿಂದ ತಲೆಯೆತ್ತಲು ಬಿಟ್ಟಾರು? ಅದೇ ವೇಳೆಗೆ ಆ ಭಯೋತ್ಪಾದನೆಯನ್ನು ಮಟ್ಟಹಾಕಲು ಹೆಣಗಾಡುತ್ತಾ ತಮ್ಮನ್ನು ತಾವು ದೇಶಪ್ರೇಮಿಗಳೆಂದು ತೋರಿಸಿಕೊಳ್ಳುವಲ್ಲಿ ತಾ ಮುಂದು ನಾ ಮುಂದೆಂದು ಪೈಪೋಟಿ ನಡೆಸುತ್ತಿರುವ ರಾಜಕೀಯ ಪಕ್ಷಗಳಿಗೆಲ್ಲಿ ಅರಿವಾಗಬೇಕು ಈ ಸ್ವಾತಂತ್ರ್ಯದ ಮಹತ್ತು? ಇನ್ನು ದೇಶದ ರಾಜಧಾನಿಯೆಂದು ಬೀಗುತ್ತಿರುವ ನಮ್ಮ ದೆಹಲಿಯಲ್ಲಿ ಮಹಿಳೆಯರು ನಿರ್ಭೀತಿಯಿಂದ ಅಲೆದಾಡುವ ದಿನ ಬರಲು ಇನ್ನೂ ಅದೆಷ್ಟು ಶತಮಾನಗಳು ಬೇಕೋ! ಬಲಪ್ರಯೋಗದಿಂದಲೇ ದುರ್ಬುದ್ಧಿಯನ್ನು ಹತ್ತಿಕ್ಕುವುದಾದರೆ ಅಂಥ ನಿಯಂತ್ರಣಕ್ಕೆ ಅರ್ಥವೇನು?

ದೇಶದ ಖನಿಜ ಸಂಪತ್ತು, ವನ ಸಂಪತ್ತು, ಜಲ ಸಂಪತ್ತು, ತೈಲ ಸಂಪತ್ತು ಹೀಗೆ ಎಲ್ಲಾ ಸಂಪನ್ಮೂಲ ಸ್ರೋತಗಳನ್ನು ನಿರ್ಭಯವಾಗಿ ಕೊಳ್ಳೆ ಹೊಡೆಯುವುದಕ್ಕಾಗಿ ಈ ಸ್ವಾತಂತ್ರ್ಯವೇ?. . . ಅಂಥ ಕೊಳ್ಳೆ ಹೊಡೆದವರ ಹೆಸರು ಲೋಕಾಯುಕ್ತರ ವರದಿಗಳಲ್ಲಿ ಅಧಿಕೃತವಾಗಿ ಬಂದು ಮಾಧ್ಯಮಗಳ ಮೂಲಕ ಜಗಜ್ಜಾಹೀರಾದಾಗಲೂ ನಿರ್ಲಜ್ಜತನದಿಂದ ಅಧಿಕಾರಕ್ಕಾಗಿ ಖುರ್ಚಿಯನ್ನು ಬಿಡದಿರುವುದಕ್ಕಾಗಿ ಪಡೆದಿರುವುದೇ ಈ ಸ್ವಾತಂತ್ರ್ಯ? ದೇಶದ ಸಂವಿಧಾನದ ಕರಡು ಸಿದ್ಧವಾಗುವ ಕಾಲದಲ್ಲಿ ಆ ಪ್ರತಿಯನ್ನು ಒಮ್ಮೆ ಬರ್ನಾಡ್ ಷಾ ಅವರಿಗೆ ಪರಿಶೀಲನೆಗಾಗಿ ನೀಡಿದಾಗ ಅವರು ಆ ಕರಡನ್ನು ತೆರೆಯದೆಯೇ ಹೇಳಿದರಂತೆ–"ಆರಿಸುವವನು ಮೂರ್ಖನಾದರೆ ಆರಿಸಿ ಬರುವವನು ಮುಠ್ಠಾಳನಾಗುತ್ತಾನೆ" ಎಂದು. ಹಣ–ಹೆಂಡಗಳ ಹೊಳೆ ಹರಿಸಿ ಆಯ್ಕೆ ಆಗುವ ನೇತಾರರು ಉಳಿದೈದು ವರ್ಷ ಖರ್ಚಿ ತಮಗಾಗಿ ಮೀಸಲಿಟ್ಟ ಜಾಗೀರು ಎಂದು ತಿಳಿದು ಸ್ವೇಚ್ಛೆಯಿಂದ ವರ್ತಿಸುತ್ತಿರುವುದು ಹಗಲು ಸತ್ಯ. ಎಲ್ಲೋ ಕೆಲವು ಬೆರಳೆಣಿಕೆಯಷ್ಟು ನೇತಾರರು ಇದಕ್ಕೆ ಅಪವಾದವಿರಬಹುದು. ಮತದಾರರನ್ನು ಶಿಕ್ಷಿತರನ್ನಾಗಿಸಿ ಅವರ ಆಗು ಹೋಗುಗಳನ್ನು ಅರಿತು ಕೆಲಸ ಮಾಡುವ ನೇತಾರರನ್ನು ಕಾಣುವುದಕ್ಕೆ ಅದೆಷ್ಟು ಸ್ವಾತಂತ್ರ್ಯ ದಿನಾಚರಣೆಗಳು ಕಳೆಯಬೇಕೋ! ಸಾಕ್ಷರರನ್ನಾಗಿ ಸುವುದೊಂದೇ ಮಹಾಸಾಧನೆಯಲ್ಲ. ಶಿಕ್ಷಣ ಅಂದರೆ ಅಂತರ್ಯದ ಬೆಳವಣಿಗೆ. ಈ ಬೆಳವಣಿಗೆ ನೀಡದ ಶಿಕ್ಷಣ ಕೇವಲ ಸಾಕ್ಷರ ರಾಕ್ಷಸರನ್ನಷ್ಟೇ ಸೃಷ್ಟಿಸಬಲ್ಲುದು. ಇಂಥವರೇ ಸಮಾಜಕ್ಕೆ ಕಂಟಕ ಪ್ರಾಯರು. ಇಂಥವರೇ ಕಾನೂನಿನ ಒಳಸುಳಿವುಗಳನ್ನು ಅರಿತುಕೊಂಡು ತಪ್ಪು ಮಾಡಿಯೂ ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುವವರು ಮತ್ತು ಸಮಾಜದಲ್ಲಿ ಕುಕೃತ್ಯ ಮಾಡುವುದಕ್ಕೆ ಉದಾಹರಣೆಗಳಾಗಿ ಪ್ರೇರಕರಾಗುವವರು. ವ್ಯಕ್ತಿತ್ವ ವಿಕಸನದ ಆರಂಭವಾಗುವುದೇ ಮನೆಗಳಲ್ಲಿ. ಆದರಿಂದು ತಂದೆ ತಾಯಿಗಳಿಗೆ ಆ ಪ್ರಕ್ರಿಯೆಯ ಅರಿವೂ ಇಲ್ಲ, ಅರಿತುಕೊಳ್ಳುವ ಗೋಜಿಗೂ ಹೋಗದೇ ಇರುವುದೇ ಇಂದು ಶಾಲೆ ಶಾಲೆಗಳು ಹಣ ಮಾಡುವ ಉದ್ದಿಮೆಗಳಾಗುತ್ತಿರುವುದು ಮತ್ತು ದನಗಳ ದೊಡ್ಡಿಗಳಾಗುತ್ತಿರುವುದು, ಅಶ್ಲೀಲ ಮಾಧ್ಯಮಗಳ ಸ್ವೇಚ್ಛಾಚಾರಗಳ ಬೀಡಾಗುತ್ತಿರುವುದು. ಇನ್ನು ವಿದ್ಯಾಲಯಗಳಲ್ಲಿ ಸೀಟು ಪಡೆಯಲು ಶೇಕಡಾ ನೂರು ಅಂಕಗಳನ್ನು ನಿರ್ಧರಿಸಿರುವುದು ನೋಡಿದರೆ ಈ ದೇಶ ಜಗತ್ತಿನಲ್ಲೇ ಅತೀ ಬುದ್ಧಿವಂತರನ್ನು ಉತ್ಪಾದಿಸುವ ಬುದ್ಧಿವಂತರ ದೇಶವಾಗಬಹುದಾಗಿತ್ತು. ಆದರೆ ಹಾಗಾಗದೇ ಕೇವಲ ಅಂಕಗಳ ತುಲನೆಯಲ್ಲೇ ಸಂತೃಪ್ತಿ ಹೊಂದುತ್ತ ಕುಶಲತೆಯೇ ಇಲ್ಲದ ಜನಸಮೂಹಗಳನ್ನು ಸೃಷ್ಟಿಸುವ ಕಾರ್ಖಾನೆಗಳಾಗುತ್ತ ಸಾಗಿವೆ. ಜ್ಞಾನ ಸುಧೆಯ ಹೀರುವಿಕೆ ಸರ್ವಸಮಾನವಾಗಿಲ್ಲ. ಸಂವಿಧಾನದಲ್ಲಿ ಶಿಕ್ಷಣ ಎಲ್ಲರ ಹಕ್ಕೆಂದು ನಮೂದಾಗಿದ್ದರೂ ಕೂಡ ಅದು ಕೇವಲ ಅಕ್ಷರಗಳಾಗಿಯೇ ಉಳಿದಿವೆ. ನನ್ನ ಊರ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಬರುವ ಅದೆಷ್ಟೋ ಸರಕಾರೀ ಶಾಲೆಗಳು ಶಿಕ್ಷಕರಿಲ್ಲದೇ, ವಿದ್ಯಾರ್ಥಿಗಳೇ ಇಲ್ಲದೇ ಮುಚ್ಚಿ ಹೋಗಿವೆ. ಅಳಿದುಳಿದ ಶಾಲಾ ಕಟ್ಟಡಗಳು ಮತ್ತು ಅಲ್ಲಿನ ಮೂಲಭೂತ ಸೌಕರ್ಯಗಳನ್ನು ಕಂಡು ಈ ದೆಹಲಿಯ ಶಾಲಾ ಕಾಲೇಜುಗಳಿಗೆ ಹೋಲಿಸಿದಾಗ ಮನಸ್ಸಿಗೆ ಅತೀವ ದುಃಖವಾಗುತ್ತದೆ. ಇದನ್ನೆಲ್ಲ ಕಾಣುವುದಕ್ಕಾಗಿ ನಾವು ಸ್ವಾತಂತ್ರ್ಯ ಪಡೆದುದೇ?

**ಎಲ್ಲಿ ಮನೆಯು ಅಡ್ಡಗೋಡೆ ಇಲ್ಲದೇ ವಿಶಾಲವೋ**
**ಎಲ್ಲಿ ಮಾತು ಸತ್ಯದಾಳದಿಂದ ಹೊಮ್ಮಿ ಬರುವುದೋ. . . ಆ ಸ್ವತಂತ್ರ ಸ್ವರ್ಗಕೇ.**

ಸರ್ವತಂತ್ರ ಸ್ವತಂತ್ರ ದೇಶ ನಮ್ಮ ಪ್ರಜಾತಂತ್ರ ಭಾರತದ ಸುಸೂತ್ರ ಆಡಳಿತಕ್ಕಾಗಿ ರಾಜ್ಯಗಳ ವಿಂಗಡಣೆಯಾಯಿತು. ರಾಜ್ಯಗಳ ಉಸ್ತುವಾರಿಗೆ ರಾಜ್ಯಪಾಲರು, ಮುಖ್ಯಮಂತ್ರಿಗಳನ್ನು ಪ್ರತಿಷ್ಠಾಪಿಸುವ ವ್ಯವಸ್ಥೆ ಮಾಡಲಾಯಿತು. ಆದರೆ ರಾಜ್ಯಗಳ ಹಂಚಿಕೆಯೊಂದಿಗೆ ಆಯಾ ಪ್ರದೇಶಗಳ ನೆಲ ಜಲ ಸಂಪನ್ಮೂಲಗಳೂ ಹಂಚಿ ಹೋದದ್ದು ಅತಿದೊಡ್ಡ ವಿಪರ್ಯಾಸ. ಒಂದು ರಾಜ್ಯದ ನೀರನ್ನು ಇನ್ನೊಂದು ರಾಜ್ಯಕ್ಕೆ ಬಿಡಲಾರದಷ್ಟು ಅಡ್ಡಗೋಡೆಗಳನ್ನು ನಾವು ನಿರ್ಮಿಸಿಕೊಂಡಿದ್ದೇವೆ. ಇನ್ನು ಗಾಳಿಯೂ ಹಿಡಿತಕ್ಕೆ ಸಿಕ್ಕಿದ್ದರೆ ಬಹುಶಃ ಇನ್ನೊಬ್ಬರಿಗೆ ಉಸಿರಾಡುವುದಕ್ಕೆ ಬಿಡುತ್ತಿರುವುದಿಲ್ಲವಾಗಿತ್ತೋ ಏನೋ! ಹೃದಯ ವೈಶಾಲತೆಯನ್ನು ಕಳೆದುಕೊಳ್ಳುವಲ್ಲಿಗೆ ನಾವು ಮುನ್ನುಗ್ಗುತ್ತಿದ್ದೇವೆ. ಅಲ್ಲೊಮ್ಮೆ ಇಲ್ಲೊಮ್ಮೆ ಕವಿ–ಸಂತರ ಮೂರ್ತಿಗಳನ್ನು ಸ್ಥಾಪಿಸಿ ನಮ್ಮ ಹೃದಯ ವೈಶಾಲತೆಯನ್ನು ಮೆರೆದಿದ್ದರೂ ಅದರ ಹಿಂದೆ ಮತ್ತದೇ ರಾಜಕೀಯವೆಂಬ ಕೈವಾಡ ಇದ್ದೇ ಇರುವುದು ನಮ್ಮ ಮನಸ್ಸು ಅದೆಷ್ಟು ಕೊಳಕಾಗುತ್ತ ಸಾಗಿದೆ ಎಂಬುದಕ್ಕೆ ನಿದರ್ಶನಗಳೇ.


**ಎಲ್ಲಿ ನೀನು ನಮಗೆ ಧೈರ್ಯ, ಎಲ್ಲಿ ನೀನು ನಮಗೆ ಸ್ಥೈರ್ಯ ವರ ವಿಶಾಲಗೊಳಿಸಿ ಸದಾ ಅಭ್ಯುದಯವ ಕೋರುವೆಯೋ. . ಆ ಸ್ವತಂತ್ರ ಸ್ವರ್ಗಕೇ**

ದೇಶದ ಪ್ರಜೆಗಳಲ್ಲಿ ಪರಸ್ಪರರಲ್ಲಿ ಧೈರ್ಯ, ಸ್ಥೈರ್ಯ ಸ್ಫೂರ್ತಿಯ ಸೆಲೆಯಾಗುವುದಕ್ಕಾಗಿ ಪ್ರೇರಣೆ ನೀಡುವ ನಾಯಕರನ್ನೀ ಸ್ವತಂತ್ರ ದೇಶದಲ್ಲಿ ಹುಡುಕಬೇಕಿದೆ. ದೇಶದ ಚುಕ್ಕಾಣಿ ಹಿಡಿದ ನಾಯಕನ ಮೇಜಿನಿಂದಲೇ ಅದೆಷ್ಟೋ ಕೋಟಿ ರೂಪಾಯಿಗಳ ಹಗರಣಗಳ ಯೋಜನಾ ಪತ್ರಗಳು ಮಂಜೂರಿ ಪಡೆದು ದೇಶದಲ್ಲಿ ಹಣಕಾಸಿನ ಅವ್ಯವಸ್ಥೆಗೆ ಕಾರಣವಾಗುತ್ತಿರುವಾಗ ಬಡಪಾಯಿ ಶ್ರೀಸಾಮಾನ್ಯ ಯಾರನ್ನು ಕಂಡು ತನಗೆ ತಾನು ಸಮಾಧಾನ ಹೇಳಿಕೊಳ್ಳಬೇಕು? ಯಾರಿಂದ ಸ್ಫೂರ್ತಿಹೊಂದಬೇಕು? ಯಾರು ಅವನಿಗೆ ಧೈರ್ಯ ತುಂಬುವವರು? ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗಗಳ ಮಟ್ಟ ಎಲ್ಲರಿಗೂ ಅಭ್ಯುದಯವನ್ನು ಕೋರುವ ಬದಲಾಗಿ ತಮ್ಮ ಮನೆತನ ಜಾತಿ, ಕೋಮು, ನೆಂಟರ, ಇಷ್ಟರ ಅಭ್ಯುದಯಕ್ಕಾಗಿ ಹಗಲಿರುಳೂ ಹಗರಣಗಳನ್ನು ಮಾಡುತ್ತಾ ದೇಶದ ಮಹಾ ಅರ್ಥದರಾಗಿ ಮೆರೆಯುವುದಕ್ಕಾಗಿಯೇ ಪಡೆದುದು ಈ ಸ್ವಾತಂತ್ರ್ಯವನ್ನು? ಇದಕ್ಕಿಂತ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಹೋರಾಡುತ್ತಿರುತ್ತಿದ್ದರೇ ಎಷ್ಟೋ ಚಂದವಿತ್ತು. ಧೈರ್ಯ, ಸ್ಥೈರ್ಯಕ್ಕಾಗಿ ಒಬ್ಬ ನೇತಾರನಿದ್ದ, ದೇಶಪ್ರೇಮದ ಹುಚ್ಚು ಹೊಳೆಯಲ್ಲಿ ಮೀಯುತ್ತ, ಮುಳುಗೇಳುತ್ತಿರಬಹುದಾಗಿತ್ತು.

ಜನನ ಮರಣ ದಿನಗಳನ್ನಾಚರಿಸಿಕೊಳ್ಳುವುದರಲ್ಲಿಲ್ಲ ಜೀವನದ ಹಿರಿಮೆ. ಹಿರಿಮೆ ಇರುವುದಾದರೆ ಅದು ಜೀವನವನ್ನು ಜೀವಿಸುವ ಬಗೆಯಲ್ಲಿ. . . ದೇಶದ ಸ್ವಾತಂತ್ರ್ಯ ದಿನವನ್ನು ಆಚರಿಸುವುದರಲ್ಲಿ ಏನೂ ಸಂಭ್ರಮ ಕಾಣಿಸುತ್ತಿಲ್ಲ. ಅದೊಂದು ಸರಕಾರೀ ದುಂದುವೆಚ್ಚದ ಉತ್ಸವವಾಗಿ ಪರಿಣಮಿಸಿಬಿಟ್ಟಿದೆ. ದೇಶದ ಸ್ವಾತಂತ್ರ್ಯದ ಹಿರಿಮೆ ಕಾಣಬೇಕಾದರೆ ಅದು ಪ್ರತಿಫಲಿಸಬೇಕು ಜನ ಸಾಮಾನ್ಯನ, ಅಬಲೆ ಸ್ತ್ರೀಯ ಜೀವನ ಕೃತಾರ್ಥತೆಯಲ್ಲಿ, ಅವರ ಕಣ್ಣುಗಳ ಆನಂದದ ಭಾಷ್ಪಗಳಲ್ಲಿ. ಆ ಆನಂದ ಭಾಷ್ಪಗಳನ್ನು ತೋರಿಸುವ ಸ್ವಾತಂತ್ರ್ಯದ ನಿರೀಕ್ಷೆಯಲ್ಲಿ.. .

**■ ಸಂತೋಷ್ ಕುಮಾರ್ ಉಪಾಧ್ಯಾಯ**

# ಡಾ. ಜಿ.ಎ. ಬಿರಾದಾರರ ಪುಸ್ತಕ ಬಿಡುಗಡೆ




ಕೇಂದ್ರ ಸಂಸ್ಕೃತಿ ಮಂತ್ರಾಲಯದ ಭಾರತ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯಲ್ಲಿ ಪತ್ರಾಗಾರ ಅಧಿಕಾರಿಗಳಾಗಿರುವ ಡಾ. ಜಿ.ಎ. ಬಿರಾದಾರ ಅವರು ಬರೆದ ಇಂಗ್ಲಿಷ್ ಪುಸ್ತಕ "Mahatma Gandhi's Campaign Against Untouchability in Karnataka" ವನ್ನು ಭಾರತ ರಾಷ್ಟ್ರೀಯ ಪತ್ರಾಗಾರದ ಮಹಾ ನಿರ್ದೇಶಕರಾದ ಪ್ರೊ. ಮುಶಿರುಲ್ ಹಸನ್ ಅವರು ಜುಲೈ 16, 2011ರಂದು ನವದೆಹಲಿಯ ಗಾಂಧಿ ಪೀಸ್ ಫೌಂಡೇಶನ್‌ನಲ್ಲಿ ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ. ಆರ್.ಸಿ. ಪ್ರಧಾನ್ ಅವರು ವಹಿಸಿದ್ದರು.

ಗಾಂಧಿ ಪೀಸ್ ಫೌಂಡೇಶನ್‌ನ ಕಾರ್ಯದರ್ಶಿ ಸುರೇಂದ್ರ ಕುಮಾರ್ ಅವರು ಪ್ರಾಸ್ತಾವಿಕ ಭಾಷಣ ಮಾಡಿ ಕಾರ್ಯಕ್ರಮದಲ್ಲಿ ಭಾಗವಹಿಸಿದರೆಲ್ಲರನ್ನೂ ಸ್ವಾಗತಿಸಿದರು. ತದನಂತರ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಬಿಡುಗಡೆಯಾದ ಕೃತಿಯ ಕುರಿತು ಮಾತನಾಡಿದರು. 1934ರಲ್ಲಿ ಮಹಾತ್ಮ ಗಾಂಧೀಜಿ ಅವರು ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಅಖಿಲ ಭಾರತ ಪ್ರವಾಸ ಕೈಗೊಂಡಾಗ, 21ದಿನ ಕರ್ನಾಟಕದಲ್ಲಿಯೂ ತಿರುಗಾಡಿದರು. ಅವರ ಪ್ರವಾಸದ ಪೂರ್ಣ ವಿವರವನ್ನು ದಾಖಲೆಗೊಂದಿಗೆ ಬರೆದಿರುವ ಡಾ. ಜಿ.ಎ. ಬಿರಾದಾರರು ಅಭಿನಂದನಾರ್ಹರು ಎಂದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಪ್ರೊ. ಮುಶಿರುಲ್ ಹಸನ್ ಅವರು ಭಾರತ ರಾಷ್ಟ್ರೀಯ ಸಂಗ್ರಾಮದ ಅವಧಿಯಲ್ಲಿ ಮಹಾತ್ಮ ಗಾಂಧೀಜಿಯವರು ಸಮಾಜದಲ್ಲಿನ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮಾಡಿದ ಪ್ರಯತ್ನ ಕುರಿತು ಮಾತನಾಡಿ ಕರ್ನಾಟಕ ಭಾಗದಲ್ಲಿನ ಅವರ ಕಾರ್ಯವನ್ನು ಸಹದ್ಯೋಗಿ ಡಾ. ಜಿ.ಎ. ಬಿರಾದಾರ ಬಹು ಪ್ರಯಾಸಪಟ್ಟು ಸುಂದರ ಹಾಗೂ ಸರಳವಾಗಿ ಓದುಗರಿಗೆ ದೊರಕಿಸಿದ್ದಕ್ಕಾಗಿ ಅಭಿನಂದಿಸಿದರು.

ಕೃತಿಯ ಲೇಖಕರಾದ ಡಾ. ಜಿ.ಎ. ಬಿರಾದಾರ ಅವರು ತಮ್ಮ ಕೃತಿಯ ಬಗ್ಗೆ ಹೆಚ್ಚೇನು ಮಾತನಾಡದೆ ತಮ್ಮ ಭಾಷಣದಲ್ಲಿ ಮುಖ್ಯವಾಗಿ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಪ್ರೊ. ಆರ್.ಸಿ. ಪ್ರಧಾನ್ ಅವರು ತಮ್ಮ ಅಧ್ಯಕ್ಷೀಯ ಭಾಷಣವನ್ನು ಹಿಂದಿಯಲ್ಲಿ ಮಾಡಿದರು. "ಭಾರತದ ರಾಷ್ಟ್ರೀಯ ಸಂಗ್ರಾಮದ ಅವಧಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಪಡೆಯುವುದಷ್ಟೇ ಮಹಾತ್ಮ ಗಾಂಧೀಜಿಯವರ ಉದ್ದೇಶ ಮತ್ತು ಗುರಿಯಾಗಿರಲಿಲ್ಲ. ದೇಶದ ಸ್ವಾತಂತ್ರ್ಯದೊಂದಿಗೆ ಸಾಮಾಜಿಕ ಸ್ವಾತಂತ್ರ್ಯವು ಅವಶ್ಯವಿದ್ದಿತು. ಆದ್ದರಿಂದ ಗಾಂಧೀಜಿ ಹರಿಜನ ಚಳವಳಿ, ಖಾದಿ ಚಳವಳಿಯಂತಹ ವಿಧಾಯಕ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ಮಾಡಿದರು" ಎನ್ನುತ್ತಾ ಲೇಖಕ ಡಾ. ಜಿ.ಎ. ಬಿರಾದಾರ ಅವರನ್ನು ಅಭಿನಂದಿಸಿದರು.

ಬಾಲಕೃಷ್ಣ ನಾಯ್ಕ್ ಡಿ. ಅವರು ಸಮಾರೋಪ ಭಾಷಣ ಮಾಡಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

**■ ಬಾಲಕೃಷ್ಣ ನಾಯ್ಕ್ ಡಿ.**

## ಉಚಿತ ವೈದ್ಯಕೀಯ ತಪಾಸಣೆ

ಆಗಸ್ಟ್ ತಿಂಗಳ 28ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

# ದೆಹಲಿ ಕರ್ನಾಟಕ ಸಂಘಕ್ಕೆ ಮುಖ್ಯಮಂತ್ರಿ ಚಂದ್ರು ನಿಯೋಗದ ಭೇಟಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದಲ್ಲಿ ದೆಹಲಿಗೆ ಕರೆತಂದಿದ್ದ ಸಾಹಿತಿಗಳು, ಚಿಂತಕರು, ಶಿಕ್ಷಣ ತಜ್ಞರು, ಸಾಂಸ್ಕೃತಿಕ ಮತ್ತು ಕಾರ್ಮಿಕ ಸಂಘಟನೆಗಳ ನಾಯಕರುಗಳನ್ನು ಒಳಗೊಂಡ ನಿಯೋಗವು ಆಗಸ್ಟ್ 1, 2011ರ ಸಂಜೆ ದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಅವರೊಡನೆ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿತು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಲ್ಲೂರು ಪ್ರಸಾದ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ರಾಜಾರಾಂ, ಹಂಪಿ ಕನ್ನಡ




ವಿಶ್ವವಿದ್ಯಾಲಯದ ಕುಲಪತಿ ಡಾ. ಮುರಿಗೆಪ್ಪ ಹಾಗೂ ಇನ್ನಿತರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಆಗಮಿಸಿದ್ದರು. 'ಕನ್ನಡ–ಕನ್ನಡಿಗ–ಕರ್ನಾಟಕ' ಕುರಿತಂತೆ ಪ್ರಮುಖವಾದ ನಾಲ್ಕು ಅಂಶಗಳನ್ನು ಕೇಂದ್ರ ಸರ್ಕಾರದ ಪ್ರಮುಖ ರಾಜಕೀಯ ನಾಯಕರೊಡನೆ ಚರ್ಚಿಸಿ, ಪರಿಹಾರಕ್ಕಾಗಿ ಮನವಿ ಸಲ್ಲಿಸುವ ಸಲುವಾಗಿ ಎರಡನೆಯ ಬಾರಿ ನಿಯೋಗವು ದೆಹಲಿಗೆ ಭೇಟಿ ನೀಡಿತು. ಪ್ರಮುಖವಾಗಿ ಕನ್ನಡ ಶಾಸ್ತ್ರೀಯ ಭಾಷೆಯ ಸಂಶೋಧನಾ ಕೆಲಸಗಳಿಗೆ ಆಗಿರುವ ಹಿನ್ನಡೆ, ಸ್ಥಳೀಯ ಭಾಷಿಕರಿಗೆ ಉದ್ಯೋಗ–'ರಾಷ್ಟ್ರೀಯ ಉದ್ಯೋಗ ನೀತಿ'ಯ ಜಾರಿಗೆ, ಶಿಕ್ಷಣ ಮಾಧ್ಯಮವಾಗಿ ರಾಜ್ಯಭಾಷೆಯನ್ನು (ಮಾತೃಭಾಷೆ) ಬಳಸಲು 'ರಾಷ್ಟ್ರೀಯ ಶಿಕ್ಷಣ ನೀತಿ' ರಚನೆ ಹಾಗೂ ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರಿನ ಶಾಖೆಗೆ ಸ್ವಾಯತ್ತತೆ ನೀಡಿ ಕಾರ್ಯಾರಂಭ ಮಾಡುವಂತಾಗಲು ಕ್ರಮ–ಈ ಕುರಿತಾದ ಉದ್ದೇಶಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅವರು ಸಭೆಗೆ ವಿಶದವಾಗಿ ವಿವರಿಸಿದರು. ಈ ನಿಟ್ಟಿನಲ್ಲಿ ದೆಹಲಿ ಕನ್ನಡಿಗರು ಎಲ್ಲ ಕನ್ನಡಿಗರ ಪರವಾಗಿ ಕೇಂದ್ರ ಸರ್ಕಾರದ ಸಂಬಂಧಿತ ಇಲಾಖೆಗೆ ಒತ್ತಡ ಹೇರಬೇಕೆಂದು ಕೋರಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ನಿಯೋಗದ ಜೊತೆ ಸಹಕರಿಸುವುದಾಗಿ ಭರವಸೆ ಇತ್ತರು. ದೆಹಲಿ ಕರ್ನಾಟಕ ಸಂಘವು ಕನ್ನಡೇತರರಿಗೆ ಕನ್ನಡ ಕಲಿಸುವ ಯೋಜನೆಯನ್ನು ಮುಂದಿಟ್ಟು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಇದಕ್ಕೆ ಸಹಯೋಗ ನೀಡಬೇಕಾಗಿ ಕೋರಿದರು. ದೆಹಲಿಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಪೀಠ ಸ್ಥಾಪನೆ, ದೆಹಲಿ ಕನ್ನಡ ಶಾಲೆಯಲ್ಲಿ ಕನ್ನಡ ಪರ ಚಟುವಟಿಕೆಗಳು, ಕರ್ನಾಟಕ ಆಹಾರ ಮೇಳ, ನಾಟಕೋತ್ಸವ, ಚಿತ್ರೋತ್ಸವ ಮೊದಲಾದ ವಿಚಾರಗಳನ್ನು ಕುರಿತಂತೆ ಚರ್ಚಿಸಲಾಯಿತು. ಕನ್ನಡ ಕಲಿಕಾ ಕೇಂದ್ರಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಭರವಸೆ ಇತ್ತರು. ಅಲ್ಲದೇ ಭಾಷಾ ಬಾಂಧವ್ಯ ಜಾತ್ರೆಯನ್ನು ದೆಹಲಿಯಲ್ಲಿ ಹಮ್ಮಿಕೊಳ್ಳುವ ಯೋಜನೆಯನ್ನು ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಲ್ಲೂರು ಪ್ರಸಾದ್ ಅವರು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳನ್ನು ಶ್ಲಾಘಿಸುತ್ತಾ ಮುಂಬರುವ ದಿನಗಳಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದೆಹಲಿಯಲ್ಲಿ ಹಮ್ಮಿಕೊಳ್ಳುವ ಬಯಕೆಯನ್ನು ವ್ಯಕ್ತಪಡಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಂ.ಎಚ್. ಕೃಷ್ಣಯ್ಯ, ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಮುರಿಗೆಪ್ಪ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಬಿ.ವಿ. ರಾಜಾರಾಂ, ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ವಿಷ್ಣು ನಾಯ್ಕ್ ಮೊದಲಾದವರು ಸಂವಾದದಲ್ಲಿ ಪಾಲ್ಗೊಂಡು ರಾಷ್ಟ್ರದ ರಾಜಧಾನಿಯಲ್ಲಿ ವರ್ಷದಲ್ಲಿ ನಾಲ್ಕಾರು ಕಾರ್ಯಕ್ರಮಗಳನ್ನು ಆಯೋಜಿಸಿ ಕನ್ನಡದ ಕಂಪನ್ನು ಕನ್ನಡೇತರರಿಗೆ ಪಸರಿಸುವ ಮನೋಭಿಲಾಷೆಯನ್ನು ವ್ಯಕ್ತಪಡಿಸಿದರು. ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯಕ್ಕೆ ನೂರು ಪುಸ್ತಕಗಳನ್ನು ನೀಡುವುದಾಗಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ತಿಳಿಸಿದರು. ಕರ್ನಾಟಕದಿಂದ ಆಗಮಿಸಿದ್ದ ವಿವಿಧ ಅಕಾಡೆಮಿಗಳ ಅಧ್ಯಕ್ಷರುಗಳೊಡನೆ ನಡೆದ ಭೇಟಿ ನಿಜಕ್ಕೂ ಫಲದಾಯಕವಾಗಿ ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಉತ್ತಮ ಕಾರ್ಯಕ್ರಮಗಳು ಜರುಗುವುದು ಅತ್ಯಂತ ಹೆಮ್ಮೆಯ ಹಾಗೂ ಸಂತಸದ ಸಂಗತಿ.

**ಸಂಘದಲ್ಲಿ ಕನ್ನಡ ಕಲಿಕೆ ತರಗತಿಗಳನ್ನು ಇದೇ ಆಗಸ್ಟ್ ತಿಂಗಳನಲ್ಲಿ ಪ್ರಾರಂಭಿಸಲಾಗುವುದು. ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು.**

# ನಮ್ಮ ಎನ್ಜೆ ಕಾಮತರು



ಎಷ್ಟೋ ವರುಷಗಳಿಂದ ಅವರನ್ನು ನಾನು 'ಎನ್ಜೆ ಕಾಮತ'ರೆಂದೆ ಬಲ್ಲೆ. ಪ್ರೀತಿಯಿಂದ ಅವರನ್ನು ನಾವು 'ಕಾಮತ್ ಸಾಹೇಬ'ರು ಎಂದು ಕರೆದಿದ್ದೂ ಇದೆ. ನಮ್ಮ ದೇಶದಲ್ಲಿ ಐ.ಎ.ಎಸ್. ಅಧಿಕಾರಿಗಳು ಸಾಹೇಬರೇ ಸರಿ. ಐ.ಎ.ಎಸ್ ಅಧಿಕಾರಿಗಳಾಗಿ ನಿವೃತ್ತರಾದರೂ ಈ ಬಗೆಯ ಪಟ್ಟಿಗೆ ನಮ್ಮ ಎನ್ಜೆ ಕಾಮತರು ಸೇರಿದವರಲ್ಲ. ದರ್ಪವಿಲ್ಲದ ಸರಳ ವ್ಯಕ್ತಿಯಾಗಿದ್ದಾರೆ. ನಮ್ಮ ದೇಶದ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯ ಉದಯ ಕಾಲದಲ್ಲಿ ಉತ್ಸಾಹ ಹಾಗೂ ಹೊಸ ಆಶಯಗಳೊಂದಿಗೆ ಸರಕಾರಿ ಸೇವೆಯಲ್ಲಿ ಸೇರಿದವರು. ತೀರಾ ನಿರಾಳವಾಗಿ ಕಾಣುವ ಕಾಮತರು ಆರು ದಶಕಗಳ ಹಿಂದೆ ನಮ್ಮ ದೇಶದ ಚರಿತ್ರೆಯ ಪುಟಗಳಲ್ಲಿ ಓಡಿಯಾಡಿದವರು ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಏನೇ ಇರಲಿ, ಅವರೊಂದಿಗೆ ನಾನು ಆತ್ಮೀಯವಾಗಿ ಒಡನಾಡಿ ಹತ್ತಿರ ಹತ್ತಿರ ಎರಡು ದಶಕಗಳೇ ಕಳೆದು ಹೋದವು. ಆಗಿನ ದೆಹಲಿ ಕರ್ನಾಟಕ ಸಂಘದ ಮಹಡಿಯ ಮೆಟ್ಟಿಲುಗಳನ್ನು ಅವರು ತಮ್ಮ ಬಾಳಸಂಗಾತಿ ದಿ। ಶಾಂತಿ ಕಾಮತರವರೊಂದಿಗೆ ನಿಧಾನವಾಗಿ ಹತ್ತುವ ಪರಿ ನನಗೆ ಇನ್ನೂ ಕಣ್ಣಿಗೆ ಕಟ್ಟಿದಂತೆ ಇದೆ. ಆಗ ಅವರು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿದ್ದರು. ತಮ್ಮನ್ನು ಕರ್ನಾಟಕ ಸಂಘಕ್ಕೆ ಪರಿಚಯಿಸಿದವರು ದಿ। ಶ್ರೀ ಗೋಪಾಲ ಶಾಸ್ತ್ರಿಯವರು ಹಾಗೂ ದಿ। ಶ್ರೀ ಎ. ಪಿ. ಕುಮಟಾಕರವರು ಎಂಬುದಾಗಿ ಕಾಮತರೇ ಹೇಳಿಕೊಳ್ಳುತ್ತಾರೆ. ಅವರನ್ನು ದೆಹಲಿಯ ಕನ್ನಡದ ಕಂಪಿಗೆ ಒಲಿಸಿಕೊಂಡ ಈ ಎರಡು ಚೇತನಗಳು ಈಗ ನಮ್ಮೊಂದಿಗೆ ಇಲ್ಲ. ಆದರೆ ಆಗ ತೊದಲು ಕನ್ನಡ ನುಡಿಯತೊಡಗಿದ್ದ ಕಾಮತರು ನಿಧಾನವಾಗಿ ಇದ್ದವರೊಂದಿಗೆ ಸದ್ದಿಲ್ಲದೆ ಕನ್ನಡ ಸೇವೆಯಲ್ಲಿ ತೊಡಗಿಕೊಂಡು ಬಿಟ್ಟರು. ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಿಕ್ಷಣ ಸಂಸ್ಥೆಗಳಿಗೆ ಅವರ ಸೇವೆಯ ಹಾಗೂ ಆಡಳಿತ ಅನುಭವದ ಲಾಭ ದೊರೆತದ್ದು ಈ ಸಂಸ್ಥೆಗಳ ಬೆಳವಣಿಗೆಯ ದಾರಿಯಲ್ಲೇ ಒಂದು ಮೈಲಿಗಲ್ಲು ಎಂದರೆ ಉತ್ಪ್ರೇಕ್ಷೆಯಲ್ಲ. 'ಎನ್ಜೆ' ಎಂಬ ಆಂಗ್ಲ ಭಾಷೆಯ ಅಕ್ಷರಗಳನ್ನು ಕಾಮತರವರೆ ಬಿಡಿಸಿ ತನ್ನ ಪೂರಾ ಹೆಸರು 'ನರಸಿಂಹ ಜನಾರ್ದನ ಕಾಮತ' ಎಂದು ಮೊನ್ನೆಯಷ್ಟೆ ತಿಳಿಸಿದಾಗ ತಿಳಿಯಿತು. ದೆಹಲಿಯ ಕನ್ನಡಿಗರಿಗೆಲ್ಲಾ ಅವರು ಈಗಲೂ ಎನ್ಜೆ ಕಾಮತರೇ.

ಅವರ ಬಾಲ್ಯದ ದಿನಗಳ ಸುದ್ದಿಯನ್ನು ಅವರಿಂದಲೇ ಕೇಳಬೇಕು. ಆಗಲೇ ಹೇಳಿದಂತೆ, ದೇಶದ ಚರಿತ್ರೆಯ ಭಾಗವಾಗಿದೆ ಅವರ ಬದುಕು. ಅವರ ಹುಟ್ಟಿದೂರಿನ ಬೇರುಗಳು ಈಗ ಶಿಥಿಲವಾಗಿವೆ. ಆದರೂ ನೆನಪಿನ ಆಳವನ್ನು ಕೆದಕುವುದು ಅವರಿಗೆ ಆನಂದದ ವಿಷಯ... ಎಲ್ಲೋ ದುರ್ಬೀನ್‌ನಲ್ಲಿ ಇಣುಕಿ ನೋಡುವವರಂತೆ... 1920ರ ದಶಕದ ಮೊದಲಭಾಗದಲ್ಲಿ ಜನಿಸಿದ ಕಾಮತರ ಊರು ಮಂಗಳೂರಿನ ಬಳಿಯ ಹೊಸದುರ್ಗ. ಈಗ ಕೇರಳದ ಉಡಿಯಲ್ಲಿದೆ. ಯಾವುದೊ 'ಮೋಹನ ಮುರಳಿ'ಯ ಮೋಡಿಗೆ ಒಳಪಟ್ಟವರಂತೆ ಊರನ್ನು ಬಿಟ್ಟವರು, ಇನ್ನೂ ಯಾವುದೋ ಹುಡುಕಾಟದಲ್ಲಿ ಇದ್ದವರಂತೆ ತೋರುತ್ತಾರೆ. ಅವರ ತಂದೆಯವರಿಗೆ ಆಗಿನ ಮದ್ರಾಸ್ ಪ್ರಾಂತ್ಯದಲ್ಲಿ ಸರಕಾರಿ ಕೆಲಸ. ಹೀಗಾಗಿ ಊರೂರು ಸುತ್ತುವಂತಾಯಿತು. ಹತ್ತಾರು ಭಾಷೆಗಳನ್ನು ಕಲಿತರು. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ, ನಂತರದಲ್ಲಿ ಐ.ಸಿ.ಎಸ್ ಸೇರಿದರು. ನಮ್ಮ ದೇಶದ ಚರಿತ್ರೆಯ ಪ್ರಮುಖ ಘಟ್ಟವದು. ಒಂದು ಬಗೆಯ ತಲ್ಲಣ, ಅರಾಜಕತೆ, ಸಾವು–ನೋವಿನ ಕಾಲ. ಗಾಂಧೀ, ನೆಹರು, ಪಟೇಲ, ಮೌಲಾನಾ ಹಾಗೂ ಇತರ ದಿಗ್ಗಜರು ಇದ್ದ ಕಾಲ. ಈ ಎಲ್ಲ ದಿಗ್ಗಜರೂಂದಿಗೆ ಹೆಗಲಿಗೆ ಹೆಗಲು ಸೇರಿಸಿ ಕೆಲಸ ಮಾಡುವ ಸೌಭಾಗ್ಯ ಕಾಮತರದ್ದಾಗಿತ್ತು. ಅವರ ನಡೆ–ನುಡಿ ಹಾಗೂ ಒಟ್ಟಾರೆ ಬದುಕಿನಲ್ಲಿ ಈ ಕಾಲದ ಕಳಕಳಿ ಈಗಲೂ ಪಡಿಮೂಡಿ ಬರುತ್ತಿರುತ್ತದೆ.

ಭಾರತ ಸರಕಾರದ ವಿವಿಧ ಇಲಾಖೆಗಳಲ್ಲಿ, ಅದರಲ್ಲೂ ಪ್ರಮುಖವಾಗಿ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಗಳ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ ಈ ಮಹಾನುಭಾವರು ಈಗ ದಕ್ಷಿಣ ದೆಹಲಿಯ ಕೈಲಾಸ ಕಾಲೋನಿಯಲ್ಲಿನ ತಮ್ಮ ಸುಸಜ್ಜಿತ ಪುಟ್ಟ ಫ್ಲಾಟಿನಲ್ಲಿ ವಾಸಿಸುತ್ತಾರೆ. ಇವರು ಭಾರತ ಸರಕಾರದ ದೊಡ್ಡ ಅಧಿಕಾರಿಗಳಾಗಿದ್ದರು ಎಂಬುದಕ್ಕೆ ಅನುಮಾನ ಬರುವ ರೀತಿಯಲ್ಲಿ ಅವರ ಜೀವನ ಶೈಲಿಯಿದೆ. ವಾರದಲ್ಲಿ ನಾಲ್ಕಾರು ದಿನ ಗೋಲ್ಫ್ ಆಡಲು ಗೋಲ್ಫ್ ಕ್ಲಬ್ಬಿಗೆ ತಾವೇ ಸ್ವತಃ ಕಾರನ್ನು ನಡೆಸಿಕೊಂಡು ಹೋಗುತ್ತಾರೆ. ಅವರೊಂದಿಗೆ ಹಾಗೂ ಅವರಡಿಯಲ್ಲಿ ಕೆಲಸ ಮಾಡಿದ ಹತ್ತಾರು ಜನರು ದೂರವಾಣಿಯ ಮೂಲಕ, ಅವರ ಮನೆಯನ್ನು ಹುಡುಕಿಕೊಂಡು ಬರುವುದರ ಮೂಲಕ ಕಾಮತರನ್ನು ಓಲೈಸುತ್ತಾರೆ. ಅದೇ ಅವರಿಗೆ ಸಂತಸವನ್ನು ನೀಡುತ್ತದೆ. ಬದುಕಿನ ಏಕತಾನತೆ ಹಾಗೂ ಏಕಾಂಗಿತನದ ತೂಗುಯ್ಯಾಲೆಯಲ್ಲಿ ಅವರ ದಿನಗಳು ಸಾಗುತ್ತಿವೆ. ನಮ್ಮ ಬದುಕಿನ ಪ್ರತಿಯೊಂದು ಕ್ಷಣಗಳಿಗೂ ಇರುವ ಪ್ರಾಮುಖ್ಯತೆಯ ಅರಿವು ಕಾಮತರನ್ನು ಕಂಡಾಗ ನಮಗಾಗುತ್ತದೆ. ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ ಹೋಗಿರುವ ನಮ್ಮ ದೇಶದ ಸಾವಿರಾರು ಸತ್ತೆಯ ಹಿಂಬಾಲಕರಿಗೆ ಬದುಕಿನ ಈ ಗಳಿಗೆಗಳನ್ನು ಹಣದ ಮೂಲಕ ಖರೀದಿಸಲಾಗದು ಎಂಬ ಸತ್ಯವನ್ನು ಕಾಮತರ ಸರಳ ಜೀವನ ಶೈಲಿಯೇ ನಿರೂಪಿಸುತ್ತದೆ ಎಂದರೆ ತಪ್ಪಾಗಲಾರದು. ಯಾವ ಮಸೂದೆಯಲ್ಲೂ ಈ ಸತ್ಯವನ್ನು ಎರಕ ಹೊಯ್ಯಲಾಗದು. ಬಹುಶಃ ನಮ್ಮೆಲ್ಲರ ಅರಿವಿಗೆ ಮೀರಿದ ಸತ್ಯ ಈ ಬದುಕಿನಲ್ಲಿ ಅಡಗಿದೆ ಎಂಬುದು ಕಾಮತರು ಕಳೆದ ಒಂದು ದಶಕದಿಂದ ಅರಗಿಸಿಕೊಂಡ ಏಕಾಂಗಿ ಜೀವನದ ಸಾರವಾಗಿದೆ. ತಮ್ಮ ಬಾಳಸಂಗಾತಿಯ ಅಗಲಿಕೆಯ ನಂತರದ ಬದುಕನ್ನು ಅವರು ರೂಪಿಸಿಕೊಂಡ ರೀತಿ ಅಸಾಮಾನ್ಯವಾದದ್ದು. ತಮ್ಮ ಅಸಕ್ತಿ ವಲಯಗಳನ್ನು, ಆಧ್ಯಾತ್ಮಿಕ ಹಾಗೂ ಲೌಕಿಕ ಬದುಕಿನ ಹಂದರಗಳನ್ನು ಜತನದಿಂದ ಕಾಪಾಡಿಕೊಂಡು ಬಂದ ಅವರ ಪರಿ ಅಮೋಘವಾದದ್ದು. ಮುಂಬೈ, ಪುಣೆ, ಅಮೇರಿಕಾ...ಇಲ್ಲೆಲ್ಲಾ ಅವರು

ಹೋಗಿ ಮಕ್ಕಳೊಂದಿಗೆ ಒಂದಾಗಿ ಇರಬಹುದಾಗಿತ್ತು. 'ಎಲ್ಲಿಯ ತನಕ ನಡೆಯ ಬಲ್ಲೆನೊ ಅಲ್ಲಿಯ ತನಕ ನಡೆದೇನು' ಎಂಬ ತತ್ವದ ಮೇಲೆ ಸವಾರಿ ಮಾಡುತ್ತ, ಇದ್ದವರೊಂದಿಗೆ ಬದುಕನ್ನು ಹಂಚಿಕೊಳ್ಳುತ್ತ ತೊಂಬತ್ತರ ಗಡಿಯನ್ನು ದಾಟಲು ಅಣಿಯಾದವರು.

ತೊಂಬತ್ತರ ಅಂಚಿನಲ್ಲಿ ನಿಂತವರು ಇನ್ನೂ ಅರವತ್ತು ದಾಟದವರಂತೆ ಕಾಣುತ್ತಾರೆ. ಕಣ್ಣಿನಲ್ಲಿ ಇನ್ನೂ ತುಂಟತನ ಅಡಗಿದೆ. ನೇರ ನಡೆ; ಸ್ಪಷ್ಟ ನುಡಿ; ಚೂಪಾದ ಮುಖದ ಗಲ್ಲದಡಿಯಲ್ಲಿ ತಿದ್ದಿ ತೀಡಿದಂತಹ ಬೆಳ್ಳಿಯ ಲೇಪನದ ಚೂಪಾದ ಫ್ರೆಂಚ್ ಕಟ್ ಗಡ್ಡ. ಹಣೆಗೆ ಮುತ್ತಿಕ್ಕುವ ಬಿಳಿಯ ಕೂದಲುಗಳು. ಸದಾ ಸರಳ ಬಿಳಿಯ ಪೋಷಾಕಿನಲ್ಲಿರುವ ಕಾಮತರು, ಒಮ್ಮೊಮ್ಮೆ ಗರಿಗರಿಯಾದ ಸೂಟುಬೂಟು...ಬಟ್ಟೆ ಧರಿಸಿ ಬಂದಾಗ ಥೇಟ್ ಐ.ಎ.ಎಸ್. ಅಧಿಕಾರಿಗಳಂತೆ ಕಂಡು ಬಿಡುತ್ತಾರೆ. ಸುಮಾರು ಮೂರು ದಶಕಗಳ ಹಿಂದೆ ಭಾರತ ಆಡಳಿತ ಸೇವೆಯಿಂದ (ಐ.ಎ.ಎಸ್.) ನಿವೃತ್ತಿ ಪಡೆದ ಎನ್ವೆ ಕಾಮತರು ಎಲ್ಲ ನಿಜ ಅರ್ಥದಲ್ಲೂ ಹಾಗೂ ಯಾವ ಆಮಿಷಗಳಿಗೂ ಒಳಗಾಗದ ಭಾರತ ಆಡಳಿತ ಸೇವೆಯ ಒಬ್ಬ ಅತ್ಯುತ್ತಮ ಹಾಗೂ ದಕ್ಷ ಅಧಿಕಾರಿಯಾಗಿದ್ದವರು.

ಅಷ್ಟೇ ಅಲ್ಲ. ಸುಮಾರು ನಾಲ್ಕು ದಶಕಗಳ ತಮ್ಮ ಈ ಸರಕಾರಿ ಸೇವೆಯಲ್ಲಿ ಅವರು ದೇಶದ ಚರಿತ್ರೆಯ ಭಾಗವಾಗಿದ್ದವರು. ಭಾರತದ ಬೆಳವಣಿಗೆಯ ಸ್ಥಿತ್ಯಂತರ ಹಾಗೂ ಅಲ್ಲೋಲಕಲ್ಲೋಲತೆಯನ್ನು ಹತ್ತಿರದಿಂದ ಕಂಡವರು. ಎಲ್ಲದಕ್ಕೂ ಮಿಗಿಲಾಗಿ ಅವರು ನಮ್ಮ ದೇಶದ ಮೊದಲ ಐ.ಎ.ಎಸ್. ತಂಡದವರು. ಸ್ವಾತಂತ್ರ್ಯ ಪೂರ್ವದಲ್ಲಿ ಐ.ಸಿ.ಎಸ್. ಆದವರು (1944–45), ಸರದಾರ್ ಪಟೇಲರವರ (ನಮ್ಮ ದೇಶದ ಮೊದಲ ಗೃಹಮಂತ್ರಿ) ಅಡಿಯಲ್ಲಿ ಅವರ ನುಡಿಗಳನ್ನು ಕೇಳುತ್ತ ಐ.ಎ.ಎಸ್. ಸೇರಿದವರು. ಲಾಹೋರ್‌ನಿಂದ ತಿರುವನಂತಪುರದವರೆಗೆ, ಅತ್ತ ಚಿತ್ತಗಾಂಗ್ ಹಾಗೂ ಢಾಕಾ, ಬರ್ಮಾದವರಗೆ ಹಬ್ಬಿದ ದೇಶದ ಸರಕಾರಿ ನೌಕರಿಯನ್ನು ಸೇರಿದವರು. 1946–47ರ ಕಾಲದ ದೆಹಲಿಯ ರಸ್ತೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಮೃತ ದೇಹಗಳನ್ನು ತಮ್ಮ ಕೈಯಾರೆ ಎತ್ತಿದವರು. ನಂತರದಲ್ಲಿ ಅವರ ಜೀವನದಲ್ಲಿ ನಡೆದದ್ದೆಲ್ಲವೂ ಚರಿತ್ರೆಯೇ. ಅವರ ನೆನಪಿನ ಗಣಿಯಿಂದ ಈ ಚರಿತ್ರೆಯ ಭಾಗಗಳು ಆಗಾಗ್ಗೆ ಮುತ್ತಿನಂತೆ ಉದುರುತ್ತಿರುತ್ತವೆ. ತೊಂಬತ್ತರ ನಡಿಗೆಯಲ್ಲಿರುವ ಕಾಮತರಿಂದ ಈ ಮುತ್ತುಗಳನ್ನು ಆರಿಸಿಕೊಳ್ಳುವುದಾದರೂ ಹೇಗೆ? ಒಂದರ್ಥದಲ್ಲಿ ಅವರು ನಡೆಯುವ ಚರಿತ್ರೆಯಾಗಿದ್ದಾರೆ. ದೆಹಲಿಯ ಹಲವು ಹಿರಿಯ ಕನ್ನಡಿಗರೆಲ್ಲರ ಈ ಚಾರಿತ್ರಿಕ ಸೇವೆಯ ದಾಖಲೆಗಳನ್ನು ಪಡಿಮೂಡಿಸುವ ಕೆಲಸ ನಡೆಯಬೇಕಾಗಿದೆ. ದೆಹಲಿ ಕರ್ನಾಟಕ ಸಂಘವೂ ಈ ದಿಶೆಯಲ್ಲಿ ಯೋಚಿಸುವ ಅಗತ್ಯವಿದೆ.

ಕಾಮತರವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಚುಕ್ಕಾಣಿ ಹಿಡಿದಿದ್ದು ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿ. 2006ರ ಆಸುಪಾಸಿನಲ್ಲಿ ಅವರು ಈ ಸಂಸ್ಥೆಯ ಅಧ್ಯಕ್ಷರಾಗಿ ಚುನಾಯಿತರಾದರು. ಕನ್ನಡ ಶಾಲೆಗೆ ಬರುವ ಮುನ್ನ ಅವರು ದೆಹಲಿಯ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾದ ಸಮ್ಮರ್ ಫೀಲ್ಡ್ ಶಾಲೆಯ ಅಧ್ಯಕ್ಷರಾಗಿ ಹಲವಾರು ವರ್ಷಗಳ ಕಾಲ ಅತ್ಯುತ್ತಮ ಕೆಲಸ ಮಾಡಿ ಅದೊಂದು ದೆಹಲಿಯ ಉತ್ತಮ ಶಾಲೆಯಾಗುವಂತೆ ನೋಡಿಕೊಂಡಿದ್ದರು. 86ರ ಹರೆಯದಲ್ಲಿ ಮತ್ತೆ ಈ ಚುನಾವಣೆಯ ಗೊಂದಲಗಳು ತನಗೆ ಬೇಕಿಲ್ಲವೆಂದು ಅವರು ಖಡಾಖಂಡಿತವಾಗಿ ಹೇಳಿದ್ದರು. ಯಾರ ಮನಸ್ಸನ್ನೂ ನೋಯಿಸುವ, ಯಾವುದೇ ಒಂದು ಗುಂಪಿನ ನಾಯಕರಂತೆ ಈ ಚುನಾವಣೆಯಲ್ಲಿ ನಿಲ್ಲುವ ಮನಸ್ಥಿತಿ ಅವರದಾಗಿರಲಿಲ್ಲ. ಎಲ್ಲರ ಒತ್ತಾಸೆಗೆ ಓ ಗೊಟ್ಟು ಹುಂ ಎಂದರು. ಆದರೆ ಒಮ್ಮೆಯೂ ಯಾರ ವಿರುದ್ಧವೂ ಚಕಾರವೆತ್ತಲಿಲ್ಲ. ಒಂದು ಬಗೆಯ ನಿರ್ಲಿಪ್ತತೆಯ ಭಾವದಲ್ಲಿ ಚುನಾವಣೆಯ ಪ್ರಕ್ರಿಯೆಗೆ ಪಕ್ಕಾದರು. 2008ರಲ್ಲೂ ಹೀಗೇ ಆಯಿತು.

ಅವರ ಎರಡು ಅವಧಿಯಲ್ಲೂ ನಾನು ಶಿಕ್ಷಣ ಸಂಸ್ಥೆಯ ಚುನಾಯಿತ ಸದಸ್ಯನಾಗಿ ಕೆಲಸ ಮಾಡುವಾಗ ಅವರ ಕಾರ್ಯವೈಖರಿಯನ್ನು ಹತ್ತಿರದಿಂದ ಕಂಡಿದ್ದೇನೆ. ಎಲ್ಲರನ್ನೂ ಒಳಗೊಂಡು, ಎಲ್ಲರ ವಿಚಾರಗಳನ್ನು ಕೇಳಿದ ನಂತರವೇ ಅವರು ನಿಶ್ಚಯಗಳನ್ನು ತೆಗೆದುಕೊಳ್ಳುತ್ತಿದ್ದರು. ಎಲ್ಲ ನಿಶ್ಚಯಗಳು ಸಮಿತಿಯ ಚರ್ಚೆಯ ಮೂಲಕವೇ ಮೂಡುವಂತೆ ಅವರು ನೋಡಿಕೊಳ್ಳುತ್ತಿದ್ದರು. ಎಲ್ಲರಿಗೂ ಸಮಾನವಾದ ಹಾಗೂ ಸಮಾಧಾನಕರವಾದ ಉತ್ತರಗಳು ಅವರಿಂದ ದೊರೆಯುತ್ತಿದ್ದವು. ಶಾಲೆಯ ಹಾಗೂ ಕಂಪ್ಯೂಟರ್ ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗದವರೂ ಸಹ ಅವರೊಂದಿಗೆ ಬೆರೆತುಕೊಂಡು ಕೆಲಸ ಮಾಡುತ್ತಿದ್ದರು. ಹಾಗೆಂದು ಯಾರ ಕೆಲಸ-ಕಾರ್ಯಗಳಲ್ಲೂ ಅನಾವಶ್ಯಕವಾಗಿ ಮೂಗು ತೂರಿಸುವ ಜಾಯಮಾನವೇ ಇರಲಿಲ್ಲ. ಎಷ್ಟು ಬೇಕೊ ಅಷ್ಟೇ.

ಕಾಮತರನ್ನು ಕಂಡಾಗಲೆಲ್ಲಾ ನನಗೆ ಝೆನ್ ಕತೆಯೊಂದು ನೆನಪಾಗುತ್ತದೆ. ಆ ಕ್ಷಣದಲ್ಲಿ...ಕ್ಷಣದಿಂದ ಕ್ಷಣಕ್ಕೆ ಬದುಕಬೇಕು ಎನ್ನುತ್ತದೆ ಝೆನ್. ಶಿಷ್ಯನೊಬ್ಬ ತನ್ನ ಗುರುವಿನ ಈ ಉಪದೇಶವನ್ನು ಪರೀಕ್ಷಿಸಲು ಮುಂದಾದ. ಇನ್ನೇನು ಗುರುಗಳ ಪ್ರಾಣಪಕ್ಷಿ ಹಾರಿಹೋಗುವ ಹೊತ್ತಿನಲ್ಲಿ ಅವರಿಗೆ ಅತ್ಯಂತ ಪ್ರಿಯವಾದ ಸಿಹಿತಿಂಡಿಯನ್ನು ಬಾಯಿಯಲ್ಲಿ ಇರಿಸಿ 'ಈಗ ಹೇಗೆನಿಸುತ್ತಿದೆ ಗುರುಗಳೇ' ಎಂದು ಕೇಳಿದ. ಗುರುಗಳು ನಸುನಗುತ್ತ 'ಸಿಹಿತಿಂಡಿ ತುಂಬಾ ಚೆನ್ನಾಗಿದೆ. ಆದರೆ ಸ್ವಲ್ಪ ಉಪ್ಪು ಕಡಿಮೆ' ಎನ್ನುತ್ತಿದ್ದ ಹಾಗೆಯೇ ಅವರ ಪ್ರಾಣಪಕ್ಷಿ ಹಾರಿಹೋಯಿತು. ಕಾಮತರೂ ಅಷ್ಟೇ. ಝೆನ್ ಗುರುವಿನ ಹಾಗೆ ಕ್ಷಣದಿಂದ ಕ್ಷಣಕ್ಕೆ ಚಲಿಸುವವರು. ಒಮ್ಮೆ ದಿ.ಕುಮಟಾಕರವರ ಪತ್ನಿಯವರ ಮರಣಾನಂತರದ ಪ್ರಾರ್ಥನಾ ಸಭೆಯಲ್ಲಿ ಹತ್ತಾರು ನಿಮಿಷಗಳ ಕಾಲ ಅವರು ಬ್ಲಾಕ್ ಔಟ್ ಸ್ಥಿತಿಯಲ್ಲಿದ್ದರು. ಏನಾಯಿತೆಂದು ಗೊತ್ತಾಗಲಿಲ್ಲ. ಸೀದಾ ಬಂದವರೇ ಮನೆಯ ಬಳಿ ಇದ್ದ ಪ್ರಸಿದ್ಧ ಆಸ್ಪತ್ರೆಗೆ ಹೋಗಿ ಪೂರಾ ಪರೀಕ್ಷೆ ಮಾಡಿಸಿಕೊಂಡರು. ಡಾಕ್ಟರುಗಳ ತಂಡದವರಿಗೆ ಅವರ ಆರೋಗ್ಯದಲ್ಲಿ ಯಾವ ತೊಂದರೆಯೂ ಕಾಣಲಿಲ್ಲ. ನಾಲ್ಕಾರು ದಿನ ಆಸ್ಪತ್ರೆಯಲ್ಲೇ ಇದ್ದು ಅವರಿಗೆ ಸಾಕಷ್ಟು ಬೇಸರವಾಯಿತಷ್ಟೇ. ಅವರನ್ನು ಕಾಣಲು ನಾನು ಅಸ್ಪತ್ರೆಗೆ ಹೋದಾಗ ಅವರು ಎಂದಿನಂತೆ ನಿರಾಳವಾಗಿದ್ದರು. ಹಾಗೆಂದು ಕಾಮತರು ಪೂರಾ ಒಂಟಿ ಜೀವವಲ್ಲ. ಮಕ್ಕಳು, ಮೊಮ್ಮಕ್ಕಳು, ತಂಗಿ, ಅವರ ಮೊಮ್ಮಕ್ಕಳು...ಹೀಗೆ ಸಂಸಾರದಲ್ಲಿ ಇಳಿದುಕೊಂಡಿದ್ದಾರೆ. ಒಮ್ಮೊಮ್ಮೆ ಮನೆ ತುಂಬಿ ಜಾಗವೇ ಸಾಕಾಗದ ಪರಿಸ್ಥಿತಿ ಉಂಟಾದ ಕತೆಯನ್ನು ಅವರು ಉತ್ಸಾಹದಿಂದ ಹಂಚಿಕೊಳ್ಳುತ್ತಾರೆ.

ಒಟ್ಟಾರೆ ಕಾಮತ್ ಸಾಹೇಬರಿಗೆ ಈಗ ತೊಂಬತ್ತರ ಹರೆಯ. ಕಳೆದ ಮೂರು ದಶಕಗಳಿಂದ ರಾಜಧಾನಿ ದೆಹಲಿಯಲ್ಲಿ, ತಮ್ಮ ಇತರ ಎಲ್ಲ ಆಸಕ್ತಿಗಳ ನಡುವೆಯೂ, ಕನ್ನಡದ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಅವರ ಈ ಸದ್ದಿಲ್ಲದ ಸಜ್ಜನಿಕೆಯ ಕಾಯಕವನ್ನು ಕನ್ನಡಿಗರು, ಅದರಲ್ಲೂ ಕರ್ನಾಟಕ ಸರಕಾರ ಈಗಲಾದರೂ ಗಮನಿಸಬೇಕು. ಅವರನ್ನು ರಾಜ್ಯೋತ್ಸವ ಪ್ರಶಸ್ತಿಯಿಂದ ಗೌರವಿಸುವ ಕೆಲಸವಾಗಬೇಕು. ನಮ್ಮ ಎನ್ವೆ ಕಾಮತರು ಮುಂದೆ ನೂರಕ್ಕೆ ದಾಪುಗಾಲಿಡುತ್ತ ಸಾಗಲಿ ಎಂದು ಹಾರೈಸುತ್ತ, ಅವರ ಕನ್ನಡದ ಕಾಯಕ ನಿರಂತರವಾಗಿರಲಿ ಎಂದು ಬಯಸುತ್ತ...ಈ ನಾಲ್ಕಾರು ಹರಿಯುವ ಮನದ ಬಳ್ಳಿಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

**ಡಾ. ವೆಂಕಟಾಚಲ ಹೆಗಡೆ**

# ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾ

***ನಿ**ವೃತ್ತ ಐ.ಎ.ಎಸ್. ಅಧಿಕಾರಿ ಹಿರಿಯ ಕನ್ನಡಿಗ ಶ್ರೀ. ಎನ್. ಜನಾರ್ಧನ ಕಾಮತರು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಅಂತಃಸಾಕ್ಷಿಯಂತೆ ದೆಹಲಿಯಲ್ಲಿ ಅರ್ಧ ಶತಮಾನಕ್ಕೂ ಮೀರಿ ಬದುಕನ್ನು ಕಳೆದಿದ್ದಾರೆ. ತಮ್ಮ ತೊಂಭತ್ತರ ಹರೆಯದಲ್ಲೂ ಹತ್ತು ಹಲವು ಚಟುವಟಿಕೆಗಳನ್ನು, ಹವ್ಯಾಸಗಳನ್ನು ಉತ್ಸಾಹ ಲವಲವಿಕೆಯಿಂದ ಹಮ್ಮಿಕೊಂಡು, ಶಿಸ್ತಿನ ಸಿಪಾಯಿಯಾಗಿ ದೆಹಲಿ ಕನ್ನಡಿಗರಿಗೆ ಚಿರಪರಿಚಿತರು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಅಮೂಲ್ಯ ಸಲಹೆ, ಸಹಕಾರಗಳೊಡನೆ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಬ್ರಿಟಿಷ್ ಅಧಿಕಾರಿಗಳೊಂದಿಗೆ ಸೇವೆ ಸಲ್ಲಿಸಿರುವ ಮೊಟ್ಟಮೊದಲ ಐ.ಎ.ಎಸ್. ಬ್ಯಾಚಿನವರೆಂಬ ಹೆಗ್ಗಳಿಕೆ ಇವರದ್ದು. ಅವರು ತಮ್ಮ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದ ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ, ಸಮಯ ಪರಿಪಾಲನೆ, ಶಿಸ್ತು ಸಂಯಮ ಎಂದಿಗೂ ಅನುಕರಣೀಯ. ಶತಮಾನದಿಂದ ಶತಮಾನಕ್ಕೆ ಮುಂದಡಿಯಿಟ್ಟ ಅಪೂರ್ವ ಚೇತನ ಎನ್.ಜೆ. ಕಾಮತರ ಬಾಳ ಪಯಣದ ಮಹತ್ವಪೂರ್ಣ ಅನುಭವದ ಸಾರ ನಿಮಗಾಗಿ. . .*

### ಪೂರ್ವಜರು

ಸುಮಾರು ಹದಿನೇಳನೇ ಶತಮಾನದ ಹೊತ್ತಿಗೆ ಬ್ರಿಟಿಷರು, ಪೋರ್ಚುಗೀಸರು ಕೇರಳದ ಮಲ್‌ಬಾರ್ ಕರಾವಳಿಯನ್ನು ಆಕ್ರಮಿಸಿಯಾಗಿತ್ತು. ಸುಂದರ ಪ್ರಕೃತಿ ಸೌಂದರ್ಯ, ವಿಪುಲ ಸಮುದ್ರ ಸಂಪತ್ತು, ಸಮೃದ್ಧ ಹಸಿರಿನಿಂದ ಕೂಡಿದ ಪಶ್ಚಿಮ ಘಟ್ಟಗಳ ಪ್ರಶಸ್ತ ಸ್ಥಾನಗಳನ್ನು ಆಕ್ರಮಿಸಿ ಭಾರತದಲ್ಲಿ ತನ್ನ 'ಈಸ್ಟ್ ಇಂಡಿಯಾ' ಕಂಪನಿಯನ್ನು ಸ್ಥಾಪಿಸಿ ಬ್ರಿಟಿಷರು ಆಗಲೇ ಪ್ರಬಲರಾಗಿದ್ದರು. ಕ್ರೈಸ್ತ ಮತದ ಪ್ರಚಾರ ಮತ್ತು ಮತಾಂತರವೂ ಮುಂಚೂಣಿಯಲ್ಲಿತ್ತು. ಗೋವಾ ಮೂಲದ ಅಸಂಖ್ಯಾತ ಸಾರಸ್ವತ ಬ್ರಾಹ್ಮಣ ಕುಟುಂಬಗಳು ಬ್ರಿಟಿಷರು ತಮ್ಮನ್ನು ಕ್ರಿಶ್ಚಿಯನ್ ಮತಕ್ಕೆ ಮತಾಂತರ ಮಾಡಿಯಾರೆಂಬ ಭೀತಿ–ತಲ್ಲಣದಲ್ಲಿ ಗೋವಾದಿಂದ ಕರ್ನಾಟಕ–ಕೇರಳದ ಪಶ್ಚಿಮ ಘಟ್ಟಗಳಿಗೆ ವಲಸೆ ಬಂದರಂತೆ. ಹಾಗೆ ನೆಲೆಯೂರಿದ ಕುಟುಂಬಗಳಲ್ಲಿ ಶ್ರೀ ಎನ್. ಜನಾರ್ಧನ ಕಾಮತರ ಪೂರ್ವಜರೂ ಇದ್ದರು. ಅವರ ತಾತ ಹೊಸದುರ್ಗ ತಾಲೂಕಿನ ನಿವಾಸಿಗಳು. ಕಾನಂಗಾಡು, ಹೊಸದುರ್ಗ ಮತ್ತು ಕೋಟಂಚೆರ್ರಿ ತ್ರಿವಳಿ ಹಳ್ಳಿಗಳು ಒಂದಕ್ಕೊಂದು ಹತ್ತಿರವಾದವು. ಅವರ ತಾಯಿ ಕೋಟಂಚೆರ್ರಿಯಲ್ಲಿ ಹುಟ್ಟಿ ಬೆಳೆದವರಂತೆ. ಆಗ ತಾತ ವೈನಾಡು ಅರಣ್ಯ ಖಾತೆಯಲ್ಲಿದ್ದರಂತೆ. ಸ್ವಾತಂತ್ರ್ಯಪೂರ್ವದ ಭಾರತ ಕಥನವನ್ನು ಇಂದಿನ ಪೀಳಿಗೆಗೆ ಕಟ್ಟಿಕೊಡಬಲ್ಲ ನಮ್ಮೆಲ್ಲರ ನೆಚ್ಚಿನ ಹಿರಿಯ ಕನ್ನಡಿಗ ಶ್ರೀ ಎನ್. ಜನಾರ್ಧನ ಕಾಮತರು 1921ನೇ ಅಕ್ಟೋಬರ್ 25ರಂದು ತಾಯಿಯ ತವರುಮನೆ ಕೋಟಂಚೆರ್ರಿಯ ರಮಣೀಯ ಕಾಡಿನ ಬೀಡಲ್ಲಿ ಜನಿಸಿದರು.

### ಬಾಲ್ಯ ಮತ್ತು ವಿದ್ಯಾಭ್ಯಾಸ

ಕಾಸರಗೋಡು ಜಿಲ್ಲೆಯಲ್ಲಿನ ಕೋಟಾಂಚೆರ್ರಿ, ಕಾನಂಗಾಡು ಪ್ರದೇಶಗಳು ಬ್ರಿಟಿಷ್ ಆಳ್ವಿಕೆಯಲ್ಲಿ ಸದಾ ವಾಣಿಜ್ಯ ವಿದ್ಯಮಾನದಲ್ಲಿರುತ್ತಿದ್ದವು. ಜನಾರ್ಧನ ಕಾಮತರು ಕಣ್ಣೂರಿನಿಂದ 22 ಕಿ.ಮೀ. ದೂರದಲ್ಲಿರುವ ಟೆಲಿಚೆರಿ ಎಂಬ ಊರಿನಲ್ಲಿ ತಮ್ಮ ಬಾಲ್ಯವನ್ನು ಕಳೆದರು. ಮಲೆಯಾಳಂ ಭಾಷೆ ಅವರ ಬಾಲ್ಯದಲ್ಲಿ ರಕ್ತಗತವಾಗಿದೆ. ಮಲೆಯಾಳಂ ಥೆಲಿಶೆರಿ–ಆಂಗ್ಲೀಕರಣವಾಗಿ ಟೆಲಿಚೆರಿಯಾಗಿದೆ. ಆ ಕಾಲದಲ್ಲಿ ಅವರ ತಂದೆ ಇಡೀ ಕೊಂಕಣಿ ಸಮುದಾಯದಲ್ಲೇ ಆದ ಮೊದಲ ಇಂಜಿನಿಯರ್ ಪದವೀಧರ ಮತ್ತು ಮದ್ರಾಸಿನ ಪಿ.ಡಬ್ಲ್ಯು.ಡಿ.ಯ ಸೇವೆಯಲ್ಲಿದ್ದರು. ಅವರ ಹಿರಿಯ ಅಧಿಕಾರಿಗಳೆಲ್ಲ ಬ್ರಿಟಿಷರೇ ಆಗಿದ್ದರಂತೆ. ಮದ್ರಾಸಿನ ಅಗ್ರಿಕಲ್ಚರ್ ಕಾಲೇಜನ್ನು ನಿರ್ಮಿಸಿದ್ದು ತಂದೆಯವರೇ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಆಗ ಕಾಮತರ ವಿದ್ಯಾಭ್ಯಾಸ ತಮಿಳಿನಲ್ಲಿ ನಡೆದಿತ್ತು. ಅವರ ತಂದೆಗೆ ಮೆಟ್ಟೂರ್ ಡ್ಯಾಂ ಗೆ ವರ್ಗವಾಗಿತ್ತು. ಕಾಮತರು ಹತ್ತು ವರ್ಷದ ಬಾಲಕನಾಗಿದ್ದಾಗ ತಂದೆಗೆ ಆಂಧ್ರ ಪ್ರದೇಶಕ್ಕೆ ವರ್ಗವಾಯಿತಂತೆ. ಆಗ ಆಂಧ್ರವೂ ಮದ್ರಾಸ್ ಪ್ರೆಸಿಡೆನ್ಸಿಯ 'ಮಲ್‌ಬಾರ್' ಜಿಲ್ಲೆಗೆ ಒಳಪಟ್ಟಿತ್ತು. ಹೀಗೆ ತಮ್ಮ ನಿರಂತರ ವರ್ಗಾವರ್ಗಿಯಲ್ಲಿ ಮಗನ ವಿದ್ಯಾಭ್ಯಾಸ ಹಾಳಾಗಬಾರದೆಂದು ಯೋಚಿಸಿದ ತಂದೆಯವರು ಬಾಲಕ ಕಾಮತರನ್ನು ತಾತನ ಊರಾದ ಟೆಲಿಚೆರಿಗೆ ಕಳಿಸಿದರಂತೆ. ಮತ್ತೆ ಟೆಲಿಚೆರಿಯಲ್ಲಿ ಅವರ ಶಿಕ್ಷಣ ಮುಂದುವರೆಯಿತು. ಕಾಮತರು ಹನ್ನೊಂದು ವರ್ಷದವರಿದ್ದಾಗ ಅವರಿಗೊಬ್ಬ ತಂಗಿ ಹುಟ್ಟಿದಳಂತೆ. ಟೆಲಿಚೆರಿ ಮನೆಯಲ್ಲಿ ಅವರ ಚಿಕ್ಕಪ್ಪ ಹಾಗೂ ದೊಡ್ಡಮ್ಮನ ಮಕ್ಕಳು ಸೇರಿ ಐದು ಜನ ಓದುವ ಮಕ್ಕಳು. ಆಗ ಮನೆಯಲ್ಲಿ ವಿದ್ಯುತ್ ಬಂದಿರಲಿಲ್ಲ. ಒಂದು ಚಿಮಿಣಿ ಎಣ್ಣೆಯ ದೀಪದ ಬೆಳಕಿನಲ್ಲಿ ಎಲ್ಲ



1965ರಲ್ಲಿ ಕೇಂದ್ರ ಸಚಿವ ಟಿ.ಟಿ. ಕೃಷ್ಣಮಾಚಾರಿ ಮತ್ತು ಪ್ರಧಾನಿ ಇಂದಿರಾ ಗಾಂಧಿ ಅವರೊಡನೆ




1977ರಲ್ಲಿ ಉಪರಾಷ್ಟ್ರಪತಿ ಬಿ.ಡಿ. ಜತ್ತಿಯವರೊಡನೆ

# ರತದ ಅಂತಃಸಾಕ್ಷಿ–ಎನ್. ಜನಾರ್ಧನ ಕಾಮತ್

ಮಕ್ಕಳೂ ಕುಳಿತು ಒಟ್ಟಿಗೇ ಓದುತ್ತಿದ್ದರಂತೆ. ಬಾಲ್ಯದಿಂದಲೂ ಓದಿನಲ್ಲಿ ಮುಂದಿದ್ದ ಜನಾರ್ಧನ ಕಾಮತರು ಒಳ್ಳೆ ಅಂಕಗಳಿಂದ ಪಾಸಾಗುತ್ತಿದ್ದರಂತೆ. ಇಂಟರ್‌ಮಿಡಿಯೇಟ್‌ವರೆಗೂ ಟೆಲಿಚೆರಿಯಲ್ಲೇ ಶಿಕ್ಷಣವನ್ನು ಪಡೆದ ಅವರು ಮುಂದೆ "ಬಾಸೆಲ್ ಇವೆಂಜಿಕಲ್ ಮಿಶನ್ ಪಾರ್ಸಿ ಹೈಸ್ಕೂಲ್"ನಲ್ಲಿ ವಿದ್ಯಾಭ್ಯಾಸ ಪಡೆದರು. ಅಲ್ಲಿಂದ ಬಿ.ಎಸ್ಸಿ. ಓದಿಗಾಗಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಶಿಕ್ಷಣವನ್ನು ಮುಂದುವರಿಸಿದರು. ಆಗ ಅವರ ತಂದೆಗೆ ಆಂಧ್ರಪ್ರದೇಶದಿಂದ ಮತ್ತೆ ಮದ್ರಾಸ್‌ಗೆ ವರ್ಗವಾಗಿತ್ತು. ಬಿ.ಎಸ್ಸಿ. ಮುಗಿಸಿದ ಕಾಮತರಿಗೆ ಎಂ.ಎಸ್ಸಿ.ಗೆ ಸೀಟು ಸಿಗದೆ ಅವರು ಎಂ.ಎ. ಎಕಾನಾಮಿಕ್ಸ್‌ಗೆ ಸೇರಬೇಕಾಯಿತು. ಆಗ ಬ್ರಾಹ್ಮಣರಿಗೆ ಎಂ.ಎಸ್ಸಿ. ಗೆ ಮೀಸಲಿದ್ದ ಸೀಟು ಕೇವಲ ಎರಡು. ಆಗಿನ ಕಾಲದಲ್ಲಿಯೂ ಮೀಸಲಾತಿಯ ಪಿಡುಗು ಬಿಟ್ಟಿರಲಿಲ್ಲವೆಂದು ತೋರುತ್ತದೆ. 1943ರಲ್ಲಿ ಎಂ.ಎ. ಮುಗಿಸಿದಾಗ ಕಾಮತರಿಗೆ 22ರ ಹರೆಯ.

### ಐ.ಎ.ಎಸ್. ಉನ್ನತ ಶಿಕ್ಷಣ

ಎಂ.ಎ. ಪದವಿಯ ನಂತರ ತಂದೆ ಐ.ಸಿ.ಎಸ್. ಪರೀಕ್ಷೆ ಕಟ್ಟಲು ಹೇಳಿದರು. ಆದರೆ ಐ.ಸಿ.ಎಸ್. ಭರ್ತಿಗಳನ್ನು ಎರಡನೇ ಮಹಾಯುದ್ಧದ ಕಾರಣದಿಂದ ಸ್ಥಗಿತಗೊಳಿಸಲಾಗಿತ್ತು. 1939–40ರ ಕಾಲದಲ್ಲಿ ಬ್ರಿಟನ್, ಜರ್ಮನ್, ರಷ್ಯಾ ದೇಶಗಳು ಎರಡನೇ ಮಹಾಯುದ್ಧದ ಭೀಕರತೆಯನ್ನು ಎದುರಿಸುತ್ತಿದ್ದವು. ಆ ವರ್ಷ ಐ.ಸಿ.ಎಸ್.ಗೆ ಕಟ್ಟಲಾಗದೇ ಸಮಯವನ್ನು ಹಾಳು ಮಾಡಬಾರದೆಂದು ಅವರು 1944 ಮಾರ್ಚ್‌ನಲ್ಲಿ ಇಂಡಿಯನ್ ಆರ್ಮಿ ಆರ್ಡಿನೆನ್ಸ್ ಕಾರ್ಪೋರೇಶನ್‌ನಲ್ಲಿ ಸಿವಿಲ್ ಗೆಜೆಟೆಡ್ ಆಫೀಸರ್ ಆಗಿ ಕೆಲಸಕ್ಕೆ ಸೇರಿದರು. ಅದು ಸೈನ್ಯಕ್ಕೆ ಸೀಮಿತವಾದ ಸ್ಟೋರ್ (ಉಗ್ರಾಣ) ಕೆಲಸ. ಸೈನ್ಯಕ್ಕೆ ಬಟ್ಟೆ ಬರೆ, ಆಹಾರ, ದಿನಸಿ ಪದಾರ್ಥಗಳಲ್ಲದೇ ಆಯುಧಗಳ ವಿಲೇವಾರಿವರೆಗಿನ ಜವಾಬ್ದಾರಿಯನ್ನು ಈ ಅಧಿಕಾರಿಗಳು ನಿರ್ವಹಿಸಬೇಕಾಗಿತ್ತಂತೆ. ಆಗ ಸಿವಿಲ್ ಗೆಜೆಟೆಡ್ ಆಫೀಸರ್ ಅಂದರೆ ಆರ್ಮಿ ಕ್ಯಾಪ್ಟನ್ ರ್‍ಯಾಂಕಿಗೆ ಸಮನಾದದ್ದು.

1944ರಲ್ಲಿ ಮೊಟ್ಟ ಮೊದಲ ಸೇವೆ ಹೈದರಾಬಾದ್‌ನಲ್ಲಿ ಪ್ರಾರಂಭಿಸಿದರು. ಪಡೆದ ಮೊದಲ ಸಂಬಳ ಎಷ್ಟು ಗೊತ್ತೇ? ರೂ. 340/–! ಅಲ್ಲಿಂದ ಲಾಹೋರ್‌ಗೆ ತರಬೇತಿಗಾಗಿ ಕಳಿಸಿದರಂತೆ. ಅಲ್ಲಿಂದ ಒಂದು ತಿಂಗಳು ಅಲೀಘಡ ವಿಶ್ವವಿದ್ಯಾಲಯದಲ್ಲಿ ಎಂಟೆಮೊಲಾಜಿ (ಕ್ರಿಮಿ–ಕೀಟಗಳ ಕುರಿತ) ವಿಷಯದಲ್ಲಿ ತರಬೇತಿಗಾಗಿ ಹೋದರು. ಅಲ್ಲಿ ಒಂದು ತಿಂಗಳು ಜನರಲ್ ಸ್ಟೋರ್ ತರಬೇತಿ ಪಡೆದರು. ಈ ರೀತಿ ಆರು ತಿಂಗಳು ತರಬೇತಿ ಶಿಕ್ಷಣ ಮುಗಿಸುತ್ತಿದ್ದಂತೆಯೇ ನಾಸಿಕ್‌ಗೆ ವರ್ಗವಾಯಿತು. 1944ರಿಂದ 46 ರ ವರೆಗೆ ನಾಸಿಕ್‌ನಲ್ಲಿ ಸೇವೆ ಸಲ್ಲಿಸಿದರು.

ಹೈದರಾಬಾದ್‌ನಲ್ಲಿ ಸೇವೆ ಸಲ್ಲಿಸುವಾಗ ಪ್ರಾದೇಶಿಕ ಭಾಷೆ ತೆಲುಗು ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕಾಯಿತು. ಹೆಚ್ಚು ಕಡಿಮೆ ಕನ್ನಡ ಮತ್ತು ತೆಲುಗು ಲಿಪಿಗಳು ಬಹುಸಾಮ್ಯತೆ ಹೊಂದಿರುವುದರಿಂದ ತೆಲುಗು ಭಾಷೆಯ ಜೊತೆ ಜೊತೆಗೆ ಕನ್ನಡ ಭಾಷೆಯನ್ನೂ ಆಸಕ್ತಿಯಿಂದ ಸ್ವತಃ ಓದಲು ಬರೆಯಲು ಕಲಿತರಂತೆ. ಬಾಲ್ಯದಿಂದಲೂ ಇತರೆ ರಾಜ್ಯಗಳಲ್ಲೇ ವ್ಯಾಸಂಗ ಮಾಡಿದ ಕಾಮತರಿಗೆ ಕನ್ನಡ ಭಾಷೆಯನ್ನು ಕಲಿಯುವ ಅವಕಾಶವೇ ಒದಗಿರಲಿಲ್ಲ. ಭಿನ್ನ ಭಿನ್ನ ಭಾಷೆಗಳನ್ನು ಕಲಿಯುವ ಹವ್ಯಾಸವುಳ್ಳ ಕಾಮತ್ ಅವರು ಕೊಂಕಣಿ, ತೆಲುಗು, ಮಲೆಯಾಳಂ, ತಮಿಳು, ಪಂಜಾಬಿ, ಬಂಗಾಳಿ, ಕನ್ನಡ ಮೊದಲಾದ 11 ಭಾಷೆಗಳನ್ನು ಬಲ್ಲರು ಹಾಗೂ 9 ಭಾಷೆಗಳನ್ನು ಓದಲು, ಬರೆಯಲು ಬಲ್ಲರು.

1945ರಲ್ಲಿ ಮಹಾಯುದ್ಧ ಕೊನೆಗೊಂಡು ಐ.ಸಿ.ಎಸ್. ಭರ್ತಿ ಆರಂಭವಾದುವು. ಆಗ ವಾರ್ ಸರ್ವೀಸ್‌ನಲ್ಲಿದ್ದವರು ಮಾತ್ರ ಐ.ಸಿ.ಎಸ್. ಪರೀಕ್ಷೆ ಕಟ್ಟಬಹುದಾಗಿತ್ತಂತೆ. ಕಾಮತರು 'ಆರ್ಮಿ ಸ್ಟೋರ್'ನಲ್ಲಿ ಸೇವೆ ಸಲ್ಲಿಸಿದ್ದುದರಿಂದ ಅವರಿಗೆ ಐ.ಸಿ.ಎಸ್. ಕಟ್ಟುವ ಅರ್ಹತೆ ದೊರೆಯಿತು. ಒಟ್ಟು ಮೂವತ್ತು ಸಾವಿರ ಜನ ಅಭ್ಯರ್ಥಿಗಳು ಐ.ಸಿ.ಎಸ್.ಗೆ ಪರೀಕ್ಷೆ ಕಟ್ಟಿದ್ದರು. ಸಮುದಾಯ ಚರ್ಚೆಯ ಪೂರ್ವಪರೀಕ್ಷೆಯಲ್ಲಿ ಪಾಸಾದವರು 6000 ಅಭ್ಯರ್ಥಿಗಳು. ನಂತರ WOSB (War Office Service Board) ಸುತ್ತಿನ ಪರೀಕ್ಷೆಯನ್ನು 600 ಮಂದಿ ಪಾಸುಮಾಡಿದರಂತೆ. ಕೊನೆಯಲ್ಲಿ ಐ.ಸಿ.ಎಸ್. ಗೆ ಆರಿಸಲ್ಪಟ್ಟವರು ಕೇವಲ 118 ಅಭ್ಯರ್ಥಿಗಳು. ಅವರಲ್ಲಿ ಕಾಮತರೂ ಒಬ್ಬರಾಗಿದ್ದರು.. ಎಲ್ಲಾ ಸುತ್ತಿನ ಪರೀಕ್ಷೆಗಳನ್ನು ಪಾಸು ಮಾಡಿ, 1946 ರಲ್ಲಿ ಐ.ಸಿ.ಎಸ್. ಅತ್ಯುನ್ನತ ಪದವಿ ಗಳಿಸಿದರು. ಆಗೆಲ್ಲ ಬ್ರಿಟಿಷ್ ಸರಕಾರವೇ ಇದ್ದಿತು. ಬ್ರಿಟಿಷರೇ ಅಧಿಕಾರಿ ವರ್ಗದಲ್ಲಿರುತ್ತಿದ್ದರು. ಸಾರ್ಜನ್ನ ಹುದ್ದೆಯವರೆಲ್ಲ ಬ್ರಿಟಿಷರಾಗಿರುತ್ತಿದ್ದರು. ಆದರೆ ಸೈನಿಕರೆಲ್ಲ ಭಾರತೀಯರು.

1946ರಲ್ಲಿ ಕ್ರಿಪ್ಸ್ ಮಿಷನ್ ಬಂದಿತ್ತು. ಆಗ ಬ್ರಿಟಿಷ್–ಭಾರತೀಯರ ಸಮ್ಮಿಶ್ರ ಸರಕಾರ ಇತ್ತು. ನೆಹರೂ ಸಲಹಾಕಾರರಾಗಿದ್ದರು. ಶ್ರೀ ರಾಜಗೋಪಾಲಾಚಾರಿ ಅವರು ಗವರ್ನರ್ ಜನರಲ್ ಆಗಿದ್ದರು. 1947 ಏಪ್ರಿಲ್‌ನಲ್ಲಿ ಆಗಿನ ಗೃಹಮಂತ್ರಿಯಾಗಿದ್ದ ಸರದಾರ ಪಟೇಲರು ಐ.ಸಿ.ಎಸ್. ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಅದನ್ನು AIAS (All India Administrative



ಫಕ್ರುದ್ದೀನ್ ಅಲಿ ಅಹಮ್ಮದ್ ಅವರೊಡನೆ ಕಾಮತ್ ದಂಪತಿಗಳು



1974ರಲ್ಲಿ ವಾರ್ತಾ ಮತ್ತು ಪ್ರಸಾರ ಮಂತ್ರಿ ಐ.ಕೆ. ಗುಜ್ರಾಲ್ ಅವರೊಡನೆ

Service) ಎಂದು ಮರು ನಾಮಕರಣ ಮಾಡಿದರು. ಆಗೆಲ್ಲ ಐ.ಸಿ.ಎಸ್. ಆಫೀಸರುಗಳಿಗೆ ಕೇವಲ 350/– ರೂಗಳ ವೇತನವಿತ್ತಂತೆ. ನಂತರ ಎ.ಐ.ಎ.ಎಸ್ ಹೋಗಿ ಐ.ಎ.ಎಸ್. ಅಷ್ಟೇ ಉಳಿದುಕೊಂಡಿತು. ಈಗಿನ ಐ.ಪಿ. ಕಾಲೋನಿ ಹತ್ತಿರ ಮೆಟ್‌ಕಾಫ್ ಹೌಸ್‌ನಲ್ಲಿ ಅವರ ಕಛೇರಿ ಇತ್ತಂತೆ. ದೇಶದ ಐ.ಎ.ಎಸ್.ನ ಮೊಟ್ಟ ಮೊದಲನೇ ಬ್ಯಾಚಿನ ಅಭ್ಯರ್ಥಿಯೆಂಬ ಹೆಗ್ಗಳಿಕೆಗೆ ಎನ್.ಜೆ. ಕಾಮತರು ಪಾತ್ರರಾಗುತ್ತಾರೆ.

## ಸ್ವತಂತ್ರ ಭಾರತದ ಗುರುತರ ಹೊಣೆಗಾರಿಕೆ

1947 ಮಾರ್ಚ್‌ನಲ್ಲಿ ಸೇವೆಗೆ ಸೇರಿದಾಗ ಒಂದೂವರೆ ವರ್ಷಗಳ ತರಬೇತಿ ಶಿಕ್ಷಣವಿತ್ತು. ಈ ತರಬೇತಿ ಅವಧಿಯಲ್ಲೇ ಅಗಸ್ಟ್ 15, 1947ರಂದು ದೇಶಕ್ಕೆ ಸ್ವಾತಂತ್ರ್ಯ ದೊರೆತು, ಪ್ರಧಾನ ಮಂತ್ರಿಯಾಗಿ ಜವಾಹರಲಾಲ ನೆಹರೂ ಆಡಳಿತದ ಚುಕ್ಕಾಣಿ ಹಿಡಿದರು. ರಾಜೇಂದ್ರ ಪ್ರಸಾದ್ ಮತ್ತು ಸರದಾರ್ ಪಟೇಲ ಹೀಗೆ ಕೆಲವೇ ಕೆಲವು ಮಂತ್ರಿಗಳಿದ್ದರು. ಈಗಿನಂತೆ ನೂರಾರು ಮಂತ್ರಿಗಳಿರಲಿಲ್ಲ. ಲಾರ್ಡ್ ಮೌಂಟ್ ಬ್ಯಾಟನರು ಪಂಡಿತ್ ಜವಾಹರಲಾಲ ನೆಹರೂ ಅವರಿಗೆ ಅಧಿಕಾರ ವಹಿಸಿಕೊಟ್ಟರು. ಆಗ ಎನ್. ಜೆ. ಕಾಮತರು ಐ.ಎ.ಎಸ್. ಪ್ರೊಬೇಶನರಿಯಲ್ಲಿದ್ದರು. (ಈಗಿನ ರಾಷ್ಟ್ರಪತಿ ಭವನ ಆಗ ವೈಸ್ ರೀಗಲ್ ಲಾಂಜ್ ಎಂದು ಕರೆಯಲ್ಪಡುತ್ತಿತ್ತು. 1950ರಲ್ಲಿ 'ರಾಷ್ಟ್ರಪತಿ ಭವನ' ಎಂದು ಹೆಸರಿಸಲಾಯಿತು.) ದೇಶಕ್ಕೆ ಸ್ವಾತಂತ್ರ್ಯ ಸಿಗುವ ಸಂತಸದೊಂದಿಗೆ ವಿಭಜನೆಯ ದೌರ್ಜನ್ಯ, ಹಿಂಸೆಯ ಕಾಡ್ಗಿಚ್ಚು ಉರಿಯತೊಡಗಿತು. ಆಗ ಐ.ಎ.ಎಸ್. ಅಧಿಕಾರಿಗಳ ತರಬೇತಿ ಶಿಕ್ಷಣವನ್ನು ಸ್ಥಗಿತಗೊಳಿಸಿದರು. ಆಗ ಎನ್.ಜೆ. ಕಾಮತರು ನಿರಾಶ್ರಿತರ ಕ್ಯಾಂಪಿನ ಇನ್‌ಚಾರ್ಜ್ ಆಗಿ ನೇಮಕಗೊಂಡರು. ನಿರಾಶ್ರಿತರ ವಸತಿ ವ್ಯವಸ್ಥೆ, ಆರೋಗ್ಯ, ಆಹಾರ ಇತ್ಯಾದಿಗಳನ್ನು ನೋಡಿಕೊಳ್ಳುವುದು ಅವರ ಕರ್ತವ್ಯದ ಭಾಗವಾಗಿತ್ತು. ಲಾಹೋರ್ ಸುತ್ತಲಿನ ಪ್ರಾಂತ್ಯಗಳೆಲ್ಲ ಸೇರಿ 'ಪಾಕಿಸ್ತಾನ' ಹುಟ್ಟಿಕೊಂಡಿತು. ಲಕ್ಷಾಂತರ ಹಿಂದೂಗಳು ಪಾಕಿಸ್ತಾನದಿಂದ ನಿರಾಶ್ರಿತರಾಗಿ ಭಾರತಕ್ಕೆ ಬರುತ್ತಿದ್ದರು ಹಾಗೂ ಭಾರತದಿಂದ ಮುಸ್ಲಿಮರು ಪಾಕಿಸ್ತಾನಕ್ಕೆ ಮರಳುತ್ತಿದ್ದರು. ಇಲ್ಲಿಂದ ಹೊರಹೋದ ಮುಸ್ಲಿಮರು ಬಹಳ ಕಡಿಮೆ, ಅಲ್ಲಿಂದ ಬಂದ ಹಿಂದೂಗಳ ಸಂಖ್ಯೆ ಜಾಸ್ತಿ ಇತ್ತು ಎಂದು ಕಾಮತರು ಹೇಳುತ್ತಾರೆ. ಜನರ ರೋಷ, ಅಸಮಾಧಾನ, ಹಿಂಸೆ, ನರಹತ್ಯೆಯಲ್ಲಿ ಪರ್ಯವಸಾನಗೊಳ್ಳುತ್ತಿತ್ತು. ಹೆಣಗಳನ್ನು ಹೊತ್ತ ರೈಲು ಲಾಹೋರ್‌ನಿಂದ ದೆಹಲಿಗೆ, ದೆಹಲಿಯಿಂದ ಲಾಹೋರ್‌ಗೆ ರವಾನೆಯಾಗುತ್ತಿದ್ದವು. ಆಗ ಕಾಮತರು ಸ್ವತಃ ಹೆಣಗಳನ್ನು ಎತ್ತಿ ಸಾಗಿಸಿದ್ದಾರೆ. ಆಗ ಎಲ್ಲ ಐ.ಎ.ಎಸ್. ಅಧಿಕಾರಿಗಳಿಗೆ ನಿರಾಶ್ರಿತರನ್ನು ನೋಡಿಕೊಳ್ಳುವ ಮತ್ತು ಮರು ವಸತಿ ಕಲ್ಪಿಸುವ ಹೊಣೆಯನ್ನು ಸರಕಾರ ವಹಿಸಿತ್ತು. ಭಾರತದಲ್ಲಿ ತಮ್ಮ ಆಸ್ತಿ ಪಾಸ್ತಿ, ಮನೆ, ಮಠ ತೊರೆದು ಹೋದವರ ಆಸ್ತಿಗಳನ್ನು ಸುರಕ್ಷಿತವಾಗಿ ತಮ್ಮ ಸುಪರ್ದಿಗೆ ತೆಗೆದುಕೊಳ್ಳುವುದು ಮತ್ತು ಲಾಹೋರ್‌ನಿಂದ ಬಂದ ನಿರಾಶ್ರಿತರ ಆಸ್ತಿ–ಪಾಸ್ತಿ, ವ್ಯವಹಾರ, ಉದ್ದಿಮೆಗಳ ಕುರಿತು ವಿಚಾರಿಸಿ ಅವರಿಗೆ ಅವರು ಬಿಟ್ಟು ಬಂದುದರ ಆಸ್ತಿ ಮೌಲ್ಯದ ಮನೆ ಇತ್ಯಾದಿಗಳನ್ನು ಮಂಜೂರು ಮಾಡುವ ಗುರುತರ ಜವಾಬ್ದಾರಿ ಕಾಮತರದಾಗಿತ್ತು. ಇಂಥ ಕ್ಲಿಷ್ಟಕರ ಜವಾಬ್ದಾರಿಯುತ ಕೆಲಸವನ್ನು ದಕ್ಷತೆ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸಿದ ಅಧಿಕಾರಿಗಳನ್ನು ನಾವಿಂದು ನೆನೆಯುವಂತಾಗಿದೆ. ಈಗಿನ ಭ್ರಷ್ಟಾಚಾರದ ಪರಮಾವಧಿಯನ್ನು ನೋಡಿದಾಗ ಕಾಮತರ ಶುದ್ಧ, ಸರಳ ವ್ಯಕ್ತಿತ್ವ ನಿಜಕ್ಕೂ ಅಭಿನಂದನೀಯ. ಆಗ ಅವರು 'ಡೆಪ್ಯುಟಿ ಕಸ್ಟೋಡಿಯನ್ ಆಫ್ ಇವಾಕ್ಯೂಸ್ ಪ್ರಾಪರ್ಟಿ' ಎಂಬ ಹುದ್ದೆಯನ್ನು ನಿರ್ವಹಿಸುತ್ತಿದ್ದರು. ಆಗ ಅವರ ಹಿರಿಯ ಅಧಿಕಾರಿಯಾಗಿ ಮಂಗಳೂರಿನ ಕನ್ನಡಿಗ ಲೋಬೋ ಪ್ರಭು ಜತೆಗಿದ್ದುದನ್ನು ಕಾಮತರು ಪ್ರೀತಿಯಿಂದ ನೆನೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮುಸ್ಲಿಮರಿಂದ ಬೆದರಿಕೆ ಎದುರಿಸಿ ಮುಸ್ಲಿಂ ಸೇವಕನನ್ನು ಕೆಲಸದಿಂದ ತೆಗೆಯಬೇಕಾದ ಸಂದರ್ಭ ಬಂದದ್ದನ್ನು ಬಹಳ ದುಃಖದಿಂದ ಕಾಮತರು ಸ್ಮರಿಸುತ್ತಾರೆ.

## ವಿಭಜನೆ ಕಾಲದ ಅವಿಸ್ಮರಣೀಯ ಘಟನೆಗಳು

ಕಾಮತ್ ಅವರು ಈ ಆಸ್ತಿ ವಿಲೇವಾರಿ ಮಾಡಿದ ಘಟನೆಗಳಲ್ಲಿ ಹಲಕೆಲವನ್ನು ನಮ್ಮೊಂದಿಗೆ ಹಂಚಿಕೊಂಡರು. ಕೆಂಪುಕೋಟೆ ಹತ್ತಿರದ ಪ್ರಸಿದ್ಧ 'ಮೋತಿ ಮಹಲ್' ಹೋಟೆಲ್ ಒಬ್ಬ ಮುಸ್ಲಿಂಗೆ ಸೇರಿದುದಾಗಿತ್ತು. ದೇಶ ವಿಭಜನೆಯಾಗಿ ಆತ ತನ್ನ ಆಸ್ತಿಯನ್ನು ಬಿಟ್ಟು ಪಾಕಿಸ್ತಾನಕ್ಕೆ ಹೋಗಬೇಕಾಯಿತು. ಹಾಗೆ ಹೋದ ಮುಸ್ಲಿಂ ಮಹನೀಯರ ಆಸ್ತಿಯನ್ನು ಪಾಕಿಸ್ತಾನದಿಂದ ಭಾರತಕ್ಕೆ ಬಂದ 'ಕುಂದನ್ ಲಾಲ್' ಎಂಬುವವರಿಗೆ ಮಂಜೂರು ಮಾಡಿದ್ದು ಕಾಮತ್ ಅವರೇ ಅಂತೆ. ಲಾಹೋರಿನಲ್ಲಿ ತನ್ನ ಹೋಟೆಲ್ ಉದ್ಯಮವನ್ನು ತೊರೆದು ಬಂದ ಅವನ ಹಿನ್ನೆಲೆಯ ದಾಖಲೆಗಳನ್ನು ಪರಿಶೀಲಿಸಿ ಅವನಿಗೆ ಮಂಜೂರು ಮಾಡಿದ್ದನ್ನು ಅವರು ಮರೆತಿಲ್ಲ.

ಇನ್ನೊಬ್ಬ 'ಸದಾನಂದ ಶಕ್ಕೂಜಾ' ಎಂಬುವವರನ್ನು ಕಾಮತ್ ಮರೆತಿಲ್ಲ. ಆಗ ಅವರು ಕೃಷಿ ಭವನದ ಭಾಗದಲ್ಲಿದ್ದ ಆಸ್ತಿ ವಿಲೇವಾರಿ ಆಫೀಸಿನಲ್ಲಿ ಕುಳಿತಿದ್ದರಂತೆ. ಒಂದು ದಿನ ಲಾಹೋರಿನಿಂದ ಬಂದ ಸದಾನಂದ ಶಕ್ಕೂಜಾ ಆಸ್ತಿ ಪಡೆದುಕೊಳ್ಳಲು ಬಂದನಂತೆ. ತುಂಬಾ ಸಿಟ್ಟಿನಲ್ಲಿ ಕಾಮತರ ಕಛೇರಿಗೆ ಬಂದನಂತೆ. ಕಾಮತರು ಬಂದವನನ್ನು ಕೂರಿಸಿ, ಅವನ ವಿವರಗಳನ್ನೆಲ್ಲ ಕೇಳಿ ತಿಳಿದು, ಅವನು ಸೂಚಿಸಿದ 'ಕರೋಲ್ ಬಾಗ್' ಏರಿಯಾದಲ್ಲೇ ಮನೆ ಮಂಜೂರು ಮಾಡಿ ಕಳಿಸಿದರಂತೆ. ಆಗಲೂ ಆ ಮನುಷ್ಯ ಸಿಟ್ಟಿನಲ್ಲಿ ಧುಮುಗುಡುತ್ತಲೇ ಹೋದನಂತೆ. ಮರುದಿನ ಅದೇ ವ್ಯಕ್ತಿ ಬಂದು ಇವರ ಕಾಲಿಗೆ ಬಿದ್ದು ಕ್ಷಮೆ ಕೇಳಿದನಂತೆ. ಆಶ್ಚರ್ಯದಿಂದ ವಿಚಾರಿಸಿದಾಗ ಅವನು 'ಕಾಮತ್' ಎಂಬ ಹೆಸರು ನೋಡಿ, ಯಾರೋ ಮುಸ್ಲಿಂ ಇರಬಹುದು ಎಂದು ಎಣಿಸಿ ಕೊಂದೇ ಬಿಡುವಷ್ಟು ಕೋಪದಲ್ಲಿದ್ದನಂತೆ. "ಕೈಯಲ್ಲಿ ಡಾಗರ್ (ಆಯುಧ) ಏನಾದರೂ ಸಿಕ್ಕಿದ್ದರೇ ಕೊಂದೇ ಬಿಡುತ್ತಿದ್ದೆ ಸಾಹೇಬರೇ" ಎಂದು ಹೇಳಿ, ಕ್ಷಮಾಪಣೆ ಕೇಳಿದನಂತೆ. ಅವರ ಸಹನೆ–ಸೌಜನ್ಯಕ್ಕೂ ಇದೊಂದು ಉದಾಹರಣೆ. ಇದು ಅವರ ವೃತ್ತಿ ಜೀವನದ ಮರೆಯಲಾರದ ಸೂಕ್ಷ್ಮ ಸಂವೇದನೆ ಘಟನೆಗಳು. ವಿಭಜನೆ ಕಾಲದ ಮಹತ್ತರವಾದ ಜವಾಬ್ದಾರಿಯನ್ನು ಅವರು ದಕ್ಷತೆಯಿಂದ ನಿರ್ವಹಿಸಿದ್ದು ಇತಿಹಾಸದ ಪುಟಗಳಿಗೆ ಸೇರಿಸಬೇಕಾದ ಸಂಗತಿ.

1947 ಡಿಸೆಂಬರ್ ವರೆಗೆ ವಿಭಜನೆಯ ಎಲ್ಲ ಕಾರ್ಯಗಳು ಮುಗಿದಿದ್ದವು. ಅವರ ತರಬೇತಿ ಶಿಕ್ಷಣ ಪುನಃ ಶುರುವಾಯಿತು. 1948 ಮಾರ್ಚ್ ವರೆಗೆ ಪ್ರಶಿಕ್ಷಣ ಮುಗಿದು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಸೇವೆಗೆ ನಿಯುಕ್ತರಾದರು. ಸೇಲಂ ಜಿಲ್ಲೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರ್ ಆಗಿ ಅವರ ವೃತ್ತಿ ಜೀವನ ಆರಂಭವಾಯಿತು.

## ಆಡಳಿತ ವೈಖರಿ

ನೇರ, ದಿಟ್ಟ, ಪ್ರಾಮಾಣಿಕ ಮನೋಭಾವನೆಯ ಕಾಮತ್ ಅವರು ಕಾರ್ಯವೈಖರಿಯಲ್ಲಿ ಎಂದಿಗೂ ಬಹಳ ನಿಷ್ಠುರವಾದಿಗಳು. ಆಂಧ್ರಪ್ರದೇಶದ ಆಗಿನ ಮುಖ್ಯಮಂತ್ರಿ ಚೆನ್ನಾರೆಡ್ಡಿ, ಟಿ.ಟಿ. ಕೃಷ್ಣಮಾಚಾರಿ, ಎಚ್.ಕೆ.ಎಲ್. ಭಗತ್ ಮೊದಲಾದ ಪ್ರಮುಖರೊಡನೆ ಸೇವೆ ಸಲ್ಲಿಸಿರುವ ಕಾಮತ್ ಅವರು ಎಂದಿಗೂ ರಾಜಿ ಮಾಡಿಕೊಳ್ಳದೆ ತಮ್ಮ ದಿಟ್ಟ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಮಾಜಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದ ಕಾಮತ್ ಅವರು ಆಡಳಿತ ವೈಖರಿಯಲ್ಲಿ ತಮ್ಮದೇ ಆದ ಛಾಪನ್ನು, ವ್ಯಕ್ತಿತ್ವವನ್ನು ನಿರಂತರವಾಗಿ ಉಳಿಸಿಕೊಂಡು ಬಂದವರು..

## ಸುಂದರ ಸುಶಿಕ್ಷಿತ ಸಂಸಾರ :


1948ರಲ್ಲಿ ಜನಾರ್ಧನ ಕಾಮತರು ಮಂಜೇಶ್ವರ ಮೂಲದ ಶಾಂತಿ ಪ್ರಭು ಅವರನ್ನು ಮದುವೆಯಾದರು. ಶಾಂತಿ ಅವರು ಕೊಂಕಣಿ ಮತ್ತು ಕನ್ನಡವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಬಂಗಾಲಿ ಭಾಷೆಯನ್ನೂ ಬಲ್ಲವರಾಗಿದ್ದರು. ದೆಹಲಿ ಕರ್ನಾಟಕ ಸಂಘದ ಯಾವ ಕಾರ್ಯಕ್ರಮವನ್ನೂ ತಪ್ಪಿಸುತ್ತಿರಲಿಲ್ಲ. ಸಂಗೀತ ಪ್ರವೀಣೆ. ಹಿರಿಯ ಮಗ ಪ್ರೇಮ್ ಕಾಮತ್ ಮತ್ತು ಬಂಗಾಳಿ ಸೊಸೆ ರೀನಾ ಮುಂಬೈಯಲ್ಲಿ ವಾಸಿಸುತ್ತಿದ್ದಾರೆ. ಪಿ.ಹೆಚ್. ಡಿ ಓದಿದ ಕಿರಿಯ ಮಗ ಡಾ. ಶ್ಯಾಮ್ ಕಾಮತ್ ಮತ್ತು ಸೊಸೆ ಕಿರಣ್ ಅಮೇರಿಕೆಯ ಕ್ಯಾಲಿಫೋರ್ನಿಯಾದಲ್ಲಿ ವಾಸಿಸುತ್ತಿದ್ದಾರೆ. ಇಬ್ಬರೂ ಅಧ್ಯಾಪಕ ವೃತ್ತಿಯಲ್ಲಿದ್ದಾರೆ. ಕಿರಣ್ ಕೊಂಕಣಿ ಕುಟುಂಬದ ಆಗಿನ ಆಂಧ್ರದ ಚೀಫ್ ಸೆಕ್ರೆಟರಿಯಾಗಿದ್ದ ಎಮ್.ಪಿ. ಪೈ ಅವರ ಮೊಮ್ಮಗಳು.

# ಜೀವನದ ಕಾಲ ಘಟ್ಟ


| | | |
|---|---|---|
| 1921 | – | ಕೋಟಂಚೆರ್ರಿಯಲ್ಲಿ ಅಕ್ಟೋಬರ್ 25ರಂದು ಜನನ. |
| 1943 | – | ಎಂ.ಎ. ಪದವಿ. |
| 1944–46 | – | ನಾಸಿಕ್‌ನಲ್ಲಿ ಸೇವೆ. |
| 1946–47 | – | ಐ.ಸಿ.ಎಸ್. ಪದವಿ. |
| 1948–49 | – | ಸೇಲಂನಲ್ಲಿ ಡೆಪ್ಯುಟಿ ತಹಸೀಲ್ದಾರ್ ಆಗಿ ಕಾರ್ಯನಿರ್ವಹಣೆ. |
| 1949–52 | – | ಮದ್ರಾಸ್ ಸರ್ಕಾರದ ಆಹಾರ ಮತ್ತು ಕೃಷಿ ಇಲಾಖೆಯ ಅಧೀನ ಕಾರ್ಯದರ್ಶಿ. |
| 1952–56 | – | ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಡೆಪ್ಯುಟಿ ಸೆಕ್ರೆಟರಿಯಾಗಿ ಕಾರ್ಯ ನಿರ್ವಹಣೆ. |
| 1956–58 | – | ವಿಶಾಖಪಟ್ಟಣಂನಲ್ಲಿ ಉಪ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಣೆ. |
| 1958–73 | – | ಡೆಪ್ಯುಟಿ ಸೆಕ್ರೆಟರಿಯಾಗಿ ರಕ್ಷಣಾ ಮಂತ್ರಾಲಯ, ಹಣಕಾಸು ಮಂತ್ರಾಲಯ, ವಾರ್ತಾ ಮತ್ತು ಪ್ರಸಾರ ಮಂತ್ರಾಲಯ, ಕೈಗಾರಿಕಾ ಮಂತ್ರಾಲಯ ಮೊದಲಾದ 8 ಮಂತ್ರಾಲಯಗಳಲ್ಲಿ ಸೇವೆ. |
| 1974 | – | ಭಾರತ ಸರ್ಕಾರದ ಕಾರ್ಯದರ್ಶಿಯಾಗಿ ಭಡ್ತಿ. |
| 1974–79 | – | ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ. |
| 1979 | – | ನಿವೃತ್ತಿ. |
| 1980ರ ನಂತರ | – | ಐ.ಸಿ.ಎಸ್.ಎ. ಸಂಸ್ಥೆಯ ಅಧ್ಯಕ್ಷ, ಕೈಗಾರಿಕಾ ಪುನರ್ವಸತಿ, ಮೊದಲಾದ ವಿದೇಶಿ ಸಂಸ್ಥೆಗಳ ಆಡಳಿತ ಸಲಹೆಗಾರರಾಗಿ ಸೇವೆ. |
| 1990ರ ನಂತರ | – | ಹಲವಾರು ಪ್ರತಿಷ್ಠಿತ ಮ್ಯಾನೇಜ್‌ಮೆಂಟ್ ಸಂಸ್ಥೆಗಳಿಗೆ ವಿಸಿಟಿಂಗ್ ಪ್ರೊಫೆಸರ್ ಆಗಿ ಸೇವೆ. |
| ಪ್ರಸ್ತುತ | – | ಹಿರಿಯ ನಾಗರಿಕ ಸಂಘ ಸಂಸ್ಥೆಗಳ ಅಧ್ಯಕ್ಷ, ಸಮ್ಮರ್ ಫೀಲ್ಡ್ ಸ್ಕೂಲಿನ ಆಡಳಿತ ಮಂಡಳಿಯ ಅಧ್ಯಕ್ಷ. |

**ಕನ್ನಡ ಸೇವೆ**

| | | |
|---|---|---|
| 1997–99 | – | ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ. |
| 2006–10 | – | ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ. |




1947ರಲ್ಲಿ ಐ.ಸಿ.ಎಸ್. ತರಬೇತಿಯ ಚಿತ್ರಗಳು



Mr. N. J. Kamath

THE VICEROY & VISCOUNTESS MOUNTBATTEN OF BURMA

AT HOME


*Saturday, 12th April 1947, at 7.0 p.m.*

*at the Viceroy's House, New Delhi.*

DRESS:
Defence Services—Uniform
Civilians—Short Coat or equivalent Indian Dress.
Ladies—Evening Dress or equivalent Indian Dress.

AN ANSWER IS REQUESTED TO THE A. D. C. IN CHARGE OF INVITATIONS

12 ಏಪ್ರಿಲ್ 1947 ರಂದು ವೈಸರಾಯ್ ಹೌಸ್‌ನ ಚಹಾ ಕೂಟದ ಆಮಂತ್ರಣ




The Sunday Statesm[an]

SUNDAY, MAY 25, 1947.

25 ಮೇ 1947ರಲ್ಲಿ ಐ.ಸಿ.ಎಸ್. ಅಭ್ಯರ್ಥಿಯಾಗಿ ಕಾಮತರು

# ಸಂದರ್ಶನ



**ಅಭಿಮತ :** ತಾವು ಸ್ವಾತಂತ್ರ್ಯ ಸಂಗ್ರಾಮದಲ್ಲೇನಾದರೂ ಭಾಗವಹಿಸಿದ್ದೀರಾ ?

**ಕಾಮತ್ :** ನನ್ನ ನಿರಂತರ ವೃತ್ತಿ ಜೀವನ ಸರ್ಕಾರಿ ಕ್ಷೇತ್ರವಾದುದ್ದರಿಂದ ಯಾವುದೇ ಸಂಗ್ರಾಮಗಳಲ್ಲಿ ಭಾಗವಹಿಸುವಂತಿರಲಿಲ್ಲ. ನಾನು ತಂದೆ-ತಾಯಿಗೆ ಒಬ್ಬನೇ ಮಗನಾದ್ದರಿಂದ, ತಾಯಿ ಸೈನ್ಯವನ್ನು ಸೇರಲು ಅನುಮತಿ ಕೊಡಲಿಲ್ಲ. ಆದರೆ ನಿಷ್ಪಕ್ಷಪಾತವಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದ್ದೇನೆ.

**ಅಭಿಮತ :** ಬ್ರಿಟಿಷರೊಂದಿಗೆ ದೀರ್ಘಕಾಲ ವ್ಯವಹರಿಸಿದ ತಮಗೆ ಭಾರತೀಯರೊಂದಿಗೆ ಅವರ ವರ್ತನೆ ಕುರಿತು ಅನಿಸಿದ್ದೇನು?

**ಕಾಮತ್ :** ವೈಯಕ್ತಿಕವಾಗಿ ಬ್ರಿಟಿಷರು ಸ್ನೇಹಪರರು. ಬ್ರಿಟಿಷ್ ಸರಕಾರದಲ್ಲಿನ ಅಧಿಕಾರಿಗಳು ಭಾರತೀಯರೊಂದಿಗೆ ದರ್ಪದಿಂದಲೇ ವ್ಯವಹರಿಸುತ್ತಿದ್ದರು. ದೌರ್ಜನ್ಯವನ್ನೂ ತೋರುತ್ತಿದ್ದರು. ಆದರೆ ನನಗೆ ಅನೇಕ ಬ್ರಿಟಿಷ್ ಅಧಿಕಾರಿಗಳು ಪ್ರಿಯ ಸ್ನೇಹಿತರಾಗಿದ್ದರು. ಸಮಯದ ಪರಿಪಾಲನೆ, ಶಿಸ್ತನ್ನು ಕಲಿತಿದ್ದು ಬ್ರಿಟಿಷರಿಂದಲೇ ಎಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ.

ನಮ್ಮ ದೇಶಕ್ಕೆ ಬ್ರಿಟಿಷರು ನೀಡಿದ ಕೊಡುಗೆಯನ್ನು ನಾವು ಮರೆಯುವಂತಿಲ್ಲ. ರೈಲು ದಾರಿಯನ್ನು ನಿರ್ಮಿಸುವುದು, ಶಿಕ್ಷಣ ವ್ಯವಸ್ಥೆ, ವಿದ್ಯುತ್, ಸಾರಿಗೆ, ಅಂಚೆ, ಸೈನ್ಯ, ಕೈಗಾರಿಕೆ ಮೊದಲಾದ ಪ್ರಗತಿಪರ ಕಾರ್ಯಗಳನ್ನು ನಮಗೆ ಪರಿಚಯಿಸಿದ್ದಾರೆ. ಒಂದು ಬುಡಕಟ್ಟು ಜನರ ಪ್ರಾಂತ್ಯಕ್ಕೆ ರಸ್ತೆ ಮಾಡುವುದಕ್ಕಾಗಿ ಒಬ್ಬ ಬ್ರಿಟಿಷ್ ಅಧಿಕಾರಿ 129 ಮೈಲಿ ಸ್ವತಃ ಕಾಲುನಡಿಗೆಯಿಂದ ಹೋಗಿ, ಸ್ಥಳ ನಿರೀಕ್ಷಣೆ ಮಾಡಿ ರಸ್ತೆ ಮಾಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದುದ್ದನ್ನು ನಾನೆಂದೂ ಮರೆಯಲಾರೆ.

**ಅಭಿಮತ :** ಈಗ ಎಲ್ಲೆಲ್ಲೂ ಭ್ರಷ್ಟಾಚಾರದ ವೈರಸ್ ಹಬ್ಬಿದೆ. ಆಗಿನ ಕಾಲ ಮತ್ತು ಈಗಿನ ವ್ಯವಸ್ಥೆಯ ಬಗ್ಗೆ ತಮ್ಮ ಅನಿಸಿಕೆಯೇನು?

**ಕಾಮತ್ :** ಆಗಿನ ಜಗಜ್ಜೀವನರಾಂ, ನೆಹರೂ, ಸರ್ದಾರ್ ಪಟೇಲ್ ಮುಂತಾದ ಬಹುತೇಕ ರಾಜಕಾರಣಿಗಳು ಪ್ರಾಮಾಣಿಕರಾಗಿದ್ದರು. ಈಗಿನ ಮಂತ್ರಿಗಳು ಮೊದಲಾಗಿ, ಮೇಲ್ದರ್ಜೆ ಅಧಿಕಾರಿಗಳಿಂದ ಹಿಡಿದು ಕೆಳ ವರ್ಗದ ಚಪರಾಸಿ ವರೆಗೂ ಭ್ರಷ್ಟತೆ ತಾಂಡವವಾಡುತ್ತಿರುವುದು ನಿಜಕ್ಕೂ ವಿಷಾದನೀಯ.

**ಅಭಿಮತ :** ಭ್ರಷ್ಟಾಚಾರವನ್ನು ತಡೆಯಬಹುದೇ ?

**ಕಾಮತ್ :** ಇಂಪಾಸಿಬಲ್. ನಮ್ಮ ಯುವಜನರೂ ಅಷ್ಟೇ ಭ್ರಷ್ಟರಾಗುತ್ತಿರುವುದು ಬಹಳ ನಿರಾಶೆಯ ಸಂಗತಿ. ಎಲ್ಲಿಯವರೆಗೆ ನಮ್ಮ ಯುವ ಪೀಳಿಗೆ ಮುಂದೆ ಬರುವುದಿಲ್ಲವೋ, ಎಚ್ಚೆತ್ತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಏನೂ ಸಾಧ್ಯವಿಲ್ಲ.

**ಅಭಿಮತ :** ಹಿಂದೂ-ಮುಸ್ಲಿಂ ಕೋಮು ಗಲಭೆ, ಆತಂಕವಾದ, ಭಯೋತ್ಪಾದನೆ ಬಗ್ಗೆ ಏನಂತೀರಿ ?

**ಕಾಮತ್ :** ಹಿಂದೂ-ಮುಸ್ಲಿಮರು ನಾನು ಕಂಡಂತೆ ಯಾವಾಗಲೂ ಸ್ನೇಹಪರರಾಗಿಯೇ ಇದ್ದಾರೆ. ಪರಸ್ಪರರಲ್ಲಿ ಯಾವ ಮತಭೇದವೂ ಇಲ್ಲ. ಇದೆಲ್ಲ ರಾಜಕಾರಣಿಗಳ ರಾಜಕೀಯ ಕುತಂತ್ರವಷ್ಟೇ. ನನಗೆ ಈಗಲೂ ಅನೇಕ ಅತ್ಯಂತ ಆಪ್ತ ಮುಸ್ಲಿಂ ಗೆಳೆಯರಿದ್ದಾರೆ.

**ಅಭಿಮತ :** ದೆಹಲಿ ಶಿಕ್ಷಣ ಸಂಸ್ಥೆಯೊಂದಿಗೆ ಸುದೀರ್ಘ ನಂಟು ಹೊಂದಿದ ತಮಗೆ ಈಗಿನ ಶಿಕ್ಷಣ ಪದ್ಧತಿಯ ಬಗ್ಗೆ ಅಭಿಪ್ರಾಯವೇನು? ಹೇಗೆ ಸುಧಾರಣೆಯನ್ನು ತರಬಹುದು ?

**ಕಾಮತ್ :** ಈಗ ಶಿಕ್ಷಣದಲ್ಲಿ ಅನೇಕ ಪ್ರಕಾರದ ಅವಕಾಶಗಳಿವೆ. ಆದರೆ ಶಿಕ್ಷಕರಲ್ಲಿ ಬದ್ಧತೆಯಿಲ್ಲ. ಆಗ ನಮಗೆ ಕಲಿಸುವ ಶಿಕ್ಷಕರು ಮಕ್ಕಳ ಶ್ರೇಯಸ್ಸಿಗಾಗಿ ಚಿಂತಿಸುವಂತಹವರಿದ್ದರು. ಈಗ ಶಿಕ್ಷಣ ಕ್ಷೇತ್ರವೂ ಭ್ರಷ್ಟವಾಗಿದೆ. ಶಿಕ್ಷಣ ವ್ಯಾಪಾರವಾಗಿದೆ. ನನಗೆ ಟಿ.ವಿ. ಶೇಷಗಿರಿರಾವ್ ಎಂಬ ಗುರುಗಳು ಯುನಿವರ್ಸಲ್ ರಿಲಿಜನ್ ಓದಿಸುತ್ತಿದ್ದರು. ನೋಡಿ, ನಮಗೆ ಯೂನಿವರ್ಸಲ್ ರಿಲಿಜನ್ ಬಗ್ಗೆ ಕೂಡ ಸಬ್ಜೆಕ್ಟ್ ಇತ್ತು. ದೆಹಲಿಯಲ್ಲಿ ನಮಗೆ ಒಂದೇ ಕನ್ನಡ ಶಾಲೆ. ತಮಿಳರು, ಮಲೆಯಾಳಿಗಳು ಏಳೆಂಟು ಶಾಲೆಗಳನ್ನು ಕಟ್ಟಿ ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ನಮ್ಮ ಕನ್ನಡಿಗರು ಮಾತ್ರ ಒಬ್ಬರನ್ನೊಬ್ಬರು ಎಳೆದಾಡುವುದರಲ್ಲೇ ಸಮಯವನ್ನು ವ್ಯಯಿಸುತ್ತಾರೆ. ನಮ್ಮ ಜನ ಗುಂಪುಗಾರಿಕೆ, ಒಳಜಗಳಗಳನ್ನು ಬಿಟ್ಟು ಕನ್ನಡ ಶಾಲೆಯ ಏಳಿಗೆಗಾಗಿ ಕೆಲಸಮಾಡಬೇಕು. ಆಗಲೇ ನಮ್ಮ ಶಾಲೆ ಉದ್ಧಾರವಾಗುತ್ತದೆ.

**ಅಭಿಮತ :** ದೆಹಲಿ ಕರ್ನಾಟಕ ಸಂಘದೊಡನೆಯೂ ಬಾಂಧವ್ಯ ಹೊಂದಿದ ತಮ್ಮ ಅಧಿಕಾರಾವಧಿಯ ಬಗ್ಗೆ ಏನು ಹೇಳುತ್ತೀರಿ?

**ಕಾಮತ್ :** 1997-99ರ ಸಾಲಿನಲ್ಲಿ ಕೆ.ಆರ್. ನಾಗರಾಜ ಅಧ್ಯಕ್ಷರಾಗಿ, ವೆಂಕಟಾಚಲ ಹೆಗಡೆ ಕಾರ್ಯದರ್ಶಿಯಾಗಿದ್ದಾಗ ನಾನು ಉಪಾಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೆ. ನಮ್ಮ ತಲೆಮಾರಿನ ಸ್ನೇಹಿತರಾದ ಆನಂದ ಕುಮಟಾಕರ, ಕೆ.ಆರ್. ನಾಗರಾಜ್, ಐ. ರಾಮಮೋಹನ ರಾವ್ ಅವರೊಡನೆ ಕಳೆದ ಕಾಲ ಸ್ಮರಣೀಯವಾದುದು. ನಾವೆಲ್ಲ ಹೊಸ ಸಮುಚ್ಚಯದ ಬಗ್ಗೆ ಕನಸು ಕಂಡಿದ್ದೆವು. ನೀಲಿ ನಕ್ಷೆ ತಯಾರಿಸಿದ್ದೆವು. ಆ ಕನಸು ಇಂದು ನನಸಾಗಿದ್ದು ನನಗೆ ತುಂಬಾ ಸಂತೋಷವೆನಿಸುತ್ತದೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರ ಹೆಮ್ಮೆಯಾದ ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಗೆ ಶ್ರಮಿಸಿದ ಎಲ್ಲ ಮಹನೀಯರ ಕೊಡುಗೆ ಬಹಳ ಮಹತ್ತರವಾದದ್ದು. ಇತ್ತೀಚಿನ ವರ್ಷಗಳಲ್ಲಿ ಸಂಘ ಅತ್ಯುತ್ತಮವಾದ ಕೆಲಸ ಮಾಡ್ತಾ ಇರೋದು ನನಗೆ ತುಂಬಾ ಸಂತೋಷವೆನಿಸಿದೆ.

**ಅಭಿಮತ :** ನಿವೃತ್ತರಾಗಿ ಮೂವತ್ತೆರಡು ವಸಂತಗಳು ಕಳೆದರೂ ತಾವು ದೆಹಲಿಯನ್ನೇ ವಾಸಸ್ಥಾನ ಮಾಡಿಕೊಂಡಿದ್ದೀರಿ. ಏನು ಕಾರಣ?

**ಕಾಮತ್ :** ಊರಲ್ಲಿ ಈಗ ಯಾರೂ ಸಂಬಂಧಿಕರಿಲ್ಲ. ಇರುವ ಒಬ್ಬಳೇ ತಂಗಿ ಕೂಡ ಹತ್ತಿರದ ಈಸ್ಟ್ ಆಫ್ ಕೈಲಾಶ್‌ನಲ್ಲಿದ್ದಾರೆ. ನನಗೆ ದೆಹಲಿಯಲ್ಲಿರುವುದೇ ಇಷ್ಟ.

**ಅಭಿಮತ :** ತಾವು ನಿವೃತ್ತ ಜೀವನವನ್ನು ಹೇಗೆ ಕಳೆಯುತ್ತಿದ್ದೀರಿ? ತಮ್ಮ ಹವ್ಯಾಸಗಳೇನು ?

**ಕಾಮತ್ :** ವಾರದಲ್ಲಿ ಮೂರುದಿನ ಗೋಲ್ಫ್ ಆಡಲು ಹೋಗುತ್ತೇನೆ. ಗೋಲ್ಫ್ ಇದ್ದ ದಿನಗಳಲ್ಲಿ ಬೆಳಿಗ್ಗೆ ಐದಕ್ಕೆ ಏಳುತ್ತೇನೆ. ಇಲ್ಲದಿದ್ದರೆ ಐದೂವರೆಗೆ. ಉಳಿದ ನಾಲ್ಕು ದಿನ ಯೋಗ. ದಿನಾ ಬೆಳಿಗ್ಗೆ ಯೋಗ ತಪ್ಪದೇ ಮಾಡುತ್ತೇನೆ. ಪ್ರತಿದಿನ ಸಂಜೆ 15-20 ನಿಮಿಷ ವಾಕಿಂಗ್ ಹೋಗುತ್ತೇನೆ. ಐ.ಐ.ಸಿ, ದೆಹಲಿ ಗೋಲ್ಫ್ ಕ್ಲಬ್, ಜಿಮ್‌ಖಾನಾ ಕ್ಲಬ್, ಇಂಡಿಯಾ ಹ್ಯಾಬಿಟೆಟ್ ಸೆಂಟರ್, ಮತ್ತು ಏರ್ ಫೋರ್ಸ್ ಗೋಲ್ಫ್ ಕ್ಲಬ್‌ನ ಗೌರವ ಸದಸ್ಯ–ಹೀಗೆ ಐದು ಕ್ಲಬ್ಬಿನ ಸದಸ್ಯತ್ವವನ್ನು ಹೊಂದಿದ್ದೇನೆ. ಪುಸ್ತಕ ಓದುತ್ತೇನೆ. ಒಳ್ಳೆ ಈಜುಗಾರನಾಗಿದ್ದೆ. ಅಂತರ್ಜಾಲದಲ್ಲಿ ಸ್ವಲ್ಪ ಹೊತ್ತು ಕಳೆಯುತ್ತೇನೆ. ಮಕ್ಕಳು, ಮೊಮ್ಮಕ್ಕಳಿಗೆ, ಈಮೇಲಿಸುತ್ತೇನೆ. ರಾತ್ರಿ ಹನ್ನೊಂದು ಗಂಟೆಗೆ ಮಲಗುವ ಅಭ್ಯಾಸವಿದೆ. ಜಿಮ್‌ಖಾನಾ ಕ್ಲಬ್ಬಿನ ರೀಡರ್ಸ್ ಪ್ಯಾನೆಲ್‌ನ ಸದಸ್ಯನಾಗಿದ್ದು ಗ್ರಂಥಾಲಯಕ್ಕೆ ಖರೀದಿಸಬೇಕಾದ ಪುಸ್ತಕಗಳ ಆಯ್ಕೆಯನ್ನು ಮಂಜೂರು ಮಾಡುವ ಜವಾಬ್ದಾರಿಯನ್ನೂ ಹೊತ್ತಿದ್ದೇನೆ. ಮೊದಲೆಲ್ಲಾ ಪೇಂಟಿಂಗ್ ಕೂಡ ಮಾಡುತ್ತಿದ್ದೆ.

**ಅಭಿಮತ :** ತೊಂಭತ್ತರ ಹರೆಯದಲ್ಲೂ ಲವಲವಿಕೆಯಿಂದಿರುವ ತಮ್ಮ ಆರೋಗ್ಯದ ಗುಟ್ಟೇನು ?

**ಕಾಮತ್ :** ದಿನಂಪ್ರತಿ ಮುಂಜಾನೆ ಹತ್ತು ಬೇವಿನ ಎಲೆ, ಐದಾರು ತುಳಸೀಎಲೆ, ಒಂದು ಗಿಲೋಯ್ ಎಲೆ ಹಸಿಯಾಗಿ ತಿನ್ನುತ್ತೇನೆ. ಅಲೋ ವೆರಾವನ್ನೂ ಸೇವಿಸುತ್ತೇನೆ. ಸಂಪೂರ್ಣ ಸಸ್ಯಾಹಾರಿ, ಹಿತಮಿತವಾದ ಯೋಗ ಮತ್ತು ಸಂಜೆ ನಡಿಗೆ. (ಕನ್ನಡಕವಿಲ್ಲದೇ ಓದಿ ಬರೆಯಬಲ್ಲ ಕಾಮತರು ಮಾತಿನ ನಡುವೆ ಒಮ್ಮೆಯೂ ನೀರು ಕೂಡಾ ಕುಡಿಯಲಿಲ್ಲ ಅವರ ಅಗಾಧವಾದ ನೆನಪಿನ ಶಕ್ತಿ ಕಂಡು ಬೆರಗಾದೆವು).

**ಅಭಿಮತ :** ನಿಮ್ಮ ಬದುಕಿನ ಸಿದ್ಧಾಂತವೇನು ?

**ಕಾಮತ್ :** ಬದುಕನ್ನು ಪೂರ್ತಿಯಾಗಿ ಅನುಭವಿಸಬೇಕು. 'ಇಂದು' ಮಹತ್ವದ್ದು, ನಿನ್ನೆ ನಾಳೆಗಳ ಚಿಂತೆ ಬೇಡ. ಇವತ್ತಿನ ಸಮಯದ ಸಂಪೂರ್ಣ ಸದುಪಯೋಗ ಮಾಡಿಕೊಳ್ಳಬೇಕು.

**ಅಭಿಮತ :** ದೆಹಲಿ ಕನ್ನಡಿಗರಿಗೆ ನಿಮ್ಮ ಸಂದೇಶ ಏನು?

**ಕಾಮತ್ :** ಸಾವಿರಾರು ಮೈಲಿ ದೂರದಿಂದ ಬಂದ ನಮ್ಮೊಳಗೆ ಕಚ್ಚಾಟ, ಗುಂಪುಗಾರಿಕೆ, ಜಾತೀಯತೆ, ಪ್ರಾಂತೀಯತೆ ಖಂಡಿತಾ ಬೇಡ. ನಾವೆಲ್ಲ ಸಾಮರಸ್ಯದಿಂದ ಒಗ್ಗಟ್ಟಾಗಿ ನಾಡು-ನುಡಿಯ ಘನತೆಯನ್ನು ರಾಷ್ಟ್ರದ ರಾಜಧಾನಿಯಲ್ಲಿ ಎತ್ತಿ ಹಿಡಿಯಬೇಕು ಎಂಬುದೇ ನನ್ನ ಆಸೆ.

**ಉಷಾ ಭರತಾದ್ರಿ**
**ರೇಣುಕಾ ನಿಡಗುಂದಿ**

# ದೆಹಲಿ ಕನ್ನಡ ಶಾಲೆಯಲ್ಲಿ ಬಾಲವಾಡಿ ವಿಭಾಗ ಪ್ರಾರಂಭ



ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯ ಸುವರ್ಣ ಮಹೋತ್ಸವ ವರ್ಷದ ಆಚರಣೆಯ ಅಂಗವಾಗಿ ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದ್ದ ಬಾಲವಾಡಿ ವಿಭಾಗದ ಉದ್ಘಾಟನೆಯು 01.07.2011ರಂದು ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಾಲೆಯಲ್ಲಿ ನೆರವೇರಿತು. ಬಾಲವಾಡಿಯನ್ನು ಉದ್ಘಾಟಿಸಿದ ಹಿರಿಯ ಕನ್ನಡಿಗ ಎನ್.ಜೆ. ಕಾಮತರು ಅಲ್ಲಿ ನೆರೆದಿದ್ದ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕ ವೃಂದ, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಉದ್ದೇಶಿಸಿ ಮಾತನಾಡಿ ಬಾಲವಾಡಿಗೆ ಶುಭಕೋರಿ, ತೀವ್ರಗತಿಯಲ್ಲಿ ವಿಸ್ತಾರಗೊಳ್ಳುತ್ತಿರುವ ದೆಹಲಿಯ ಮಹಾನಗರದಲ್ಲಿ ಇನ್ನೊಂದು ಕನ್ನಡ ಶಾಲೆಯನ್ನೂ ಈ ಸಂಸ್ಥೆ ಪ್ರಾರಂಭಿಸುವಂತಾಗಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರುಗಳಾದ ಡಾ. ಅಹಲ್ಯಾ ಚಿಂತಾಮಣಿ, ಕೆ. ಈಶ್ವರ ಭಟ್, ಸದಸ್ಯರುಗಳಾದ ಸಿ.ಎಂ. ನಾಗರಾಜ, ಚೆನ್ನು ಎಸ್. ಮಠದ, ಡಾ. ಎಸ್. ಶಶಿಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ದೆಹಲಿ ಕನ್ನಡ ಶಾಲೆಯಲ್ಲಿ ಸಂಗೀತದ ಅಧ್ಯಾಪಕರ ಅವಶ್ಯಕತೆ ಇದ್ದು, ಅರ್ಜಿ ಆಹ್ವಾನಿಸಲಾಗಿದೆ. ಸಂಗೀತದಲ್ಲಿ ಪದವೀಧರರಾಗಿದ್ದು (ಕರ್ನಾಟಕ ಸಂಗೀತ) ವಿದ್ವಾಂಸರಿಗೆ ಆದ್ಯತೆ ಇದೆ. ಈ ಕೂಡಲೇ ಕಾರ್ಯದರ್ಶಿಯವರನ್ನು ಸಂಪರ್ಕಿಸಬೇಕಾಗಿ ವಿನಂತಿ : 011-24611360 / 24633391

**ಕಾರ್ಯದರ್ಶಿ**
**ದೆಹಲಿ ಕನ್ನಡ ಶಾಲೆ**

# ಡಾ. ವಸಂತ ಕುಮಾರ್ ಪೆರ್ಲ ಅವರೊಡನೆ ಸುಂದರ ಸಾಹಿತ್ಯ ಸಂಜೆ



ದೆಹಲಿಗೆ ಬಂದ ಸಾಹಿತಿಗಳನ್ನು ಕರೆದು ಅವರೊಂದಿಗೆ ಸಂವಾದಿಸಿ ಗೌರವಿಸುವುದು ದೆಹಲಿ ಕರ್ನಾಟಕ ಸಂಘದ ವಾಡಿಕೆ. ಡಾ. ಪುರುಷೋತ್ತಮ ಬಿಳಿಮಲೆಯವರ ಸುಮಾರು 25 ವರ್ಷದ ಒಡನಾಡಿ ಮಂಗಳೂರು ಆಕಾಶವಾಣಿಯ ನಿಲಯ ನಿರ್ದೇಶಕರಾದ ಡಾ. ವಸಂತ ಕುಮಾರ್ ಪೆರ್ಲ ಅವರು ಸಂಘಕ್ಕೆ ಬಂದು ಸಾಹಿತ್ಯದ ಬಗ್ಗೆ ಸವಿವರವಾಗಿ ಮಾತನಾಡಿದರು.

ಮೊದಲಿಗೆ ಡಾ. ಪುರುಷೋತ್ತಮ ಬಿಳಿಮಲೆ ಅವರು ಸ್ವಾಗತಿಸಿದರು. ಡಾ. ಪೆರ್ಲರವರ ಸಹೋದ್ಯೋಗಿಯಾಗಿದ್ದ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರವಿಶಂಕರ್ ಪೆರ್ಲ ಅವರನ್ನು ಪರಿಚಯಿಸಿದರು. ಅವರು ಆಕಾಶವಾಣಿಯಲ್ಲಿ ಸೇವೆ ಸಲ್ಲಿಸುವುದರ ಜೊತೆಗೆ ಸಾಹಿತ್ಯದ ಎಲ್ಲ ಪ್ರಕಾರದಲ್ಲೂ ಅವರು ಕೃಷಿ ಮಾಡಿರುವ ಅವರು ಸಾಹಿತ್ಯೋಪಾಸನೆಯ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯಿಸಿದರು. ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಅವರ ಕವನಗಳನ್ನು ಆಲಿಸುವ ಆಶಯ ವ್ಯಕ್ತಪಡಿಸಿದರು.

ಡಾ. ಪೆರ್ಲರವರು ಪ್ರಮುಖವಾಗಿ ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡಗಳ ನೈಸರ್ಗಿಕ ಸಂಪತ್ತು, ಅವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಿದರು. ಅವರು ಹೆಚ್ಚಾಗಿ ಕಾವ್ಯದ ಬಗ್ಗೆ ಮಾತನಾಡುತ್ತಾ ಕನ್ನಡ ಕಾವ್ಯದಲ್ಲಿ ಬದಲಾವಣೆಗಳಾಗುತ್ತಾ ಬಂದ ಬಗೆ ಮತ್ತು ಕಾವ್ಯದಲ್ಲಿ ಸಂಗೀತ ಬೆರೆತರೆ ಸಾಹಿತ್ಯ ತನ್ನ ಉತ್ಕೃಷ್ಟತೆಯನ್ನು ಕಳೆದುಕೊಳ್ಳುವ ಆತಂಕ ವ್ಯಕ್ತಪಡಿಸಿ ಸಾಹಿತ್ಯ ಮತ್ತು ಸಂಗೀತಗಳು ಅವುಗಳದ್ದೇ ಆದ ಕೆಲಸ ನಿರ್ವಹಿಸುವುದು ಉಚಿತ. ಇಲ್ಲವೆಂದರೆ ಹಲವು ಬಾರಿ ಸಾಹಿತ್ಯವನ್ನು ಸಂಗೀತದ ಅವಶ್ಯಕತೆಗಳಿಗನುಗುಣವಾಗಿ ತಿರುಚಬೇಕಾದ ಸಂದರ್ಭಗಳ ಬಗ್ಗೆ ವಿವರಿಸಿದರು. ಹಾಗೆಯೇ ಸಾಹಿತ್ಯಾಭ್ಯಾಸಕ್ಕೆ ಮುಂದಿನ ಪೂರ್ವಸಿದ್ಧತೆಯ ಬಗ್ಗೆ ಸೃಜನ ಸಾಹಿತ್ಯವನ್ನು ಅರ್ಥೈಸಿಕೊಳ್ಳಲು ಬೇಕಾದ ಹೃದಯವಂತಿಕೆ ಮುಂತಾಗಿ ಮಾತನಾಡಿದರು. ನಂತರ ಅವರು ಸ್ವರಚಿತ ಭೋಜರಾಜನ ಮೆಟ್ಟಿಲು, ನಿಧಿ ಕಳ್ಳರು, ದೆಹಲಿಯಿಂದ ದೇವಗಿರಿಗೆ ಎಂಬ ಕವನಗಳನ್ನು ವಾಚಿಸಿದರು. 'ಭೋಜರಾಜನ ಮೆಟ್ಟಿಲು' ಎಂಬ ಕವನವು ಪ್ರಸ್ತುತ ರಾಜಕೀಯ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿತ್ತು. ಸೇರಿದ್ದ ಸಾಹಿತ್ಯಾಸಕ್ತರೆಲ್ಲರೂ ಪೆರ್ಲರವರೊಡನೆ ಸಂವಾದ ನಡೆಸಿದರು. ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಸಂಘದ ಸ್ಮರಣಿಕೆ ಮತ್ತು ಪುಷ್ಪಗುಚ್ಛ ನೀಡಿ ಸನ್ಮಾನಿಸಿದರು. ಡಾ. ಪುರುಷೋತ್ತಮ ಬಿಳಿಮಲೆಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

■ ಪಿ.ಸಿ. ಶ್ರೀನಿವಾಸ

## ಸಂಘಕ್ಕೆ ಭೇಟಿ ನೀಡಿದ ಗಣ್ಯರು





ಕೇಂದ್ರ ಸಚಿವ ಶ್ರೀ ಎಂ. ವೀರಪ್ಪ ಮೊಯಿಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಶ್ರೀ ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶ್ರೀ ನಲ್ಲೂರ್ ಪ್ರಸಾದ್ ಹಾಗೂ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷ ಶ್ರೀ ಕುಂಬ್ಳೆ ಸುಂದರ ರಾವ್ ಅವರೊಡನೆ ಸಂಘದ ಪದಾಧಿಕಾರಿಗಳು

ಅಭಿನಂದನೆ

# ಕೃಷಿ ವಿಜ್ಞಾನಿ ಡಾ. ಚಂದ್ರೇಗೌಡ ಎಂ.ಜೆ. ಅವರಿಗೆ 2011ನೇ ಸಾಲಿನ 'ಉತ್ಕೃಷ್ಟ ಕೃಷಿ ಸೇವಾ ಟ್ರೋಫಿ'



ಪ್ರಶಸ್ತಿ ಸ್ವೀಕರಿಸುತ್ತಿರುವ ಡಾ. ಚಂದ್ರೇಗೌಡರು



ದೆಹಲಿ ಒಕ್ಕಲಿಗ ಗೌಡ ಸಮಾಜದ ವತಿಯಿಂದ ಡಾ. ಚಂದ್ರೇಗೌಡರಿಗೆ ಅಭಿನಂದನೆ

ಮೂಲತಃ ಹಾಸನ ಜಿಲ್ಲೆ ಮರವಳಲು ಎಂಬ ಹಳ್ಳಿಯಲ್ಲಿ ರೈತಾಪಿ ಕುಟುಂಬದಲ್ಲಿ ತಂದೆ ದಿ. ಜವರೇಗೌಡ ಮತ್ತು ತಾಯಿ ಲಕ್ಷ್ಮಮ್ಮ ಅವರ ಮಗನಾಗಿ 1965ರಲ್ಲಿ ಜನಿಸಿದ ಡಾ. ಚಂದ್ರೇಗೌಡ ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲೇ ಮುಗಿಸಿ ಮುಂದೆ ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿಗೆ ಬಂದು ಕೃಷಿ ವಿಶ್ವವಿದ್ಯಾಲಯದಲ್ಲಿ ಎಂ.ಎಸ್.ಸಿ. (ಅಗ್ರಿ) ಮತ್ತು ಪಿ.ಎಚ್.ಡಿ. ವ್ಯಾಸಂಗ ಮಾಡಿ ಒಟ್ಟು ನಾಲ್ಕು ಚಿನ್ನದ ಪದಕ ಪಡೆದರು. ಅಂತರಾಷ್ಟ್ರೀಯ ಸಂಸ್ಥೆಯಾದ ಆಹಾರ ಮತ್ತು ಕೃಷಿ ಸಂಸ್ಥೆ ಮತ್ತು ಏಷಿಯಾದ ಉತ್ಪಾದಕ ಸಂಸ್ಥೆ ಆಯೋಜಿಸಿದ್ದ ಸಮ್ಮೇಳನಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪ್ರತಿನಿಧಿಸಿರುವರಲ್ಲದೆ ಹಲವಾರು ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಖ್ಯಾತಿ ಪಡೆದಿರುತ್ತಾರೆ. ಇವರಿಗೆ ಇಂಡಿಯನ್ ಸೊಸೈಟಿ ಆಫ್ ಎಕ್ಸ್‌ಟೆನ್‌ಶನ್ ಎಜುಕೇಶನ್ ಎಂಬ ಸಂಸ್ಥೆ 2006ನೇ ಸಾಲಿನಲ್ಲಿ 'ಯುವ ವಿಜ್ಞಾನಿ ಪ್ರಶಸ್ತಿ'ಯನ್ನು ನೀಡಿ ಗೌರವಿಸಿರುತ್ತದೆ. ಪ್ರಸ್ತುತ ಇವರು ಭಾರತ ಸರಕಾರದ ಕೃಷಿ ಮಂತ್ರಾಲಯ ದೆಹಲಿಯಲ್ಲಿ ಅಪರ ಆಯುಕ್ತ (ಕೃಷಿ ವಿಸ್ತರಣೆ)ರಾಗಿ ಸೇವೆ ಸಲ್ಲಿಸುತ್ತಾ ಭಾರತದ 28 ಜಿಲ್ಲೆ ಮತ್ತು ಮೂರು ಕೇಂದ್ರಾಡಳಿತ ಪ್ರದೇಶದ ಕೃಷಿ ಅಭಿವೃದ್ಧಿ ವಿಸ್ತರಣೆ, ಮತ್ತು ವಿವಿಧ ಯೋಜನೆಗಳ ಅನುಷ್ಠಾನ, ರೈತರಿಗೆ ನೆರವು ನೀಡುವ ಯೋಜನೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ಅಂತರಾಷ್ಟ್ರೀಯ ವ್ಯಾಪಾರ ಮೇಳದಲ್ಲಿ ಕೃಷಿ ಪೆವಿಲಿಯನ್‌ಗೆ ಪ್ರಶಸ್ತಿ ಪಡೆದ ಇವರು 2011 ಗಣರಾಜ್ಯೋತ್ಸವದಲ್ಲಿ ಕೇಂದ್ರ ಕೃಷಿ ಮಂತ್ರಾಲಯದ 'ಕೃಷಿ ಸ್ತಬ್ಧಚಿತ್ರ' ವನ್ನು ವಿನ್ಯಾಸ ಮಾಡಿದ್ದರು. ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ ಭಾರತ ಸರಕಾರವು ಅವರಿಗೆ 2011ನೇ ಸಾಲಿನ "ಉತ್ಕೃಷ್ಟ ಕೃಷಿ ಸೇವಾ ಟ್ರೋಫಿ" ನೀಡಿ ಗೌರವಿಸಿದೆ.

ಪ್ರಾಮಾಣಿಕತೆ, ದಕ್ಷತೆ, ಕಠಿಣ ಪರಿಶ್ರಮಕ್ಕೆ ಹೆಸರುವಾಸಿಯಾದ ಡಾ.ಚಂದ್ರೇಗೌಡರಿಗೆ 'ದೆಹಲಿ ಗೌಡ ಸಮಾಜ'ವು ದಿನಾಂಕ 30.7.2011 ರಂದು ಪುಷ್ಪಗುಚ್ಛ ಹಾಗೂ ಶಾಲು ಹೊದಿಸಿ ಗೌರವಿಸಿತು. ಅವರಿಗೆ ಇನ್ನೂ ಹೆಚ್ಚಿನ ಯಶಸ್ಸು, ಕೀರ್ತಿ ಲಭಿಸಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.

■ ಶ್ರೀನಿವಾಸ ಪಿ.ಸಿ.

## ಸ್ನೇಹ ಜೀವಿ ಮಂಜುನಾಥ ಶೆಟ್ಟರಿಗೆ ಸವಿನಯ ಬೀಳ್ಕೊಡುಗೆ



ಮಂಜುನಾಥ ಶೆಟ್ಟಿ ಅವರನ್ನು ಅಭಿನಂದಿಸುತ್ತಿರುವ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಬಿ.ಎಸ್. ರಾಮಕೃಷ್ಣ ಮತ್ತು ಕಾರ್ಯದರ್ಶಿ ಎಂ.ವಿ. ವೆಂಕಟೇಶ್

ಸುಮಾರು ಎರಡು ದಶಕಗಳ ಕಾಲ ದೆಹಲಿಯ ಕಾಫಿ ಬೋರ್ಡ್‌ನಲ್ಲಿ ಸೇವೆ ಸಲ್ಲಿಸಿದ ಜನಕಪುರಿ ನಿವಾಸಿಯಾದ ಮಂಜುನಾಥ ಶೆಟ್ಟಿಯವರು ತಿರುಪತಿಗೆ ಕಾರ್ಯ ವರ್ಗಾವಣೆಯ ಪ್ರಯುಕ್ತ ತೆರಳುತ್ತಿದ್ದಾರೆ. ಜನಕಪುರಿ ಕನ್ನಡ ಕೂಟ, ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಹಾಗು ಇನ್ನಿತರ ಅನೇಕ ಕನ್ನಡ ಪರ ಸಂಘ ಸಂಸ್ಥೆಗಳಲ್ಲಿ ಸೇವೆ ಮಾಡಿದ ಕೀರ್ತಿ ಇವರದು, ಸದಾ ಹಸನ್ಮುಖಿಯಾದ ಸ್ನೇಹ ಜೀವಿ ಮಂಜುನಾಥ ಶೆಟ್ಟರು ದೆಹಲಿಯಿಂದ ಹೋಗುತ್ತಿರುವುದು ದೆಹಲಿ ಕನ್ನಡಿಗರ ಪಾಲಿಗೆ ನಷ್ಟವೆನಿಸಿದರೂ, ಅವರು ಮುಂಬರುವ ವೃತ್ತಿ ಜೀವನದಲ್ಲಿ ಮತ್ತಷ್ಟು ಯಶಸ್ಸು ಕಾಣಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಆಶಿಸುತ್ತೇವೆ.

■ ವೆಂಕಟೇಶ್.ಎಂ. ವಿ.

# ನಾ ಕಂಡ ಅವಿಸ್ಮರಣೀಯ ಯುರೋಪ್ ಖಂಡ

## ನನ್ನ ಮೊದಲ ವಿದೇಶ ಪ್ರವಾಸ

ಜುಲೈ ಸಂಚಿಕೆಯ ಮುಂದುವರಿದ ಭಾಗ

**8ನೇ ದಿನ ಮೇ 2**

ಎಂದಿನಂತೆ ಗಡದ್ದಾಗಿ ಬೆಳಗಿನ ತಿಂಡಿ ತಿಂದು ಬಸ್ಸಿನಲ್ಲಿ Schaffhausenಗೆ ಹೋಗಿ ಸುಂದರವಾದ Rhinefalls ನೋಡಿದೆವು. ಇಲ್ಲಿನ ನೀರು ಬೀಳುವ ರಭಸ 20,000ಲೀಟರ್/ಸೆಕೆಂಡ್. ನೋಡಿದರೆ ಬಿಳಿಯ ದಟ್ಟ ಹೊಗೆಯಂತೆ! ನಂತರ ಜರ್ಮನಿ ದಾಟಿ Titisee ಸರೋವರದೆಡೆಗೆ ಸಾಗಿದೆವು. ಅಬ್ಬಾ! ಬ್ಲಾಕ್ ಫಾರೆಸ್ಟ್ ಎಂದೇ ಕರೆಯಿಸಿಕೊಳ್ಳುವ ದಟ್ಟವಾದ FIR ಮರಗಳು ಮತ್ತು ಹೂವಿನ Medows. ಈ ಕಾಡಿನೊಳಗೆ ಹೋದರೆ ಹಿಂತಿರುಗಿ ಬರಲಾಗುವುದೋ ಇಲ್ಲವೋ ಎಂಬ ಭಯ. 1000 ಮೈಲಿಗಳಷ್ಟು ದೂರದವರೆಗೂ ರಸ್ತೆಯ ಎರಡೂ ಬದಿಯಲ್ಲಿ FIR ಮರಗಳಿಂದ ಹರಡಿದೆ. ಮರಗಳು ಸುಂದರವಾಗಿ ಶಿಸ್ತಿನ ಸಿಪಾಯಿಗಳಂತೆ ನಿಂತಿವೆ. ಹಿಮವರ್ಷ ಋತುವಿನಲ್ಲಿ ಮಂಜು ಬಿದ್ದಾಗ ಹಸಿರು ಮರ, ಅಲ್ಲಲ್ಲಿ ಕೊಕ್ಕರೆಯ ಬಿಳುಪು–ಕಾಗೆಯ ಕಪ್ಪು ಕೂಡಿ ಮುಚ್ಚಿಕೊಂಡು ಬ್ಲಾಕ್ ಫಾರೆಸ್ಟ್ ಪ್ಯಾಸ್ಟ್ರಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. (ಈಗ ಕೇಕ್ ಮತ್ತು ಪ್ಯಾಸ್ಟ್ರಿ ಅಂಗಡಿಗಳಲ್ಲಿ ಬ್ಲಾಕ್ ಫಾರೆಸ್ಟ್ ಪ್ಯಾಸ್ಟ್ರಿ ಮಾಡಿ ಮಾರಲು ಸಿಗುತ್ತೆ). ಇಲ್ಲಿಂದ ಮುಂದೆ Drubra–ಮರದ ಕಾಂಡದಿಂದ ತಯಾರಿಸುವ ಕುಕ್ಕೂ ಗಡಿಯಾರ ಮಾಡುವ ಮನೆ. Drubra ವಂಶದ ಪಾರಂಪರ್ಯವಾಗಿ ಬಂದ ಈ ಕಸುಬನ್ನು ಈಗ 5ನೇ ಪೀಳಿಗೆಯ ವಂಶಜ ನಮಗೆ ಪ್ರಾತ್ಯಕ್ಷಿಕವಾಗಿ ಗಡಿಯಾರ ಮಾಡುವ ವಿಧಾನವನ್ನು ವಿವರಿಸಿದ್ದು ನಮಗೆ ಅರಿವು ಮೂಡಿಸಿತು. ಗಡಿಯಾರದಲ್ಲಿ ಪ್ರತಿ ಗಂಟೆ ಬಾರಿಸಿದಾಗಲೂ ಕುಕ್ಕೂ ಪಕ್ಷಿ ಹೊರಗೆ ಬಂದು ಇಣಕಿ ನೋಡಿ ಹಾಡಿ ನರ್ತಿಸಿ ಹೋಗುವ ಈ ಕುಕ್ಕೂ ಗಡಿಯಾರ ನಮ್ಮ ಅಜ್ಜನ ಮನೇಲಿತ್ತು. ಅಲ್ಲಿಗೆ ಹೇಗೆ ಬಂದಿತ್ತೋ ಗೊತ್ತಿಲ್ಲ. ಈಗ ಎಲ್ಲಿದೆಯೋ ಗೊತ್ತಿಲ್ಲ.




**9ನೇ ದಿನ ಮೇ 3**

Rhine ನದಿಯಲ್ಲಿ ಹಡಗಿನಲ್ಲಿ ಪ್ರವಾಸ. St.Gore ಎಂಬ ಜಾಗದಿಂದ ಹಡಗು ಹತ್ತಿ ಒಂದು ಗಂಟೆ ಪ್ರಯಾಣದಿಂದ Boppard ಎಂಬ ಜಾಗಕ್ಕೆ ಬಂದು ಅಲ್ಲಿ ನಮಗಾಗಿ ಕಾದಿದ್ದ ಬಸ್ಸಿನಲ್ಲಿ ಕ್ಯಾಥೆಡ್ರಲ್‌ಗಳ ಪಟ್ಟಣ cologneಗೆ ಹೋದೆವು. ಅಲ್ಲಿ 120 ಮೀಟರ್ ಎತ್ತರದ 900 ವರ್ಷಗಳ ಹಳೆಯ ಕ್ಯಾಥೆಡ್ರಲ್. ಅದನ್ನು ಪೂರ್ಣ ಕಟ್ಟಲು 600 ವರ್ಷಗಳು ಸಂದವಂತೆ. ಅದು ಎಷ್ಟು ದೊಡ್ಡದೆಂದರೆ ಸದಾ ಒಂದಲ್ಲ ಒಂದು ಭಾಗವನ್ನು ನವೀಕರಿಸುತ್ತಿರುತ್ತಾರಂತೆ. ಇದು ನಿಜವಾಗಿಯೂ Gothic ಕಟ್ಟಡ. ಶಿಲ್ಪಕಲೆಯ ಕರಕುಶಲತೆಗೆ ಉದಾಹರಣೆ. ರಂಗೋಲಿ ಎಂಬ ಭೋಜನಾಲಯದಲ್ಲಿ ಊಟದ ನಂತರ ಬ್ರುಸೆಲ್‌ಗೆ ಸಾಗಿದೆವು. 3 ಗಂಟೆಗಳ ಪ್ರಯಾಣ ಮಾಡಿ ಬೆಲ್ಜಿಯಂಗೆ ಬಂದೆವು. ವಜ್ರ ಕಳ್ಳತನ, ಹೇಯ ಕಾರ್ಯಗಳಿಗೆ ಹೆಸರಾದ ಜಾಗ. ನಾವು ನಮ್ಮ ಪಾಸ್‌ಪೋರ್ಟ್, ಹಣ ಮತ್ತು ಬೆಲೆ ಬಾಳುವ ಡಾಕ್ಯುಮೆಂಟ್ಸ್ ಬಹಳ ಜಾಗರೂಕತೆಯಿಂದ ಅದುಮಿ ಹಿಡಿದುಕೊಂಡು ಓಡಾಡುತ್ತಿದ್ದೆವು. ಕಿಟಕಿಗಳ ಗಾಜಿನ ಮೇಲೆ ವರ್ಣರಂಜಿತ ಚಿತ್ರಗಳನ್ನು ಬಿಡಿಸಿರುವ ಹೆಸರು ವಾಸಿಯಾದ ಸೇಂಟ್ ಮೈಕೆಲ್ ಚರ್ಚ್ ನೋಡಿದೆವು. ಇಲ್ಲಿ ಬೆಲ್ಜಿಯಂ ವ್ಯಾಫೆಲ್ಸ್ ಅದರ ಮೇಲೆ ಸಿಹಿ ಕೆನೆಯ ಗೋಪುರ. ಮಧುಮೇಹವಿಲ್ಲದವರಿಗೂ ಅದನ್ನು ತಿಂದರೆ, ಬರುವ ಸಾಧ್ಯತೆ ಇದೆ. ಬಂದರೆ ಬರಲಿ ಎಂದು ನಾವು ತಿಂದೇ ಬಿಟ್ಟೆವು! ತದನಂತರ ಅಟೋಮಿಯಮ್ ಎಂಬ 9 ಕಬ್ಬಿಣದ ಹರಳುಗಳ ಒಂದು ದೊಡ್ಡ ಪರಮಾಣು ಆಕೃತಿಯನ್ನು ನೋಡಿದೆವು. ಒಂದು ಪರಮಾಣುವನ್ನು 165 ಬಿಲಿಯನ್ ಪಟ್ಟು ಬೃಹದಾಗಿಸಿದ ಈ ಆಕೃತಿಯಲ್ಲಿ ಪ್ರತಿ ಒಂದು ಪರಮಾಣುವಿಗೂ ಎಸ್ಕಲೇಟರ್‌ನಿಂದ ಸಂಪರ್ಕವಿದೆ. ಕಚೇರಿ, ಕಾನ್‌ಫೆರೆನ್ಸ್ ಕೋಣೆಗಳು, ಗ್ರಂಥಾಲಯಗಳು. ವ್ಯಾಪಾರಕ್ಕೆ ಸಂಬಂಧಪಟ್ಟ ಕಟ್ಟಡಗಳು, ಅಲ್ಲದೆ ಹೋಟೆಲ್‌ಗಳು ಇವೆ. ಇಲ್ಲಿ ಸಾಕಷ್ಟು ಫೋಟೋ ಸೆಷನ್ ನಡೆಯಿತು. ಮುಂದೆ Antwerp ಎಂಬ ಜಾಗಕ್ಕೆ ಬಂದು ಉಳಿದೆವು.

**10ನೇ ದಿನ ಮೇ 4**

ಬೆಳಗಿನ ಉಪಹಾರದ ನಂತರ ಹೊರಟಿದ್ದು ವಸಂತ ತೋಟಕ್ಕೆ (Spring garden). Tulip Kenkenhof at lisseಗೆ ಹೋದೆವು. ಅಲ್ಲಿ ಬಾಗಿಲಿನಲ್ಲಿ ಯಂತ್ರ ವಾದ್ಯ ಸಂಗೀತ ನಡೆಯುತ್ತಿತ್ತು. ಅಲ್ಲಿ ಯಾವ ಮನುಷ್ಯನೂ ವಾದ್ಯ ನುಡಿಸುತ್ತಿರಲಿಲ್ಲ. ಅದ್ಭುತ ಯಾಂತ್ರಿಕ ರಚನೆ. ಪ್ರತಿ ವಾದ್ಯದ ಮುಂದೆ ಹಾಡಿನ ಪುಸ್ತಕ. ಚಕ್ರ ಮತ್ತು ದಪ್ಪ ದಾರಗಳ ಸಹಾಯದಿಂದ ಆಟೊಮ್ಯಾಟಿಕಾಗಿ ಒಂದಾದ ನಂತರ ಒಂದು ಬಾರಿಸುವ ವಾದ್ಯಗಳು. ಅದೇನು ವಾದ್ಯ ಗೋಷ್ಠಿಯ ಸಂಯೋಜನೆ! ಅದರಲ್ಲಿ ಬರುತ್ತಿದ್ದ ಹಾಡುಗಳು ಹಿಂದಿನ ದಿನಗಳ ಹಾಲಿವುಡ್ ಹಾಡುಗಳು! ರಚಿಸಿದ ತಂತ್ರಗಾರ ಯಾರೋ ಗೊತ್ತಾಗಲಿಲ್ಲ. ಮುಂದೆ ನೋಡುತ್ತಾ ಸಾಗಿದಾಗ ಎಂತೆಂತಹ ಟ್ಯೂಲಿಪ್‌ಗಳು. ಜೊತೆಗೆ ಬೇರೆ ಬೇರೆ ಜಾತಿಯ ಹೂಗಳು. ಬಣ್ಣಗಳ ಸಂಯೋಜನೆ ಬಿರಿದು ಅರಳಿದ ಹೂವುಗಳ ಸೌಂದರ್ಯ ಮನೋಹರ ದೃಶ್ಯ. (ಅಮಿತಾಬ್–ರೇಖಾರವರ ನಾಲ್ಕಾರು ಬಣ್ಣಗಳ ಟ್ಯೂಲಿಪ್ ಗಿಡಗಳ ಸಾಲುಗಳ ಮಧ್ಯೆ ಪ್ರಣಯ ಗೀತೆ–ಸಿಲ್‌ಸಿಲಾ ಸಿನೆಮಾದ ದೃಶ್ಯ ಕಣ್ಮುಂದೆ ಹಾದು ಹೋಯಿತು). ಹಾಲೆಂಡ್ (ನೆದರ್‌ಲ್ಯಾಂಡ್) ಮುಂಚಿನಿಂದಲೂ ಮರದ ತುಂಡಿನಿಂದ ಮಾಡಿದ ಸಾಮಾನುಗಳಿಗೆ ಪ್ರಸಿದ್ಧಿ. ಅಮಸ್ಟರ್ ಡ್ಯಾಮ್, ಅಮಸ್ಟರ್‌ಡ್ಯಾಮ್ ಕಾಲುವೆ ಮತ್ತು ಸೇತುವೆಗಳ ನಗರವೆಂದು ಹೆಸರುವಾಸಿ. 168 ಕಾಲುವೆಗಳು, 1208 ಸೇತುವೆಗಳು. ಅಮಸ್ಟರ್ ಡ್ಯಾಮ್ ಕಾಲುವೆಯ ಮೂಲಕ Madurodam ತಲುಪಿದೆವು. ಅದು ಒಂದು ಸಣ್ಣದಾದ ಹಾಲೆಂಡಿನ ತದ್ರೂಪವಾದ ನಗರ. 1:25ರ ಅಳತೆಯಲ್ಲಿ ಮದೂರೋ ಎಂಬ ಇಂಜಿನಿಯರ್ ತಯಾರಿಸಿದ್ದು. ಪೂರ್ತಿ ನಗರ ಸುಮಾರು 200 miniature ಗಳಿಂದ ಕೂಡಿದೆ. ಅತ್ಯುತ್ತಮ ರಚನೆ! ಪೂರ್ತಿ ಹಾಲೆಂಡಿನಲ್ಲಿ ಏನೇನು ಇದೆಯೋ ಅಷ್ಟೂ Madarodam ನಲ್ಲಿ ರಚಿಸಿದೆ. ನಾವೆಲ್ಲ ಗಲಿವರರಂತೆ ಕಂಡು ಹಾಲೆಂಡಿನ ಎಲ್ಲ ಸ್ಥಳಗಳೂ ಲಿಲಿಪುಟ್‌ರಂತೆ ಕಂಡು ಬರುತ್ತೆ. ಸಾಕಷ್ಟು ಪೋಟೋಗಳನ್ನು ಕ್ಲಿಕ್ಕಾಯಿಸಿದೆವು.

**11ನೇ ದಿನ ಮೇ 5**

ಇಂದಿನ ಪಯಣ ಪ್ಯಾರಿಸ್‌ಗೆ. Chantilly ಅತ್ಯಂತ ದೊಡ್ಡ ರಾಜವೈಭವದ ಎಸ್ಟೇಟ್. ಇದು ಫ್ರಾನ್ಸ್‌ನಲ್ಲಿದೆ. ಅಲ್ಲಿ ಕಲಾರೂಪಿ Chateau–ಅದು ರಾಜರುಗಳ ಅರಮನೆ, ಮಧ್ಯ ಕಾಲೀನ ಸಮಯದ್ದು. ಅಲ್ಲೇ ಅರಮನೆಗೆ ಅಂಟಿಕೊಂಡಂತೆ ಹಿಂದೆ ಇದ್ದ 400 ಕುದುರೆಗೆ ಲಾಯ ಮತ್ತು 1200 ನಾಯಿಗಳ ಮನೆ. ಆಗಿನ ರಾಜಕುಮಾರ ಮುಂದೆ ಹುಟ್ಟಿದರೆ ಕುದುರೆಯಾಗಿಯೇ ಹುಟ್ಟ ಬೇಕೆನ್ನುವ ಆಸೆಯಿಂದ ಇಂತಹ ರಾಜವೈಭವದ ಲಾಯ ಕಟ್ಟಿಸಿದ್ದನಂತೆ. ಈಗ ನಮಗೆ ಆ ಲಾಯದಲ್ಲಿ ವಾಸಿಸಲು ಜಾಗ ಕೊಟ್ಟರೆ ಖುಷಿಯಿಂದ ಇರಬಹುದು. ಅಷ್ಟು ಸುಂದರವಾದ ಲಾಯ. ನಮಗೆ ಆ ಅರಮನೆಯ ಊಟದ ಮನೆಯಲ್ಲೇ ಮಧ್ಯಾಹ್ನದ ಸುಗ್ರಾಸ ಭೋಜನ. ಆಮರಸ ಪೂರಿ, ಚಟ್ನಿ, ಗುಜರಾತಿ ಉಂಡಿ ಇನ್ನೂ ಅನೇಕ ರುಚಿಯಾದ ವ್ಯಂಜನಗಳು. ತಿಂದು ತೇಗಿ ಸುಸ್ತಾದೆವು. ನಂತರ ಎಲ್ಲರೂ ಒಂದು ಸಾರಿಯಾದರೂ ನೋಡಬೇಕೆಂಬ ಆಸೆಯ ಮಹಾಗಾತ್ರದ ಐಫೆಲ್ ಟವರ್! ಅದನ್ನು ನೋಡಿದ ಕೂಡಲೇ ಇಲ್ಲಿಯೇ ಚಿತ್ರೀಕರಣವಾದ ಇವನಿಂಗ್ ಇನ್ ಪ್ಯಾರಿಸ್ ಚಿತ್ರದ ಶಮ್ಮಿ ಕಪೂರ್–ಶರ್ಮಿಳಾ ಟಾಗೋರ್ ಅವರ ಪ್ರಣಯ ಗೀತೆ ಮನಃಪಟಲದಲ್ಲಿ ತೇಲಿ ಹೋಯಿತು. ನಮ್ಮ ಭಾರತೀಯ ಉಡುಗೆಗಳಿಂದ ಅಲಂಕೃತರಾಗಿ ನಾವು ಕುತೂಹಲದ ಲಿಡೋ ಶೋ ನೋಡಲು ಹೋದೆವು. ಹೋಗುತ್ತಾ ದಾರಿಯಲ್ಲಿ ಲಕ್ಷಗಟ್ಟಲೆ ದೀಪಗಳಿಂದ ಝಗಝಗಿಸುವ ಐಫೆಲ್

ಟವರ್ ಅನ್ನು ನೋಡಿದೆವು. ಕಣ್ಣು ಕೋರೈಸುವ ಬೆಳಕನ್ನು ಬೀರುತ್ತಾ ತನ್ನ ಎತ್ತರದಷ್ಟೇ ಘನವಾಗಿ ಕಾಣಿಸುತ್ತಿತ್ತು. ಎಷ್ಟೇ ಫೋಟೋ ತೆಗೆದರೂ ನಮ್ಮ ಕಣ್ಣಿನ ಕ್ಯಾಮೆರಾದಲ್ಲಿ ಸೆರೆಹಿಡಿಯುವ ಚಿತ್ರದಂತಿಲ್ಲ. ಲಿಡೋ ಶೋ ನಮಗೆ ತುಂಬಾ ಮೆಚ್ಚುಗೆ ಆಗಲಿಲ್ಲ. ದೊಡ್ಡ ರಂಗ ಮಂಚ, ರಂಗಸಜ್ಜಿಕೆ, ನೃತ್ಯಗಾರರು, ವೇಷಭೂಷಣ ಅತ್ಯುತ್ತಮವಾಗಿದ್ದರೂ ಅಷ್ಟೇನೂ ಹಿಡಿಸಲಿಲ್ಲ. ಪ್ರತಿ ಒಬ್ಬರಿಗೂ 33 ಯುರೊನ ಒಂದು ಟಿಕೆಟ್ (ಅಂದರೆ 2145/–ರೂ)

**12ನೇ ದಿನ ಮೇ 6**

ಮೊನಾಲಿಸಳ ಮೂಲ ಚಿತ್ರದೊಡನೆ ಇನ್ನೂ ಅತ್ಯಂತ ಚೆನ್ನಾದ ವರ್ಣಚಿತ್ರಗಳು, ತೈಲವರ್ಣ ಚಿತ್ರಗಳು ಇರುವ Louvre ಆರ್ಟ್ ಗ್ಯಾಲರಿಗೆ ಹೋದೆವು. ಈ ಗ್ಯಾಲರಿಯ ಪ್ರವೇಶದಲ್ಲಿ ಎರಡು ಗಾಜಿನ ಪಿರಮಿಡ್‌ಗಳಿವೆ. ಒಂದು ನೇರ ಇನ್ನೊಂದು ತಲೆಕೆಳಗು (Inverted). ಗ್ಯಾಲರಿಯನ್ನು 3 ಭಾಗಗಳಾಗಿ ವಿಂಗಡಿಸಲಾಗಿದೆ. Sully, Richelieu & Denon. Denon ಭಾಗದಲ್ಲಿ ಮೊನಾಲಿಸಳ ಚಿತ್ರ ಬುಲೆಟ್ ಪ್ರೂಫ್ ಕೇಸ್‌ನಲ್ಲಿ ಸುರಕ್ಷಿತವಾಗಿ ಇಡಲಾಗಿದೆ. ವಿಪರೀತ ಜನಜಂಗುಳಿ. ನಂತರ Versailles ಅರಮನೆ ನೋಡಲು ಹೋದೆವು. ಈ ಅರಮನೆಯಲ್ಲಿ ಅತ್ಯುತ್ತಮ ರಾಜಮನೆತನದ ಕಲಾಕೃತಿಗಳು, (ಛಾವಣಿಯಲ್ಲೂ) ಅತ್ಯದ್ಭುತ ಕಲಾಕೃತಿಗಳು, ರಾಜಮನೆತನದ ಸಾಲಂಕೃತ ಕೋಣೆಗಳು, ದರ್ಬಾರ್ ಹಾಲ್ ಬಹಳ ಕುಶಲತೆಯಿಂದ ರಚಿಸಿದೆ. Opera Hall, Chapel, Hall of Mirrors ಎಲ್ಲವೂ ಒಂದಕ್ಕಿಂತ ಒಂದು ಆಶ್ಚರ್ಯದ ಕುರುಹು. ಈ ಅರಮನೆಗೆ ಅಂಟಿಕೊಂಡ ದೊಡ್ಡ ಕೈತೋಟವಂತೂ ಪುರಸೊತ್ತಾಗಿ ಶೃಂಗಾರಪೂರ್ವಕವಾಗಿ ಬೆಳೆಸಿದ್ದಾರೆ. ರಾತ್ರಿ ಐಫೆಲ್ ಟವರ್ ಪೂರ್ತಿ ನೋಡಲು ಹೋದೆವು. ಮೂರನೇ ಅಂತಸ್ತಿನವರೆಗೆ ಮಾತ್ರ ದರ್ಶಕರಿಗೆ ಪ್ರವೇಶ. ಮೂರನೇ ಅಂತಸ್ತಿನಿಂದ ಝಗಮಗಿಸುವ ಪ್ಯಾರಿಸ್ ನೋಡಿದಾಗ ಇದಕ್ಕಿಂತ ಬೇರೆ ಸ್ವರ್ಗವಿದೆಯೇ ಎನ್ನಿಸಿತು.

**13ನೇ ದಿನ ಮೇ 7**

Garu Du Nard ಸ್ಟೇಷನ್‌ನಿಂದ ಪ್ರಪಂಚದ ಅತ್ಯಂತ ವೇಗದ ಟ್ರೇನ್‌ಗಳಲ್ಲಿ ಒಂದಾದ Eurostar ಇಂಗ್ಲೀಷ್ ಚಾನಲ್‌ನ ಕೆಳಗಡೆಯಿಂದ ಹೋಗಿ ಲಂಡನ್ ತಲುಪುವ ಈ ಟ್ರೇನ್‌ನಲ್ಲಿ ಕುಳಿತು 300 ಕಿ.ಮೀ/ಗಂಟೆಗೆ 700 ಕಿ.ಮೀ ದೂರವನ್ನು 2.15 ಗಂಟೆಗಳಲ್ಲಿ ತಲುಪಿದೆವು ಇಲ್ಲೆಲ್ಲಾ immigration ತಪಾಸಣೆ ಬಹಳ ಕಠಿಣ. Madame Tussaud ಮೇಣದ ಮ್ಯೂಸಿಯಂ ನೋಡಲು ಹೋದೆವು. ಗಾಂಧೀಜಿಯಿಂದ ಹಿಡಿದು ಇತ್ತೀಚಿನ ಬಾಲಿವುಡ್ ನಾಯಕ ನಾಯಕಿಯರ ಮೇಣದಲ್ಲಿ ತದ್ರೂಪದ ಪ್ರತಿಮೆಗಳನ್ನು ಮಾಡಿ ನಿಲ್ಲಿಸಿದ್ದಾರೆ. ಪ್ರಪಂಚದ ನಾನಾ ಕಡೆಯ ಪ್ರಸಿದ್ಧ ವ್ಯಕ್ತಿಗಳ ಲೈಫ್



ಸೈಜ್ ಮೇಣದ ಬೊಂಬೆಗಳಿವೆ.

ನಂತರ ಎಲ್ಲರೂ ಒಟ್ಟುಗೂಡಿ London Eye–ಥೇಮ್ಸ್ ನದಿಯ ಮೇಲಿಂದ 450 ಅಡಿ ಎತ್ತರಕ್ಕೆ ಹೋಗುವ ಪ್ರಪಂಚದಲ್ಲಿ ಒಂದಾದ Observation Wheel. (Giant Wheel ನಂತೆ). ಒಂದು ಸುತ್ತಿಗೆ ಅರ್ಧ ಗಂಟೆ ಹಿಡಿಯುತ್ತೆ. ನಾವೆಲ್ಲಾ Capsul ಗಳಲ್ಲಿ ಕುಳಿತು ಲಂಡನ್ನನ್ನು ವಿಹಂಗಮ ನೋಟದಲ್ಲಿ ವೀಕ್ಷಿಸಿದೆವು. ನಿಜಕ್ಕೂ ಅದ್ಭುತ ನೋಟ.

**14ನೇ ದಿನ ಮೇ 8**

ಬಕಿಂಗ್‌ಹ್ಯಾಮ್ ಅರಮನೆಯ ಪರಿಧಿಯಲ್ಲಿ ಆಗುವ 'Change of Guards' ಬಹಳ ಗಂಭೀರವಾದ, ಅಷ್ಟೇ ಘನವಾದ ನೋಟ. Big Ben, West Minister ABBEY, Trafalgar, Square, Hyde Park ರಾಯಲ್ ಆಲ್ಬರ್ಟ್ ಹಾಲ್ ಎಲ್ಲವು ಮೆದುಳನ್ನು ಕಲಕುವಷ್ಟು ಅದ್ಭುತವಾಗಿತ್ತು. ಲಂಡನ್ ಬುದ್ಧಿಜೀವಿಗಳ, ಚಿತ್ರಕಲಾಕಾರರ, ಬರಹಗಾರರ, ಕವಿಗಳ, ನಾಟಕಕಾರರ, ದೊಡ್ಡ ದೊಡ್ಡ ಶ್ರೀಮಂತರ, ವ್ಯಾಪಾರಸ್ಥರ ಆಗರವಾಗಿದೆ. ಥೇಮ್ಸ್ ನದಿಯ ಟ್ವಿನ್ ಟವರ್, ಟವರ್ ಆಫ್ ಲಂಡನ್‌ನಲ್ಲಿ ಕೊಹಿನೂರು ವಜ್ರದೊಂದಿಗೆ ರಾಣಿಯರ ಕಿರೀಟಗಳು, ವಜ್ರ ವೈಢೂರ್ಯದ ಒಡವೆಗಳು ಏನೆಲ್ಲಾ ಇದೆ ಲಂಡನ್‌ನಲ್ಲಿ. ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ, ಇಂಪಿರಿಯಲ್ ಕಾಲೇಜ್ ಆಫ್ ಸೈನ್ಸ್ (ರಾಜೀವ್‌ಗಾಂಧಿ ಓದಿದ ಸ್ಥಳ) ಇದೆಲ್ಲಾ ಹೇಳಿ ಕೇಳಿದ್ದು. ಷೇಕ್ಸ್‌ಪಿಯರ್, ಕೀಟ್ಸ್, ವರ್ಡ್ಸ್‌ವರ್ತ್, Byron Drydon ನಾಟಕಕಾರರು, ಕವಿಗಳು ವಿದ್ವಾಂಸರು ಈ ಲಂಡನ್ನಿನಲ್ಲಿ ತಮ್ಮನ್ನು ಜೋಡಿಸಿಕೊಂಡಿದ್ದಾರೆ. Mecca of Cricket-Lords Cricket Stadium ನಮ್ಮ ಪ್ರವಾಸದ ಕೊನೆಯ ಊಟ ಈ ಸ್ಟೇಡಿಯಂನಲ್ಲೇ ಆದದ್ದು ನಿಜಕ್ಕೂ ಅತಿಶಯವೇ ಸರಿ. ಪ್ರಸಿದ್ಧ ಲಾರ್ಡ್ಸ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಮ್ಮ ತಂಡದ ಅನೇಕ ಪ್ರವಾಸಿಗಳ ಜನ್ಮದಿನ ಒಟ್ಟಿಗೇ ಇದ್ದಕಾರಣ ಎಲ್ಲರೂ ಸೇರಿ ದೊಡ್ಡ ಕೇಕ್ ಕತ್ತರಿಸಿ ಹ್ಯಾಪಿ ಬರ್ತ್‌ಡೇ ಹಾಡು ಹೇಳಿ ನಮ್ಮ ಪ್ರವಾಸದ ಕೊನೆಯ ಸಂಜೆಯನ್ನು ಚಿರಸ್ಮರಣೀಯವಾಗಿ ಕಳೆದೆವು. ಕೊನೆಯದಾಗಿ ನಾವೆಲ್ಲಾ ಸೇರಿ ನಮ್ಮ ಪ್ರವಾಸದ ನಿರ್ವಾಹಕ ಸಹೃದಯ, ಹಸನ್ಮುಖಿ ಪ್ರಫುಲ್ಲ ಗಂಗೆರ್ಡೆ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಲು ಪುಟ್ಟ ಸನ್ನಾಹ ಮಾಡಿಕೊಂಡು, ಅನೇಕರು ಗದ್ಗದಿತರಾಗಿ ಹಾಡು ಕಟ್ಟಿ ಹಾಡಿ, ಪುಟ್ಟ ಕವಿತೆಗಳು, ಶಾಯರಿ, ಒಂದೆರಡು ಮಾತುಗಳು ಆಡಿ ಕೇಕ್ ಕತ್ತರಿಸಿದಾಗ ಪ್ರಫುಲ್ಲನ ಕಣ್ಣುಗಳಲ್ಲಿ ಅಶ್ರುಧಾರೆ. . .ಎಲ್ಲರಿಗೂ ಮನಸ್ಸು ತುಂಬಿ ಬಂದಿತ್ತು. ನಮಗೆ ಮನೆಗೆ ಹಿಂತಿರುಗುವೆವೆಂಬ ಖುಷಿಗಿಂತ, ಇಷ್ಟು ಬೇಗ ಮುಗಿದು ಹೋಯಿತೇ ಎನ್ನಿಸಿತ್ತು. ನಿಶ್ಚಿಂತೆಯಾಗಿ ಹಕ್ಕಿಗಳಂತೆ ಸ್ವೇಚ್ಛೆಯಾಗಿ ತಿರುಗಾಡುತ್ತಾ ಕಳೆದ ಹದಿನೈದು ದಿನಗಳು ಕ್ಷಣಗಳಂತೆ ಮುಗಿದು ಹೋದವು. ಹಿರಿಯರಾದ ಬಿ.ಕೆ. ರಾವ್ ಅವರು ನಮ್ಮೆಲ್ಲ ನೆನಪಿನ ಕಾಣಿಕೆಯನ್ನು ಪ್ರಫುಲ್ಲನಿಗೆ ಆಶೀರ್ವದಿಸಿ ಕೊಟ್ಟರು. ಅಲ್ಲಿಂದ ಹೋಟೆಲ್‌ಗೆ ಹಿಂತಿರುಗಿ, ಭಾರತಕ್ಕೆ ಮರಳುವ ತಯಾರಿಗೆ ಏರ್ಪಾಡು ಮಾಡಿಕೊಂಡು ಮಲಗಿದೆವು.

**15ನೇ ದಿನ ಮೇ 9**

ಭಾರತಕ್ಕೆ ಹಾರುವ ಏರೋಪ್ಲೇನ್ ಲಂಡನ್ನನ್ನು 8.40ಕ್ಕೆ ಬಿಡುವುದಾದ ಕಾರಣ, ನಾವೆಲ್ಲ 5 ಗಂಟೆಗೆ ಎದ್ದು ಸಾಮಾನಿನೊಡನೆ, ಹೋಟೆಲ್ ಕಟ್ಟಿಕೊಟ್ಟ ಬೆಳಗಿನ ತಿಂಡಿಯನ್ನು ತೆಗೆದುಕೊಂಡು ಲಂಡನ್ ಏರ್ ಪೋರ್ಟ್‌ಗೆ ಬಂದು



ಆಗಬೇಕಾದ ತಪಾಸಣೆ ಶಿಸ್ತು ನಿಯಮ ಪಾಲಿಸಿ 8.40ಕ್ಕೆ ವಾಯುಯಾನದಲ್ಲಿ ಹಾರಿ ನಮ್ಮ ರಾಜಧಾನಿ ದೆಹಲಿಗೆ ರಾತ್ರಿ ಸರಿಯಾಗಿ 12 ಗಂಟೆಗೆ ತಲುಪಿ, ಅವರವರ ಮನೆಯವರು ಸ್ವಾಗತಿಸಲು ಬಂದಿದ್ದರಿಂದ ಆರಾಮವಾಗಿ ಮನೆ ಸೇರಿಕೊಂಡೆವು.


ಪರಬ್ರಹ್ಮನ ಸೃಷ್ಟಿ, ಪ್ರಕೃತಿ ಮಾತೆಯ ವರದಾಯಕ ಸೌಂದರ್ಯ, ಮಾನವನ ಬುದ್ಧಿವಂತಿಕೆಯ ತಾಂತ್ರಿಕ ಯಾಂತ್ರಿಕ ರಚನೆಗಳು, ಈ ಮೂರರ ಸಂಗಮ ಸೇರಿ ಈ ಭೂಮಂಡಲ ಒಂದು ಅದ್ಭುತ ಸುಂದರ ಪರಿಸರವಾಗಿದೆ. ಅವುಗಳನ್ನು ಉಳಿಸಿಕೊಂಡು ಆನಂದಿಸುವ ಶಕ್ತಿಯೂ ಮಾನವನಲ್ಲಿದೆ. ಸದುಪಯೋಗದಿಂದ ರಕ್ಷಿಸಿ ಹೆಮ್ಮೆ ಪಡುವುದು ನಮ್ಮ ಕೈಯಲ್ಲಿದೆ.

■ ಡಾ. ಅಹಲ್ಯಾ ಚಿಂತಾಮಣಿ

## ಸವಿ ನೋಟ

ಸಾಗರದ ತೀರದಲಿ
ತಂಪಾದ ಸೊಂಪಾದ ಸೂರ್ಯನ
ಸೌಂದರ್ಯದ ಸಂಜೆಗೆಂಪಲಿ
ಅಹ್ಲಾದಿಸುತ ತೂಗ್ಯಾವ
ತೆಂಗಿನೆರೆಗಳು ತಂಗಾಳಿಯ
ಜೊತೆ ಸಲ್ಲಾಪದೊಂದಿಗೆ
ಹಕ್ಕಿಯು ಸಾಲಾಗಿ ಕಂಗೊಳಿಸುತ
ಒಗ್ಗೂಡಿ ತನ್ನ ಗೂಡಿಗೆ
ಮರಳುವ ಸಮಯ
ಬವಣೆಗೆಟ್ಟ ಅಂಬಿಗ-ಅಬ್ಬಾ
ಎಂದು ನಿಟ್ಟುಸಿರುಗೈಯ್ದು ತನ್ನ
ಹಟ್ಟಿಗೆ ಮರಳುವ ತರಾತುರಿ
ಒಂದೆಡೆ ಭೋರ್ಗರೆವ ಅಲೆಯು
ಬಂಡೆಗಲ್ಲಿಗೆ ಅಪ್ಪಳಿಸುವ ತವಕ
ಇನ್ನೊಂದೆಡೆ ಆರ್ಭಟಿಸುವ
ಅಲೆಯು ತೀರಕ್ಕೆ ತಲುಪಿ
ಶಾಂತನಾಗುವ ತರಾತುರಿ
ಸ್ವಗತ ಕೋರಿವೆ
ಎನ್ನ ಮನದಲಿಕೆಗೆ
ಸುತ್ತಲಿಹ ಮೌನದಲಿ
ನೋಟ ಹರಿಸಿದಾಗ
ಮಧುರ ಸ್ವಂದನಾವಲೋಕನ
ಎನ್ನಯ ಚಿತ್ತ ತುಂಬ
ಹರುಷದ ಸುರಿಮಳೆ
ಆ ರಮಣೀಯ ಸೊಗಸಾದ
ನೋಟ ಚಿಂಕದಿ ವಯ್ಯಾರದಲಿ
ನನ್ನನ್ನೇ ಅರಸುತ್ತಿದ್ದಿಯಲ್ಲವೇ?
ಎಂದು ಕೇಳಿದಾಗ,
ಚಕಿತಗೊಂಡ ಆ ನನ್ನ
ವಿಹಂಗಮ ಮನ
ಆನಂದ ಪರವಶದಲಿ
ಹಕ್ಕಿಯಂತೆ ಬಾನಲ್ಲಿ ಹಾರಾಡಿತು.

■ ಜಯಶ್ರೀ ಬಸವರಾಜು



## ಬೇಸಿಗೆ ರಜೆ

ಬೇಸಿಗೆ ರಜೆ ಎಂದರೆ ಎಲ್ಲರಿಗೂ ಬಹಳ ಖುಷಿಯಾಗುತ್ತದೆ. ಆದರೆ ಈ ಸಲದ ಬೇಸಿಗೆ ರಜೆ ಮಾತ್ರ ನಮಗೆ ಬಹಳ ವಿಶೇಷವಾಗಿತ್ತು.

ನಾನು ಮತ್ತು ನಮ್ಮ ಕುಟುಂಬದವರೆಲ್ಲರೂ ಸೇರಿ ಮೇ 14ರಂದು ಬೆಳಗಾಂನ ಮುರಗೋಡ್ ಗ್ರಾಮಕ್ಕೆ ತೆರಳಿದೆವು. ಮುರುಗೋಡ್ ಗ್ರಾಮ ಬೆಳಗಾಂನಿಂದ ಸುಮಾರು 20–25 ಕಿ.ಮೀ. ದೂರದಲ್ಲಿದೆ.

17.05.2011 ಬುದ್ಧ ಪೂರ್ಣಿಮ ದಿನದಂದು ಪ್ರಸಿದ್ಧ ಮೂರ್ತಿಕಾರ ಪದ್ಮಶ್ರೀ ರಾಮ್ ವಿ. ಸುತಾರ್‌ರವರು ರಚಿಸಿದ ಭಗವಾನ್ ಬುದ್ಧ, ಬಾಬಾಸಾಹೇಬ ಅಂಬೇಡ್ಕರ್ ಹಾಗೂ ಬಸವೇಶ್ವರರ ತ್ರಿಮೂರ್ತಿಯನ್ನು ಭೀಮರಾವ್ ಮುರಗೋಡರು ಮುರಗೋಡ್ ಗ್ರಾಮದ ಮಂದಿರದಲ್ಲಿ ಸ್ಥಾಪಿಸಿದರು. ಮಾತೆ ಮಹಾದೇವಿ ಅವರು ಈ ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿದ್ದರು. ಇದೇ ಸಂದರ್ಭದಲ್ಲಿ ಪ್ರತಿ ವರ್ಷದಂತೆ ಬಡ ಹುಡುಗ, ಹುಡುಗಿಯ ವಿವಾಹವನ್ನು ನಡೆಸಲಾಯಿತು.



ಬೆಂಗಳೂರಿನ ಸಹಕಾರ ನಗರದಲ್ಲಿನ ಗುಡಿಸಲಿನ ಬಡ ಮಕ್ಕಳೊಂದಿಗೆ ಮುರಗೋಡ ಕುಟುಂಬ

ಇದೇ ಮೇ 28 ಮತ್ತೊಂದು ವಿಶೇಷ ದಿನವಾಗಿತ್ತು. ನನ್ನ ಕಿರಿಯ ಮಗಳು ನೃತ್ಯಳ ಮೊದಲನೆಯ ಜನ್ಮ ದಿನವನ್ನು ಬೆಂಗಳೂರಿನಲ್ಲಿ ಬಹಳ ಅದ್ದೂರಿಯಾಗಿ ಆಚರಿಸಿದೆವು. ಬೆಂಗಳೂರಿನ ಸಹಕಾರ ನಗರದಲ್ಲಿನ ಗುಡಿಸಲಿನಲ್ಲಿ ಬಡ ಮಕ್ಕಳ ಜೊತೆಗೆ ಕೇಕ್ ಕಟ್ ಮಾಡಲಾಯಿತು. ಮಕ್ಕಳಿಗೆಲ್ಲಾ ಪುಸ್ತಕ, ಬಟ್ಟೆ ಹಾಗೂ ಸಿಹಿ ತಿನಿಸನ್ನು ನೀಡಲಾಯಿತು. ಒಟ್ಟಾರೆ ಬೆಳಗಾಂ, ಮುರಗೋಡ್, ಸೊಗಲ, ಫಾಲ್ಸ್, (ಮುರಗೋಡ್ ಗ್ರಾಮದಿಂದ 10ಕಿ.ಮೀ) ಧಾರವಾಡ, ಹುಬ್ಬಳ್ಳಿ, ಬೆಂಗಳೂರು ಹಾಗೂ ಹಾಸನ ಈ ಎಲ್ಲಾ ಊರಿಗೆ ಹೋಗಿ ಬೇಸಿಗೆ ರಜೆ ಮುಗಿಸಿ ಜೂನ್ 25ಕ್ಕೆ ದೆಹಲಿಗೆ ಬಂದೆವು.

■ ಸುಮಿತಾನಂದ್, ನವದೆಹಲಿ

# Saujanya Printing Press

**A HOUSE OF QUALITY PRINTING**

**C-95, Okhla Industrial Area, Phase-I,**
**New Delhi - 110 020**
**Phone : 26815778, 41611143**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**



**GENPACT**

## A SKY-BOUND OPPORTUNITY
for those who have gained a command over spoken Kannada.



Genpact, a global leader in business process management builds rewarding careers for every individual by investing in their personal and professional development. We believe in creating a work environment based on the highest standards of excellence and integrity that evokes deep feelings of pride and belonging.

An extraordinary career awaits you at Genpact in a day shift, voice based inbound insurance renewal process.

**Eligibility Criteria**

- Graduates /Fresher's with command over spoken Kannada
- Basic Computer Skills
- Basic understanding of written & spoken English

**Walk-In**
Walk in between 10:00 AM to 3:00 PM, Monday to Friday with your detailed resume & two passport size photographs at

Genpact: Delhi IT Park, 8th Floor, Shastri Park, Delhi – 110092, Near Shastri Park Metro Station

**Contact: Aripta Sahni/Harsh Dhawan (9873184171)**

Delhi Karnataka Sangha's Abhimatha Monthly,
Aug -2011, Price Rs.1/-  RNI Regn. No. 53405/91, DL-SW-15/4016/10-11-12
Printout Date : Aug 8th / 9th, Postal Date :10th / 11th, Total Pages-24




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 41611143,